ಸಂಪುಟ: 13 Volume | ಸಂಚಿಕೆ: 351 Issue | ಪುಟಗಳು 08 Pages | ಸೋಮವಾರ 16 ಮಾರ್ಚ್ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಪ್ರೀತಿಯಿಂದಾಡಿದ ಪ್ರತಿಯೊಂದು ನುಡಿಯು ಸಿಡಿಲಿನಂತೆ ಪರಿಣಾಮಕಾರಿ.
–ಸ್ವಾಮಿ ವಿವೇಕಾನಂದ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ
ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ

ನೆಮ್ಮದಿಯ ಜೀವನಕ್ಕೆ ವಾತ್ಸಲ್ಯಮನೆ ಆಸರೆ 6
ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ರಕ್ಷಿಸಬೇಕು 7
ಪತ್ರಿಕಾ ವರದಿಯಿಂದ ಎಚ್ಚೆತ್ತ ಅಧಿಕಾರಿಗಳು 8

ಮಲ್ಲಮ್ಮ ನುಡಿ

**ಯುಗಾದಿ ವಿಶೇಷಾಂಕ- 2026**

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

**ಲೇಖಕರು ಪಾಲಿಸಬೇಕಾದ ಸೂಚನೆಗಳು**

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com

## ಸರ್ವಧರ್ಮ ಸಮನ್ವಯತೆಯ ಇಫ್ತಾರ್

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಪವಿತ್ರ ರಂಜಾನ್ ಮಾಸದ ಅಂಗವಾಗಿ ಬೀದರ ನಗರದಲ್ಲಿ ಪೌರಾಡಳಿತ ಹಾಗೂ ಹಜ್ ಸಚಿವರಾದ ಶ್ರೀ ರಹಿಂ ಖಾನ್ ಅವರು ಆಯೋಜಿಸಿದ ಸೌಹಾರ್ದ ಇಫ್ತಾರ್ ಕೂಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಭಾಗವಹಿಸಿದರು.

ಈ ಸಂದರ್ಭದಲ್ಲಿ ವಿವಿಧ ಸಮುದಾಯಗಳ ಮುಖಂಡರು, ಜನಪ್ರತಿನಿಧಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದು, ಪರಸ್ಪರ ಸೌಹಾರ್ದತೆ ಮತ್ತು ಸಹೋದರತ್ವದ ಸಂದೇಶ ಹಂಚಿಕೊಂಡರು. ಈ ವೇಳೆ ಮಾತನಾಡಿದ ಸಚಿವ ಶ್ರೀ ಈಶ್ವರ ಖಂಡ್ರೆ ಅವರು, ರಂಜಾನ್ ಪವಿತ್ರ ಮಾಸವು ಶಾಂತಿ, ಸಹಾನುಭೂತಿ ಮತ್ತು ಮಾನವೀಯತೆಯ ಮೌಲ್ಯಗಳನ್ನು ಸಾರುತ್ತದೆ.



ಇಂತಹ ಸೌಹಾರ್ದ ಇಫ್ತಾರ್ ಕೂಟಗಳು ಸಮಾಜದಲ್ಲಿ ಐಕ್ಯತೆ ಮತ್ತು ಸಹಬಾಳ್ವೆಯನ್ನು ಬಲಪಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದು ಹೇಳಿದರು.

## ಕಾಂಗ್ರೆಸ್ ಶಾಸಕರಿಗೆ ಲಂಚದ ಯತ್ನ, ಸೆರೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಬಿಜೆಪಿಯ ಆಪರೇಷನ್ ಕಮಲ ಆತಂಕದ ಭಾಗವಾಗಿ ಬಿಡದಿ ರೆಸಾರ್ಟ್‌ನಲ್ಲಿರುವ ಒಡಿಶಾ ಕಾಂಗ್ರೆಸ್ ಶಾಸಕರಿಗೆ ಲಂಚ ನೀಡಲು ಯತ್ನಿಸಿದ ಆರೋಪದ ಮೇಲೆ ಇಬ್ಬರನ್ನು ಬಂಧಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

ಬಿಜೆಪಿ ಆಪರೇಷನ್ ಕಮಲ ಮಾಡಲು ಯೋಜನೆ ರೂಪಿಸಿದೆ. ಮಾರ್ಚ್ 16 ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೆ ಮುಂಚಿತವಾಗಿ



ಇಲ್ಲಿಗೆ ಕರೆತರಲಾದ ಒಡಿಶಾ ಶಾಸಕರಿಗೆ ತಲಾ ಐದು ಕೋಟಿ ರೂ.ಗಳನ್ನು ನೀಡಲಾಗುತ್ತಿದೆ ಎಂದು ಆರೋಪಿಸಿದ್ದಾರೆ. ಎಂಟು ಶಾಸಕರು ಮತ್ತು ಒಡಿಶಾ ಕಾಂಗ್ರೆಸ್ ಘಟಕದ ಕೆಲವು ಪದಾಧಿಕಾರಿಗಳು ರೆಸಾರ್ಟ್‌ನಲ್ಲಿ ಮೊಕ್ಕಾಂ ಹೂಡಿದ್ದಾರೆ. ಒಡಿಶಾದಲ್ಲಿ ನಡೆಯಲಿರುವ ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಡ್ಡ ಮತದಾನದ ಭೀತಿ ಹೆಚ್ಚಾಗಿರುವ ನಡುವೆ ಕಾಂಗ್ರೆಸ್ ತನ್ನ ಶಾಸಕರನ್ನು ಸುರಕ್ಷಿತವಾಗಿ ಇರಿಸಲು ರೆಸಾರ್ಟ್ ರಾಜಕೀಯಕ್ಕೆ ಮುಂದಾಗಿದೆ.

# ಸಂಪುಟ ಹೈಗೂ ಸಂಕಟ

### ಸಿಎಂಗೆ ಪುನಾರಚನೆ ತಪನ | ಕಾಂಗ್ರೆಸ್‌ನ ಹಿರಿಯ ಶಾಸಕರಿಗೆ ಚಿಗುರಿದ ಕನಸು | ವರಿಷ್ಠರಿಗೆ ಬಿಸಿ ತುಪ್ಪ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕುರ್ಚಿ ಕದನದ ನಡುವೆ ಇದೀಗ ಕಾಂಗ್ರೆಸ್ ಶಾಸಕರಿಗೆ ಮಂತ್ರಿಗಿರಿಯ ಕನಸು ಚಿಗುರಿದೆ. ಹಲವು ಸೋಮಾರಿ ಹಿರಿಯ ಸಚಿವರಿಗೆ ತಲೆದಂಡವಾಗಲಿದೆ ಎಂದು ಮೂಲಗಳು ಖಚಿತ ಪಡಿಸಿವೆ. ಏತನ್ಮಧ್ಯೆ ವಿಧಾನ ಮಂಡಲದ ಅಧಿವೇಶನದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ಭೇಟಿ ನೀಡಲಿದ್ದಾರೆ. ಸಚಿವ ಸಂಪುಟ ಪುನರ್ರಚನೆ ಕುರಿತು ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ.

**ಭೇಟಿ ಸಾಧ್ಯವಾಗಿರಲಿಲ್ಲ:** ಸಾಮಾನ್ಯವಾಗಿ ಸಾಂಪ್ರದಾಯಿಕವಾಗಿ ಬಜೆಟ್ ಮಂಡನೆ ಬಳಿಕ ಅಥವಾ ಅದರ ಅಂಗೀಕಾರ ನಂತರ ಹಣಕಾಸು ಸಚಿವರು, ದೆಹಲಿಗೆ ಭೇಟಿ ನೀಡಿ ಹೈಕಮಾಂಡ್‌ನ ನಾಯಕರಿಗೆ ಬಜೆಟ್‌ನಲ್ಲಿರುವ ಅಂಶಗಳ ಕುರಿತು ಮಾಹಿತಿ ನೀಡಿ ಬರುವುದು ವಾಡಿಕೆ. ಆದರೆ ಬೇರೆ ಬೇರೆ ಕಾರಣಾಂರಗಳಿಂದ ಸಿದ್ದರಾಮಯ್ಯ ಅವರಿಗೆ ಸಮಯಾವಕಾಶದ ಅಭಾವದಿಂದಾಗಿ ದೆಹಲಿಗೆ ಭೇಟಿ ನೀಡಲು ಸಾಧ್ಯವಾಗಿಲ್ಲ. ಈ ಹಿನ್ನೆಲೆಯಲ್ಲಿ ಅಧಿವೇಶನದ ಬಳಿಕ ಸಿದ್ದರಾಮಯ್ಯ ದೆಹಲಿಗೆ ತೆರಳಲಿದ್ದಾರೆ ಎಂದು ಮೂಲಗಳು ಖಚಿತ ಪಡಿಸಿವೆ.

#### ಸಿಎಂಗೆ ಇಷ್ಟ, ಡಿಸಿಎಂ ಕಷ್ಟ

12ಕ್ಕೂ ಹೆಚ್ಚು ಮಂದಿ ಸಚಿವರನ್ನು ಸಂಪುಟದಿಂದ ಕೈಬಿಟ್ಟು, ಸಂಪುಟ ಪುನರ್‌ರಚಿಸುವ ಇರಾದೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೊಂದಿರುವುದು ವಿಶೇಷ ಬೆಳವಣಿಗೆ. ವಿಶೇಷವೆಂದರೆ ಇದಕ್ಕೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಅವರು ಅಡ್ಡಗಾಲಾಗಿದ್ದು ನಾಯಕತ್ವ ವಿಷಯ ಇತ್ಯರ್ಥಗೊಳ್ಳದವರೆಗೂ ಸಂಪುಟ ಪುನರ್‌ರಚನೆಯಾಗುವುದು ಬೇಡ ಎಂದು ಪಟ್ಟು ಹಿಡಿದಿರುವುದಾಗಿ ತಿಳಿದು ಬಂದಿದೆ.

#### ಹಿರಿಯ ಶಾಸಕರ ಆಕ್ಷೇಪ

ಡಿಸಿಎಂ ಡಿಕೆಶಿ ತಂತ್ರಕ್ಕೆ ಪ್ರತಿಯಾಗಿ, ಸಿದ್ದರಾಮಯ್ಯಅವರ ಬಣ, ಹಿರಿಯ ಶಾಸಕರ ಮನಗೆಲ್ಲಲು ಯತ್ನಸಿದೆ. ಕಾಂಗ್ರೆಸ್‌ನಲ್ಲಿಯೇ ಹಿರಿಯ ಶಾಸಕರ ಒಂದು ಬಣ ಸಭೆ ನಡೆಸಿ, ಸಂಪುಟ ಪುನರ್‌ರಚನೆ ಮಾಡುವಂತೆ ಒತ್ತಡ ಹೇರಿದೆ. ತಮಗೂ ಸಂಪುಟದಲ್ಲಿ ಅವಕಾಶ ನೀಡಬೇಕು. ಮೂರಕ್ಕಿಂತಲೂ ಹೆಚ್ಚು ಬಾರಿ ಗೆದ್ದಿರುವ ಶಾಸಕರನ್ನು ಕಡೆಗಣಿಸಿರುವುದು ಸರಿಯಲ್ಲ ಎಂದು ಹಿರಿಯ ಶಾಸಕ ಬೇಳೂರು ಸುದರ್ಶನ್ ಬಣ ಆಕ್ಷೇಸಿದೆ.



#### ಹೈಕಮಾಂಡ್ ಮೇಲೆ ಒತ್ತಡ..!

ರಾಜ್ಯ ಕಾಂಗ್ರೆಸ್‌ನಲ್ಲಿ ಎದ್ದಿರುವ ನಾಯಕತ್ವದ ಬದಲಾವಣೆಯ ಗೊಂದಲದಿಂದ ಶಾಶ್ವತ ಪರಿಹಾರ ಕಂಡುಕೊಳ್ಳುವುದಕ್ಕೆ ಸಿಎಂ ಸಿದ್ದರಾಮಯ್ಯ ಸಂಪುಟ ಪುನಾರಚನೆಗೆ ಕೈ ಹಾಕಿದ್ದು ವಿಶೇಷ. ಸಂಪುಟ ಪುನಾರಚನೆಯಾದರೆ, ಮುಂದಿನ ಅವಧಿಗೆ ನಾಯಕತ್ವದ ಗೊಂದಲಗಳು ಚರ್ಚೆಯಾಗದು. ಈ ಕಾರಣಕ್ಕೆ ಹಿರಿಯ ಶಾಸಕರನ್ನು ಬಿಟ್ಟು ಸಿಎಂ ಹೈಕಮಾಂಡ್ ಮೇಲೆ ಒತ್ತಡ ಹೇರುವ ತಂತ್ರ ನಡೆಸಿರುವುದು ಚರ್ಚೆಗೆ ಗ್ರಾಸವಾಗಿದೆ.

#### ಹಾಲುಜೇನಿನ ಬಾಂಧವ್ಯ ಆದರೆ..!

ಬಜೆಟ್ ಅಧಿವೇಶನದ ಬಳಿಕ ಹಿರಿಯ ಶಾಸಕರು ದೆಹಲಿಗೆ ತೆರಳಿ, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲಿದ್ದಾರೆ. ಇದುವರೆಗೂ ಹಾಲು–ಜೇನಿನಂತಿರುವ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಅವರ ರಾಜಕೀಯ ಬಾಂಧವ್ಯ ಬಜೆಟ್ ಅಧಿವೇಶನದ ಬಳಿಕ ಸ್ವರೂಪ ಬದಲಿಸುವ ಸಾಧ್ಯತೆ ಇದೆ. ಅದಕ್ಕೆ ಹಿರಿಯ ಶಾಸಕರು ಕೂಡ ಧ್ವನಿಗೂಡಿಸಲಿದ್ದಾರೆ.

#### ಬಲ್ಲವರಾರು ರಾಜಕೀಯ..?

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಅಸ್ಸಾಂ ಚುನಾವಣೆಯ ಉಸ್ತುವಾರಿಯಾಗಿದ್ದು, ಪದೇ ಪದೆ ದೆಹಲಿಗೆ ಭೇಟಿ ನೀಡಿ, ಹೈ ಕಮಾಂಡ್ ನಾಯಕರನ್ನು ಭೇಟಿ ಮಾಡುತ್ತಿದ್ದಾರೆ. ಆದರೆ ಅದು ಪ್ರಯೋಜನಕ್ಕೆ ಬರುತ್ತಿಲ್ಲ. ಕೊನೆಗೆ ಸಿದ್ದರಾಮಯ್ಯ ಅವರೇ ಅಖಾಡಕ್ಕಿಳಿಯುವ ಸಾಧ್ಯತೆಯಿರುವುದರಿಂದ ರಾಜಕೀಯ ಯಾವ ರೀತಿ ಬದಲಾಗಲಿದೆ ಎಂದು ಕಾದುನೋಡಬೇಕಿದೆ.



ಇಂದಿರಾ ಲಂಕೇಶ್ ಪ್ರಕಾಶನ ಕೊಂಡಜ್ಜಿ ಬಸಪ್ಪ ಸಭಾ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು "ಪಿ.ಲಂಕೇಶ್ ಅವರ ಟೀಕೆ ಟಿಪ್ಪಣಿ 3 ಭಾಗಗಳ ಪುಸ್ತಕ ಹಾಗೂ ಲಂಕೇಶರ ಕಥೆಗಳ ಆಡಿಯೊ ಬುಕ್ ಬಿಡುಗಡೆ ಮಾಡಿದರು. ನಟ ಪ್ರಕಾಶ್ ರೈ, ಸಾಹಿತಿ ನಟರಾಜ್ ಹುಳಿಯಾರ್, ಲೇಖಕಿ–ವಿಮರ್ಶಕಿ ಎಂ.ಎಸ್. ಆಶಾದೇವಿ, ಇಂದಿರಾ ಲಂಕೇಶ್, ಕವಿತಾ ಲಂಕೇಶ್, ಟಿ.ಎನ್.ಸೀತಾರಾಂ ಸೇರಿ ಗಣ್ಯರು ಉಪಸ್ಥಿತರಿದ್ದರು.

## ಮೂವರು ಇನ್ಸ್‌ಪೆಕ್ಟರ್‌ಗಳ ಸಾವು

**ಚಿತ್ರದುರ್ಗ:** ಜಿಲ್ಲೆಯ ಹೆಗ್ಗರೆ ಬಳಿ ನಡೆದ ಭೀಕರ ಅಪಘಾತದಲ್ಲಿ ಮೂವರು ರಿಸರ್ವ್ ಸಬ್ ಇನ್ಸ್‌ಪೆಕ್ಟರ್‌ಗಳು ಮೃತಪಟ್ಟಿದಾರೆ. ಇಬ್ಬರು ಗಾಯಗೊಂಡಿದ್ದಾರೆ. ಬೆಂಗಳೂರಿನಿಂದ ಬಳ್ಳಾರಿಗೆ ಪ್ರಯಾಣಿಸುತ್ತಿದ್ದ ಇವರ ಕಾರು, ಮುಂದೆ ಚಲಿಸುತ್ತಿದ್ದ ಲಾರಿಗೆ ಡಿಕ್ಕಿ ಹೊಡೆದಾಗ ಈ ದುರಂತ ಸಂಭವಿಸಿದೆ. ಅಮರೇಶ್, ಮಂಜುನಾಥ್ ಮತ್ತು ಸಚಿನ್ ಎಂಬ ಮೂವರು ಪೊಲೀಸ್ ಸಿಬ್ಬಂದಿ ಸ್ಥಳದಲ್ಲೇ ಮೃತರಾದರೆ, ಗಾಯಗೊಂಡ ಲಕ್ಷ್ಮಣ್ ಮತ್ತು ಈಶ್ವರ್ ಅವರನ್ನು ಚಿತ್ರದುರ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆ ಆಸ್ಪತ್ರೆಗೆ ಶಿಫ್ಟ್ ಮಾಡಲಾಗಿದೆ.

## ಹಬ್ಬದ ಪ್ರಯುಕ್ತ ವಿಶೇಷ ಬಸ್ ವ್ಯವಸ್ಥೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಯುಗಾದಿ ಮತ್ತು ರಂಜಾನ್ ಹಬ್ಬಗಳಿಗಾಗಿ ಕೆಎಸ್ಆರ್ಟಿಸಿ 2000 ವಿಶೇಷ ಬಸ್‌ಗಳನ್ನು ರಸ್ತೆಗಿಳಿಸಲು ನಿರ್ಧರಿಸಿದೆ ಎಂದು ಸಚಿವ ರಾಮಲಿಂಗಾರೆಡ್ಡಿ ಪ್ರಕಟಿಸಿದ್ದಾರೆ.

ಈ ಕುರಿತು ಮಾತನಾಡಿ, ಮಾ.18ರಿಂದ 20ರವರೆಗೆ ಬೆಂಗಳೂರಿನಿಂದ ವಿವಿಧ ಪ್ರದೇಶಗಳಿಗೆ, .22 ರಂದು ವಿವಿಧೆಡೆಯಿಂದ ಬೆಂಗಳೂರಿಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಕೆಂಪೇಗೌಡ ಬಸ್ ನಿಲ್ದಾಣ, ಮೈಸೂರು ರಸ್ತೆ ಬಸ್ ನಿಲ್ದಾಣಗಳಿಂದ ಬಸ್ಗಳು ಸಂಚರಿಸಲಿವೆ. 4 ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ.5ರಷ್ಟು ರಿಯಾಯಿತಿ ನೀಡಲಾಗುವುದು, ಹೋಗುವ–ಬರುವ ಪ್ರಯಾಣದ ಟಿಕೆಟ್ ಒಟ್ಟಿಗೆ ಕಾಯ್ದಿರಿಸಿದಾಗ ಬರುವ ಪ್ರಯಾಣ ದರದಲ್ಲಿ ಶೇ.10 ರಿಯಾಯಿತಿ ನೀಡಲಾಗುವುದು ಎಂದು ಕೆಎಸ್ಆರ್ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ವಿವರಿಸಿದ್ದಾರೆ. ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ದಾವಣಗೆರೆ, ಹುಬ್ಬಳ್ಳಿ ಸಹಿತ ವಿವಿಧೆಡೆ ವಿಶೇಷ ಬಸ್ಗಳು ಸಂಚರಿಸಲಿವೆ.

## ತುಘಲಕ್ ನೀತಿ, ದುರಾಡಳಿತಕ್ಕೆ ಸಾಕ್ಷಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ತುಘಲಕ್ ನೀತಿಗಳಿಂದಲೇ ದುರಾಡಳಿತಕ್ಕೆ ಹೆಸರಾಗಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಈ ಸಂಬಂಧ ತಮ ಎಕ್ಸ್‌ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ಇದರಿಂದ ಸರ್ಕಾರಿ ನೌಕರರಿಗೆ ಸಂಬಳ ಕೊಡುವುದಕ್ಕೂ ಸರ್ಕಾರದ ಬಳಿ ದುಡ್ಡಿಲ್ಲ. ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 51,000 ಅತಿಥಿ ಶಿಕ್ಷಕರು ಕಳೆದ 4 ತಿಂಗಳಿಂದ ಸಂಬಳ ಇಲ್ಲದೆ ಪರದಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಸಂಬಳ ಪಾವತಿಸದಿದ್ದರೆ ಬೀದಿಗಿಳಿದು ಹೋರಾಟ ಮಾಡಲು ಹೊರಟಿದ್ದಾರೆ. ಸ್ವಘೋಷಿತ ಆರ್ಥಿಕ ತಜ್ಞ ಮುಖ್ಯಮಂತ್ರಿ ಸಿದ್ದರಾಮಯ್ಯನವರ ದಿಕ್ಕೆಟ್ಟ ನೀತಿಗಳು ಸರ್ಕಾರಿ ನೌಕರರನ್ನು ಬೀದಿಗೆ ತಂದಿವೆ. ದಿವಾಳಿ ಸರ್ಕಾರ ತೊಲಗುವವರೆಗೂ ಕನ್ನಡಿಗರಿಗೆ ನೆಮದಿ ಇಲ್ಲ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ.

## ರೇವಣಸಿದ್ಧೇಶ್ವರ ದೇಗುಲ ಪ್ರಗತಿಗೆ ಬದ್ಧ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ಚೀನಕೇರಾ ಗ್ರಾಮದ ನಂದಿ ಬೆಟ್ಟದ ರೇವಣಸಿದ್ಧೇಶ್ವರ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಬದ್ಧ ಎಂದು ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್ ಪ್ರಕಟಿಸಿದ್ದಾರೆ.

ತಾಲೂಕಿನ ಚಿನಕೇರಾ ಗ್ರಾಮದ ನಂದಿ ಬೆಟ್ಟದಲ್ಲಿ ನಡೆದ ಜಗದ್ಗುರು ರೇವಣಸಿದ್ಧೇಶ್ವರರ 9ನೇ ಜಾತ್ರಾ ಮಹೋತ್ಸವ, ದೇವಸ್ಥಾನದ ನೂತನ ಕಟ್ಟಡ ನಿರ್ಮಾಣದ ಭೂಮಿ ಪೂಜೆ ಹಾಗೂ ಧರ್ಮ ಜಾಗೃತಿ ಸಮಾವೇಶ ಸಮಾರಂಭ ಉದ್ಘಾಟಿಸಿ ಮಾತನಾಡಿ, ಮಾಜಿ ಸಚಿವ ರಾಜಶೇಖರ ಪಾಟೀಲ್ ಅವರ ಅಧಿಕಾರದ ಅವಧಿಯಲ್ಲಿ ಚೀನಕೇರಾ ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ನೀಡಿದ್ದಾರೆ. ಅವರಂತೆಯೇ ನಾವು ಕೂಡಾ ಅವರ ಮಾರ್ಗದರ್ಶನದಲ್ಲಿ ಮುನ್ನಡೆದು ಚೀನಕೇರಾ ಗ್ರಾಮ ಹಾಗೂ ನಂದಿ ಬೆಟ್ಟದ ದೇವಸ್ಥಾನದ ಅಭಿವೃದ್ಧಿಗೆ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದ್ದಾರೆ.



**ಸಮಾರಂಭದಲ್ಲಿ ಪಾಲ್ಗೊಂಡಿದ್ದ ಗಣ್ಯರು**

ಬಸಯ್ಯ ಸ್ವಾಮಿ, ಬಸವರಾಜ ಬಿರಾದಾರ, ಶಿವಯ್ಯ ಸ್ವಾಮಿ, ಈರಪ್ಪ ಕಿಣಗಿ, ರಾಜಕುಮಾರ ಶಿರ್ಸೆಕರ್, ಭೀಮಶಾ ಘೋಡವಾಡಿ, ಹಣಮಂತ ಪಂಚಾಳ, ಚಂದ್ರಕಾಂತ ಸ್ವಾಮಿ, ಜಗದೀಶ ನನ್ನೂರೆ, ಬಂಡೆಪ್ಪ ರಾಂಪೂರೆ, ಉಮೇಶ ಹಣಮಂತ ವಾಡಿ ಸೇರಿ ಅನೇಕರಿದ್ದರು.

> ಕಲ್ಯಾಣ ಕರ್ನಾಟಕ ಭಾಗದಲ್ಲಿ ಧಾರ್ಮಿಕ ಕ್ಷೇತ್ರ ಬೆಳವಣಿಗೆ ಹೊಂದುವಲ್ಲಿ ಬಸವರಾಜ ಪಾಟೀಲ್ ಅವರ ಪರಿವಾರದ ಕೊಡುಗೆ ಅನನ್ಯವಾಗಿದೆ.
> –ಶ್ರೀ ರಾಜಶೇಖರ ಶಿವಾಚಾರ್ಯರು, ಬೇಮಳಖೇಡಾ ಗೋರ್ಟಾ ಸಂಸ್ಥಾನದ ಪೀಠಾಧಿಪತಿ

## ಪಂಚ ರಾಜ್ಯಗಳ ಚುನಾವಣೆ ಘೋಷಣೆ

• ಮಲ್ಲಮ್ಮ ನುಡಿ ವಾರ್ತೆ ಹೊಸದಿಲ್ಲಿ

ಕೇಂದ್ರ ಚುನಾವಣಾ ಆಯೋಗವು ಪಂಚ ರಾಜ್ಯಗಳ ಚುನಾವಣಾ ದಿನಾಂಕವನ್ನು ಘೋಷಿಸಿದೆ. ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು, ಪುದುಚೇರಿ ಮತ್ತು ಅಸ್ಸಾಂನಲ್ಲಿ ಚುನಾವಣೆ ನಡೆಯಲಿದೆ. ದೆಹಲಿಯಲ್ಲಿ ಚುನಾವಣಾ ಆಯೋಗ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಮಾತನಾಡಿ, ಈ ಪೈಕಿ ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 23 ಮತ್ತು ಏಪ್ರಿಲ್ 29ರಂದು ಎರಡು ಹಂತದಲ್ಲಿ ಚುನಾವಣೆ ನಡೆಯಲಿದೆ. ಕೇರಳ, ಪುದುಚೇರಿ ಮತ್ತು ಅಸ್ಸಾಂನಲ್ಲಿ ಏಪ್ರಿಲ್ 9 ರಂದು ಮತದಾನ ನಡೆಯಲಿದ್ದು, ತಮಿಳುನಾಡಿನಲ್ಲಿ ಏಪ್ರಿಲ್ 23ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಈ ಪೈಕಿ ಕೇವಲ ಪಶ್ಚಿಮ ಬಂಗಾಳದಲ್ಲಿ ಮಾತ್ರ ಎರಡು ಹಂತದಲ್ಲಿ ಚುನಾವಣೆ ನಡೆಯಲಿದೆ ಎಂದಿದ್ದಾರೆ.



**ದಾವಣಗೆರೆ, ಬಾಗಲಕೋಟ ಮತದಾನ ಏ.9**

ಇದೇ ವೇಳೆ ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆಗೆಯ ದಿನಾಂಕ ಘೋಷಣೆಯಾಗಿದೆ. ಏಪ್ರಿಲ್ 9 ರಂದು ಮತದಾನ ನಡೆಯಲಿದ್ದು, ಮೇ 4 ರಂದು ಮತ ಎಣಿಕೆ ನಡೆಯಲಿದೆ ಎಂದು ಕೇಂದ್ರ ಚುನಾವಣೆ ಆಯೋಗ ಸ್ಪಷ್ಟಪಡಿಸಿದೆ.

> ನಮ್ಮ ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ನೋಡಲು ಮತ್ತು ನಮ್ಮಿಂದ ಚುನಾವಣಾ ಪ್ರಕ್ರಿಯೆಗಳನ್ನು ಕಲಿಯಲು, 20 ರಾಷ್ಟಗಳ ಚುನಾವಣಾ ಆಯೋಗಗಳು ಭಾರತಕ್ಕೆ ಬರುತ್ತವೆ
> –ಜ್ಞಾನೇಶ್ ಕುಮಾರ್, ಮುಖ್ಯ ಚುನಾವಣಾ ಆಯುಕ್ತ

ಮದ್ದೂರಮ್ಮ ಪಾರ್ವತಿ ದೇವಿಯ ಸ್ವರೂಪಿ. ದುಃಖವನ್ನು ದೂರ ಮಾಡುವ ದೇವತೆ ಎಲ್ಲರ ದುಃಖಗಳನ್ನು ದೂರ ಮಾಡಲಿ. ಎಲ್ಲರಿಗೂ ಒಳ್ಳೆಯದಾಗಲಿ: ಡಿಸಿಎಂ ಡಿ.ಕೆ. ಶಿವಕುಮಾರ್

# ಇಫ್ತಾರ್ ಕೂಟ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**

ತಾಲೂಕಿನ ಚಾಂಗಲೇರಾ ಗ್ರಾಮದಲ್ಲಿ ರವಿವಾರ ಪವಿತ್ರ ರಂಜಾನ ಹಬ್ಬದ ಪ್ರಯುಕ್ತ ಸಮಾಜ ಸೇವಕ ಮಹಮ್ಮದ್ ಜಾಕಿರ್ ಅವರು ಏರ್ಪಡಿಸಿದ್ದ ಇಫ್ತಾರ್ ಕೂಟದಲ್ಲಿ ಮಂಡಲ ಪಂಚಾಯತ್ ಮಾಜಿ ಉಪಾಧ್ಯಕ್ಷ ರಾಮಲು ಮಂತ್ರಿ, ಪಿ.ಎಲ್.ಡಿ. ಬ್ಯಾಂಕ್ ನಿರ್ದೇಶಕ ದೇವಿಂದ್ರಮಂಗಲಗಿಕರ್, ಗ್ರಾ.ಪಂ. ಮಾಜಿ ಸದಸ್ಯ ಪ್ರಭು ಹೊಸಮನಿ, ಮಹಮ್ಮದ್ ಶೇರಲಿ, ಶಿವಾಜಿ ಗೌಳಿ, ಮಲ್ಲಪ್ಪ ರಾಜಗಿರಾ, ಸುರೇಶ್ ಬಡಿಗೇರ, ಮಹಮ್ಮದ್ ಶಾಕಿರ್, ವಿಕ್ರಂ, ಖಲೀಲ್, ಖದಿರಮಿಯಾ, ಏಜಸ್, ಆತೀಫ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರೈತ ಸಂಘ, ಹಸಿರು ಸೇನೆ ಗ್ರಾಮ ಘಟಕ ಉದ್ಘಾಟನೆ




• **ಮಲ್ಲಮ್ಮ ನುಡಿ ವಾರ್ತೆ ಕಮಲನಗರ**

ಪಟ್ಟಣದ ಡಾ. ಚನ್ನಬಸವ ಪಟ್ಟದ್ದೇವರು ಗ್ರಂಥಾಲಯ ಆವರಣದಲ್ಲಿ ಹಮ್ಮಿಕೊಳ್ಳಲಾದ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಗ್ರಾಮ ಘಟಕ ಉದ್ಘಾಟಣೆ ಮಾಡಲಾಯಿತು.

ರೈತ ಸಂಘ ಜಿಲ್ಲಾಧ್ಯಕ್ಷ ಸಿದ್ರಾಮಪ್ಪ ಅಣದೂರೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.ರಾಜ್ಯ ಸರ್ಕಾರ ಜಲ ಸಂಪನ್ಮೂಲ ಯೋಜನೆ ಜಾರಿ ವಿಷಯದಲ್ಲಿ ಜಾಣಕುರುಡು ಪ್ರದರ್ಶನಗಳನ್ನು ಮಾಡುತ್ತಿದ್ದಾರೆ. ರೈತ ವಿರೋಧಿ ಧೋರಣೆಗಳ ವಿರುದ್ಧ ಹೋರಾಟಕ್ಕೆ ಯುವಕರನ್ನು ಚಳವಳಿಗೆ ಕರೆ ತರುವ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದೇವೆ ಎಂದರು. ಕಮಲನಗರ ತಾಲ್ಲೂಕು ಘಟಕ ಅಧ್ಯಕ್ಷ ಪ್ರವೀಣ ಕುಲಕರ್ಣಿ ಅಧ್ಯಕ್ಷತೆ ವಹಿಸಿದರು.

ರೈತ ಸಂಘ ಜಿಲ್ಲಾ ಕಾರ್ಯಾಧ್ಯಕ್ಷ ಶ್ರೀಮಂತ ಬಿರಾದಾರ, ಬೀದರ್ ಅಧ್ಯಕ್ಷ ನಾಗಯ್ಯ ಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಶಂಕ್ರೆಪ್ಪ ಪಾರಾ, ಔರಾದ್ ತಾಲ್ಲೂಕು ಅಧ್ಯಕ್ಷ ಪ್ರಕಾಶ ಬಾವಗೆ, ಯಶವಂತ ಬಿರಾದಾರ, ಶ್ರೀರಂಗ ಪರಿಹಾರ, ವೈಜಿನಾಥ ವಡ್ಡೆ, ಮನೋಹರ ಬಿರಾದಾರ, ಉಮಾಕಾಂತ ಮೋಳಕೆರೆ ಸೇರಿದಂತೆ ಚಂದ್ರಕಾಂತ ಸಂಗಮೆ, ಮಹಾದೇವ ಚಲವಾ, ಸಂಗಮೇಶ ಜುಲ್ಫೆ, ಉಮಾಕಾಂತ ಬಚ್ಚಣ್ಣಾ, ದತ್ತ ಚಾಂಗುಣೆ, ಸಂತೋಷ ಕಾಡೋದೆ, ಮಹೇಶ ಬಿರಾದಾರ, ರಾಜಕುಮಾರ ವಡಗಾಂವೆ, ಸಿದ್ರಾಮಪ್ಪ ಬಿರಾದಾರ, ದೇವೇಂದ್ರ, ಮಡಿವಾಳಪ್ಪ ಸೇರಿದಂತೆ ರೈತ ಸಂಘಟನೆ ಗ್ರಾಮ ಘಟಕ ವಿವಿಧ ಗ್ರಾಮದ ಅಧ್ಯಕ್ಷರು ಹಾಗೂ ಪ್ರಮುಖರು ಪಾಲ್ಗೊಂಡಿದ್ದರು.

ಪದಾಧಿಕಾರಿಗಳ ಪದಗ್ರಹಣ:

ರಾಮೇಶ್ವರ ಶಿವಣಕರ್(ಅಧ್ಯಕ್ಷರು), ಮನೋಜಕುಮಾರ ಪೊಲೀಸ್ ಪಾಟೀಲ (ಉಪಾಧ್ಯಕ್ಷ), ಧನರಾಜ ಭವರಾ(ಕಾರ್ಯದರ್ಶಿ), ಗುಂಡಪ್ಪ ದಾನಾ(ಗೌರವಧ್ಯಕ್ಷರು), ವಿಜಯಕುಮಾರ ಶೇಟಕಾರ(ಉಪಾಧ್ಯಕ್ಷರು), ನಾಗೇಶ ರಾಂಪೂರೆ(ಸದಸ್ಯರು), ಅಶೋಕ (ಸಹಕಾರ್ಯದರ್ಶಿ), ಎ[illegible]ಟಿ ಅಧ್ಯಕ್ಷ ಸುನೀಲ ಮೇತ್ರೆ, ಎಸ್ಸಿ ಘಟಕ ಅಧ್ಯಕ್ಷ ಅಭಿನವ ಫಾಗರೆ, ಒಬಿಸಿ ಅಧ್ಯಕ್ಷ ಗುರುನಾಥ ಬಿರಾದಾರ, ಮಾಧ್ಯಮ ಪ್ರತಿನಿಧಿ ಮನೋಜ ಹಿರೇಮಠ ಅವರುಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಪ್ರಶಾಮತ ಖಾನಾಪುರೆ ನಿರೂಪಿಸಿದರು. ಮನೋಜ ಪೊಲೀಸ್ ಪಾಟೀಲ ಸ್ವಾಗತಿಸಿದರು. ರಾಮೇಶ್ವರ ವಂದಿಸಿದರು.

# ಗುಣಮಟ್ಟ ಲೋಪವಾದರೆ ಸಹಿಸುವುದಿಲ್ಲ: ಚವ್ಹಾಣ



• **ಮಲ್ಲಮ್ಮ ನುಡಿ ವಾರ್ತೆ ಔರಾದ**

ತಾಲ್ಲೂಕಿನ ಯನಗುಂದಾ ಗ್ರಾಮದ ಬಳಿ 3 ಕೋಟಿ ವೆಚ್ಚದಲ್ಲಿ ನಡೆಯುತ್ತಿರುವ ಸೇತುವೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಭಾನುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಕಾಮಗಾರಿಯ ಪ್ರಗತಿಯ ಕುರಿತಂತೆ ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಮಹಾರಾಷ್ಟ್ರ ಗಡಿಯಿಂದ ಚಿಂತಾಕಿ, ಖಾಶೆಂಪೂರ, ಯನಗುಂದಾ, ತೇಗಂಪೂರ, ಮಮದಾಪೂರ, ಔರಾದ ಜನರಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದ್ದು, ಕಾಮಗಾರಿ ಅಂದಾಜು ಪತ್ರಿಕೆಯಲ್ಲಿರುವಂತೆ ಸೇತುವೆ ನಿರ್ಮಾಣವಾಗಬೇಕು. ಕಬ್ಬಿಣದ ಬಳಕೆ, ಸಿಮೆಂಟ್ ಹಾಗೂ ಮತ್ತಿತರೆ ಸಲಕರಣೆಗಳನ್ನು ಸರಿಯಾದ ಪ್ರಮಾಣದಲ್ಲಿ ಬಳಕೆ ಮಾಡಬೇಕು. ಗುಣಮಟ್ಟದ ವಿಷಯದಲ್ಲಿ ಲೋಪಗಳು ಕಾಣಿಸಿದರೆ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲವೆಂದು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಿದರು.

ಕಳೆದ ಮಳೆಗಾಲದ ಸಂದರ್ಭದಲ್ಲಿ ಭೀಕರ ಮಳೆಯಿಂದಾಗಿ ಸೇತುವೆ ಸಂಪೂರ್ಣ ಕೊಚ್ಚಿಕೊಂಡು ಹೋಗಿ ತಾಲ್ಲೂಕು ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ ಏಕೈಕ ಪ್ರಮುಖ ಮಾರ್ಗವು ಅನೇಕ ದಿನಗಳ ವರೆಗೆ ಸ್ಥಗಿತಗೊಂಡಿತ್ತು. ಸ್ಥಳಕ್ಕೆ ಭೇಟಿ ನೀಡಿದಾಗ ಗ್ರಾಮಸ್ಥರು ಹೊಸ ಸೇತುವೆ ಮಾಡಿಕೊಡಬೇಕೆಂದು ಒತ್ತಾಯಿಸಿದ್ದರು. ಗ್ರಾಮ ಸಂಚಾರದ ವೇಳೆಯೂ ಈ ಬಗ್ಗೆ ಬೇಡಿಕೆ ಸಲ್ಲಿಸಿದ್ದರು.

# ಕಷ್ಟ ಪಟ್ಟು ಓದದೇ ಇಷ್ಟ ಪಟ್ಟು ಓದಬೇಕು: ಲಕ್ಷ್ಮಿ ಬಿರಾದಾರ್

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ**



ಜೀವನದಲ್ಲಿ ಯಶಸ್ಸು ಕಾಣಲು ಮೊದಲು ಶ್ರಮಪಡಬೇಕು. ನಂತರ ತಕ್ಕ ಫಲ ದೊರೆಯುವುತ್ತದೆ ಎಂದು ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್ ಹೇಳಿದರು. ಪಟ್ಟಣದ ವಿದ್ಯಾ ಪ್ರಾಥಮಿಕ ಹಾಗೂ ಜ್ಞಾನ ದರ್ಶನ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳುಕೊಡುಗೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನ ಬಂಗಾರವಿದ್ದಂತೆ. ಅದಕ್ಕೆ ಪೂರಕವಾಗಿ ಮಕ್ಕಳು ನಿರಂತರವಾಗಿ ಅಭ್ಯಾಸ ಮಾಡಿ ಜ್ಞಾನ ಸಂಪಾದನೆ ಮಾಡಿದ್ದಲ್ಲಿ ನಿಶ್ಚಿತ ಗುರಿಯನ್ನು ಮುಟ್ಟಿ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಪ್ರತಿಯೊಂದು ವಿದ್ಯಾರ್ಥಿಯು ತಾನು ಯಾರು, ಏನು ಮಾಡಬೇಕು, ಮತ್ತೆ ಏನು ಮಾಡುತ್ತಿದ್ದೇನೆ ಎಂದು ಸ್ವತಃ ತಾನೇ ಪ್ರಶ್ನೆ ಮಾಡಿಕೊಂಡು ಅಭ್ಯಾಸ ಮಾಡಿದ್ದಲ್ಲಿ ಎಸ್ಎಸ್ಎಲ್‌ಸಿಯಲ್ಲಿ ಅಗ್ರಶ್ರೇಣಿಯಲ್ಲಿ ಪಾಸಾಗುವುದರಲ್ಲಿ ಯಾವುದೇ ಅನುಮಾನ ಇಲ್ಲ. ಭಯ ಹಾಗೂ ಗೊಂದಲ ಮಕ್ಕಳ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗಬಹುದು. ಆದ್ದರಿಂದ ಮಕ್ಕಳು ಹೆದರದೆ ಧೈರ್ಯವಾಗಿ ಪರೀಕ್ಷೆಯನ್ನು ಎದುರಿಸಬೇಕು ಎಂದರು.


ಸಾವಿತ್ರಿಬಾಯಿ ಫುಲೇ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಪ್ರೇಮಿಳಾ ರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಕನಸನ್ನು ಕಂಡು ಅದನ್ನು ಸಾಕಾರಗೊಳಿಸುವತ್ತ ಪರಿಶ್ರಮ ಪಡಬೇಕು, ವಿದ್ಯಾರ್ಥಿಗಳು ಕಷ್ಟಪಟ್ಟು ಓದದೇ ಇಷ್ಟ ಪಟ್ಟು ಓದಬೇಕು. ಶಿಸ್ತಿನಿಂದ ಇರುವ ವಿದ್ಯಾರ್ಥಿಗಳು ಜೀವನದಲ್ಲಿ ಯಶಸ್ಸನ್ನು ಕಾಣುತ್ತಾರೆ ಎಂದರು. ಶಿಕ್ಷಣ ಸಂಸ್ಥೆಯ ಅಧ್ಯಕ್ಷೆ ಶೈಲಜಾ ಹುಡಗೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಯಿಯ ತ್ಯಾಗ, ತಂದೆಯ ಬೆವರಿನ ಮಹತ್ವವನ್ನು ಅರಿತು ವಿದ್ಯಾರ್ಥಿಗಳು ಒಳ್ಳೆಯ ಶಿಕ್ಷಣ ಪಡೆದು ಉನ್ನತ ಹುದ್ದೆಗಳು ಪಡೆದು ಸಮಾಜಕ್ಕೆ ಏನಾದರೂ ಕೊಡುಗೆ ನೀಡುವಂತರಾಗಬೇಕೆಂದು ಸಲಹೆ ನೀಡಿದರು. ಚಂದ್ರಿಕಾ ಎಂ. ಗುಜ್ಜರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳು ವ್ಯಕ್ತ ಪಡಿಸಿದರು. ಭೀಮಶೆಟ್ಟಿ ವಡ್ಡನಕೇರಾ ನಿರೂಪಿಸಿದರು. ಅನ್ನಪೂರ್ಣ ಸ್ವಾಗತಿಸಿದರು. ಸಾವಿತ್ರಿ ಇಟಗಾ ವಂದಿಸಿದರು. ಈ ಸಂದರ್ಭದಲ್ಲಿ ಮುತ್ತಂಗಿ ಗ್ರಾ.ಪಂ.ಅಭಿವೃದ್ಧಿ ಅಧಿಕಾರಿ ಸಂಧ್ಯಾರಾಣಿ ಧೂಮಾಳೆ, ವಿಜಯಲಕ್ಷ್ಮಿ ಬನ್ನಳ್ಳಿ, ಸರಸ್ವತಿ ಕೋರಿ , ಕರುಣಾ ದಾನಪ್ಪ,, ಗುಂಡಪ್ಪ ಹುಡಗೆ, ಚಂದ್ರಶೇಖರ್ ದಾನಪ್ಪ, ಅಶೋಕ ಪುರಿ, ರೇವಣಸಿದ್ದಪ್ಪ, ಮಹಾದೇವ ಗುಜ್ಜರ್, ಗೋಪಾಲ್, ಲೀಲಾವತಿ, ಸುನೀತಾ, ಶೃತಿ ಡಾಂಗೆ, ಸೇರಿದಂತೆ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಚೈತನ್ಯ ಚಿಲುಮೆ ಪ್ರಶಸ್ತಿ ಪ್ರದಾನ

“ ಚಿಟಗುಪ್ಪ ತಾಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್, ಮುತ್ತಂಗಿ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿ ಸಂಧ್ಯಾರಾಣಿ ಧೂಮಾಳೆ, ಫಾತಿಮಾಪುರ್ ಸರ್ಕಾರಿ ಶಾಲೆ ಮುಖ್ಯ ಶಿಕ್ಷಕಿ ಪ್ರೇಮಿಳಾ ರೆಡ್ಡಿ, ಸಮಾಜ ಕಾರ್ಯಕರ್ತೆ ವಿಜಯಲಕ್ಷ್ಮಿ ಬನ್ನಳ್ಳಿ, ಸರಸ್ವತಿ ಕೋರಿ ಇವರುಗಳಿಗೆ ಚೈತನ್ಯ ಚಿಲುಮೆ ಪ್ರಶಸ್ತಿ ನೀಡಿ ಸನ್ಮಾನಿಸಿ ಗೌರವಿಸಲಾಯಿತು.

# ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕ್ರಮ : ಖಂಡ್ರೆ

• **ಮಲ್ಲಮ್ಮ ನುಡಿ ವಾರ್ತೆ, ಬೀದರ**



ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಅಗತ್ಯ ಕ್ರಮ ವಹಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಅಧಿಕಾರಿಗಳಿಗೆ ಸೂಚಿಸಿದರು.

ಅವರು ಶನಿವಾರ ಜಿಲ್ಲಾ ಪಂಚಾಯತ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಅಭಾವ ಸರಿದೂಗಿಸುವ ಸಂಬಂಧ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಕರೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಔರಾದ್ ಮತ್ತು ಭಾಲ್ಕಿ ಬೇರೆ ಬೇರೆ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗಬಹುದು ಎಂದು ಇಲಾಖೆ ಅಧಿಕಾರಿಗಳು ವರದಿ ನೀಡಿದ್ದು, ಮುಂಜಾಗ್ರತಾ ಕ್ರಮವಾಗಿ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ, ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡು ಬಂದಲ್ಲಿ 24 ತಾಸುಗಳ ಒಳಗಡೆ ಸಮಸ್ಯೆ ಬಗೆಹರಿಸಬೇಕೆಂದು ಸೂಚಿಸಲಾಗಿದೆ. ಬೋರವೆಲ್ ಬತ್ತಿ ಹೋದರೆ ಅಥವಾ ಬಾವಿಯಲ್ಲಿ ನೀರು ಇರದೇ ಇದ್ದರೆ ಟ್ಯಾಂಕರ ಮುಖಾಂತರ ನೀರು ಸರಬರಾಜು ಮಾಡಬೇಕು. ಇಲ್ಲವಾದಲ್ಲಿ ಖಾಸಗಿ ಬೋರವೆಲ್ ಬಾಡಿಗೆ ಪಡೆಯಬೇಕು. ಜಿಲ್ಲೆಯ ತಾಂಡಾ, ಹಟ್ಟಿ ಪ್ರದೇಶ ಸೇರಿದಂತೆ ಎಲ್ಲಿಯೂ ಕುಡಿಯುವ ನೀರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ನಗರದ ಕೆಲ ಬಡಾವಣೆಗಳಲ್ಲಿ ಸ್ವಲ್ಪ ನೀರಿನ ಸಮಸ್ಯೆ ಕಂಡುಬಂದಿದೆ ಅಲ್ಲಿಯೂ ಪರಿಹಾರ ನೀಡಬೇಕು. ಈಗಾಗಲೇ ಸರ್ಕಾರ ಮಟ್ಟದಲ್ಲಿ ಟಾಸ್ಕ್‌ಫೋರ್ಸ್ ಸಮಿತಿಗೆ ಅನುದಾನ ಬಿಡುಗಡೆ ಮಾಡುವಂತೆ ಸರ್ಕಾರ ಪರಿಗಣಿಸಿದೆ. ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಲಾಗುವುದು ಎಂದರು.

ಗೃಹ ಬಳಕೆಯ ಸಿಲಿಂಡರಗಳು ವಿತರಿಸಲಾಗುತ್ತಿದ್ದು, ಯಾವುದೇ ಕೊರತೆ ಇರುವುದಿಲ್ಲ, ವಾಣಿಜ್ಯ ಬಳಕೆ ಸಿಲಿಂಡರಗಳು ಒಂದು ವಾರದಿಂದ ಹತ್ತು ದಿನಗಳವರೆಗೆ ವಿತರಣೆಗೆ ಸಮಸ್ಯೆ ಇದೆ ಎಂದು ಕೇಂದ್ರ ಸರ್ಕಾರ ಹೇಳಿದ್ದು, ಸಾರ್ವಜನಿಕರು ಯಾವುದೇ ವದಂತಿಗಳಿಗೆ ಕಿವಿಗೊಡಬಾರದು. ಜಿಲ್ಲೆಯಲ್ಲಿ 29 ಗ್ಯಾಸ್ ಏಜೆನ್ಸಿಗಳಿದ್ದು, ಎಲ್ಲ ಏಜೆನ್ಸಿಗಳ ಮೇಲೆ ಜಿಲ್ಲಾಡಳಿತ ನಿಗಾ ಇಟ್ಟು ಕಾಳಸಂತೆಯಲ್ಲಿ ಮಾರಾಟ ಆಗದಂತೆ ನೋಡಿಕೊಳ್ಳಬೇಕು. ಕಾಳಸಂತೆಯಲ್ಲಿ ಸಿಲೆಂಡರ ಮಾರಾಟ ಮಾಡುವುದು ಕಂಡುಬಂದರೆ ಅಂತಹವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು. ಯಾವುದೇ ರೀತಿಯಲ್ಲಿ ಸಾರ್ವಜನಿಕರಿಗೆ ತೊಂದರೆ ಆಗಬಾರದೆಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಜಿಲ್ಲೆಯಲ್ಲಿ ನಡೆಯುವ ಕಾಮಗಾರಿಗಳು ಬಗ್ಗೆ ಪ್ರಗತಿ ಪರಿಶೀಲಿಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ.ಗಿರೀಶ ಬದೋಲೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಮಹಾನಗರ ಪಾಲಿಕೆ ಆಯುಕ್ತರಾದ ಮುಕುಲ್ ಜೈನ್, ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಆಶೀಷ್ ರೆಡ್ಡಿ, ಬಸವಕಲ್ಯಾಣ, ಬೀದರ ಸಹಾಯಕ ಆಯುಕ್ತರು, ತಾಲ್ಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ರಾಮನವಮಿ ಉತ್ಸವ ಸ್ಟಿಕರ್ ಸಮಾರಂಭ

# ರಾಮನವಮಿ ಉತ್ಸವ ಅದ್ದೂರಿ ಆಚರಣೆಗೆ ನಿರ್ಧಾರ



ಪಟ್ಟಣದ ರಾಮ ಮಂದಿರದಲ್ಲಿ ನಡೆದ ಶ್ರೀರಾಮನವಮಿ ಉತ್ಸವ ಭಾಲ್ಕಿಯ ಸ್ಟ್ರೀಕರ್ ಮತ್ತು ಕರ ಪತ್ರ ಬಿಡುಗಡೆ ಮಾಡಲಾಯಿತು. ಶಿವುಲೋಖಂಡೆ, ಸಚಿನ ಜಾಧವ ಮತ್ತಿತರರು ಇದ್ದರು.

• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ಪಟ್ಟಣದಲ್ಲಿ ಇದೇ ಮಾ.28 ರಂದು ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳದ ವತಿಯಿಂದ ಶ್ರೀರಾಮನವಮಿ ಉತ್ಸವ–ಭಾಲ್ಕಿ ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಯಿತು. ಪಟ್ಟಣದ ರಾಮ ಮಂದಿರದಲ್ಲಿ ಶನಿವಾರ ಶ್ರೀರಾಮನವಮಿ ಉತ್ಸವ ಸಮಿತಿಯ ವತಿಯಿಂದ ಆಯೋಜಿಸಿದ್ದ ಶ್ರೀರಾಮನವಮಿ ಕರಪತ್ರ ಮತ್ತು ಸ್ಟ್ರೀಕರ್ ಬಿಡುಗಡೆ ಸಮಾರಂಭ ಉದ್ಘಾಟಿಸಿ ಮಾತನಾಡಿದ ಸ್ವಾಗತ ಸಮಿತಿ ಅಧ್ಯಕ್ಷ ಶಿವಕುಮಾರ ಲೋಖಂಡೆ, ವಿಶ್ವಹಿಂದೂ ಪರಿಷತ್ ಮತ್ತು ಬಜರಂಗದಳದ ವತಿಯಿಂದ ಇದೇ ಮಾ.28 ರಂದು ನಡೆಯಲಿರುವ ಶ್ರೀರಾಮನವಮಿ ಉತ್ಸವ–ಭಾಲ್ಕಿಯ ಕಾರ್ಯಕ್ರಮದ ಪೂರ್ವಭಾವಿಯಾಗಿ ಮಾ.23 ರಂದು ಪತ್ರಿಕಾಗೋಷ್ಠಿ ಕರೆಯಲಾಗುವುದು. ಅಲ್ಲದೇ ಮಾ.26 ರಂದು ಕಾರ್ ಮತ್ತು ಬೈಕ್ ರ್‍ಯಾಲಿ ನಡೆಸಲಾಗುವುದು ಎಂದು ಹೇಳಿದರು. ವಿಶ್ವಹಿಂದೂ ಪರಿಷತ್ ಮುಖಂಡ ಸಚಿನ ಜಾಧವ ಮಾತನಾಡಿ, ಶ್ರೀರಾಮನವಮಿ ಉತ್ಸವ ನಿಮಿತ್ಯ ಮಾ.26 ರಂದು ನಡೆಯಲಿರುವ

ಕಾರ್, ಮತ್ತು ಬೈಕ್ ರ್‍ಯಾಲಿಯು ಹಳೆ ಪಟ್ಟಣದ ಗಡಿ(ಕೋಟೆ) ಯಿಂದ ಪ್ರಾರಂಭವಾಗಿ ಚಾವಡಿ, ಹಿರೇಮಠ ಸಂಸ್ಥಾನ ಮೂಲಕ ಸಾಗಿ ಬೊಮ್ಮಗೊಂಡೇಶ್ವರ ವೃತ್ತದ ಮೂಲಕ ಬಸ್‌ನಿಲ್ದಾಣ, ಮಹಾತ್ಮಾಜೋತಿಬಾ ಫುಲೆ ವೃತ್ತ, ಗಾಂಧಿ ವೃತ್ತ, ಡಾ। ಬಿ.ಆರ್. ಅಂಬೇಡ್ಕರ್ ವೃತ್ತ, ಚನ್ನಬಸವಾಶ್ರಮ, ಬಸವೇಶ್ವರ ವೃತ್ತದ ಮೂಲಕ ಸಾಗಿ ರಾಮ ಮಂದಿರದಲ್ಲಿ ಸಮಾವೇಶಗೊಳ್ಳುವುದು ಎಂದು ತಿಳಿಸಿದರು. ಉತ್ಸವ ಸ್ವಾಗತ ಸಮಿತಿಯ ಉಪಾಧ್ಯಕ್ಷ ಸೋಮನಾಥಪ್ಪ ಅಸ್ಟೂರೆ ಮಾತನಾಡಿ, ಮಾ.28 ರಂದು ನಡೆಯುವ ಶ್ರೀರಾಮನವಮಿ ಉತ್ಸವ ನಿಮಿತ್ಯ ಬೃಹತ್ ಶೋಭಾ ಯಾತ್ರೆ ಹಮ್ಮಿಕೊಳ್ಳಲಾಗಿದ್ದು, ಶೋಭಾಯಾತ್ರೆಯು ಅಂದು ಮದ್ಯಾಹ್ನ 2 ಗಂಟೆಗೆ ವಿಠಲ ಮಂದಿರ ಚೌಡಿ ಯಿಂದ ಪ್ರಾರಂಭವಾಗಿ ಗಂಜ್ ಏರಿಯಾದ ಗಾಂಧಿ ವೃತ್ತದಲ್ಲಿ ಸಮಾವೇಶಗೊಳ್ಳುವುದು. ಗಾಂಧಿ ವೃತ್ತದಲ್ಲಿ ಸಂಜೆ 7 ಗಂಟೆಗೆ ನಡೆಯಲಿರುವ ಸಾರ್ವಜನಿಕ ಸಮಾರಂಭದಲ್ಲಿ ಸಾಮಾಜಿಕ ಕಾರ್ಯಕರ್ತೆ ಕಾಜಲ ಹಿಂದೂಸ್ಥಾನಿ ವಿಶೇಷ ವಕ್ತಾರರಾಗಿ ಮಾತನಾಡುವುರು. ಜೊತೆಗೆ ಮೆಹಕರ ಶ್ರೀ ರಾಜೇಶ್ವರ ಶಿವಾಚಾರ್ಯರು, ಹಿರೇಮಠದ ಶ್ರೀ ಗುರುಬಸವ ಪಟ್ಟದ್ದೇವರು, ಹಲಬರ್ಗಾ ಶ್ರೀ ಹಾವಗಿಲಿಂಗೇಶ್ವರ ಶಿವಾಚಾರ್ಯರು, ಬಂಜಾರಾ ಶಕ್ತಿ ಪೀಠದ ಶ್ರೀ ರಾಮ ಚೈತನ್ಯ ಮಹಾರಾಜರು ದಿವ್ಯ ಸಾನಿಧ್ಯವಹಿಸಿ ಮಾತನಾಡುವರು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತೃಶಕ್ತಿ ಸ್ವಾಗತ ಸಮಿತಿಯ ಅಧ್ಯಕ್ಷೆ ಸುನಿತಾ ಶಿವಶರಣಪ್ಪ ಕುಡತೆ, ಡಾ। ನಮ್ರತಾ ಗುಂಡೇರಾವ ಶೇಡೋಳೆ, ಸ್ನಹೇಲ ಅಮೀತ ಅಸ್ಟೂರೆ, ಡಾ। ವೈಶಾಲಿ ಯುವರಾಜ ಜಾಧವ, ಡಾ। ಕವಿತಾ ನಿತೀನ ಪಾಟೀಲ, ಗೀತಾ ಅನೀಲಕುಮಾರ ಭೂರೆ, ಅನಿತಾ ವಸಂತ ಪವಾರ, ಲಕ್ಷ್ಮೀ ರಾಜಕುಮಾರ ಸಿಂಧೆ, ಪ್ರಭಾವತಿ ದಿಲೀಪರಾವ ಸಿಂದೆ, ಸ್ವಾಗತ ಸಮಿತಿಯ ಮುಖಂಡರಾದ ಜಗದೀಶ ಖಂಡ್ರೆ, ಕೆ.ಡಿ.ಗಣೇಶ, ಜಯರಾಜ ದಾಬಶೆಟ್ಟಿ, ಡಾ। ಅಮೀತ ಅಷ್ಟೂರೆ, ಡಾ। ಗುಂಡೇರಾವ ಶೇಡೋಳೆ, ಶೈಲೇಶ ಚಳಕಾಪೂರೆ, ಜಯಕೀಶನ ಬಿಯಾಣಿ, ಅಶೋಕ ರಾಜೋಳೆ, ಶೈಲೇಶ ಮಾಲಮಾಣಿ, ಡಾ। ಜಗದೀಶ ಭೂರೆ, ಜೈರಾಜ ಕೊಳ್ಳಾ, ಕೈಲಾಸ ಪಾಟೀಲ, ಶರದ ದುರ್ಗಾಳೆ, ಧರ್ಮು ವಂಕೆ, ಕೇಶವ ಸೂರ್ಯವಂಶಿ, ಸಂತೋಷ ಶೇಡೋಳೆ, ರವಿ ಕುಂಬಾರ, ಮಲ್ಲಿಕಾರ್ಜುನ ಭಂಗೂರೆ, ಅಮರ, ದತ್ತು ಜಆಧವ, ರಾಜು ಶಿಂಧೆ, ರಾಹುಲ ಮೇತ್ರೆ, ಕಾಶಿನಾಥ ಕೋಡಗೆ ಉಪಸ್ಥಿತರಿದ್ದರು.

ಗುಂಡಯ್ಯಾಸ್ವಾಮಿ ಸ್ವಾಗತಿಸಿದರು. ರವಿ ಕುಂಬಾರ ನಿರೂಪಿಸಿದರು. ಸಂಗಮೇಶ ಟೆಂಕಾಳೆ ವಂದಿಸಿದರು.

# ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ವಿಶ್ವಗುರು ಬಸವಣ್ಣನವರ ನಿಜವಾದ ಆಸೆ ಈಡೇರಲಿ

ಕನ್ನಡನಾಡಿನ ಮಹಾನ್ ಸಮಾಜಸಂಸ್ಕಾರಕ ಹಾಗೂ ದಾರ್ಶನಿಕರಾದ Basavanna ಅವರು ಸಮಾಜದಲ್ಲಿ ಸಮಾನತೆ, ನ್ಯಾಯ ಹಾಗೂ ಮಾನವೀಯತೆಯನ್ನು ಸ್ಥಾಪಿಸುವ ಕನಸು ಕಂಡಿದ್ದರು. ಬಸವಣ್ಣನವರ ಆಶಯವು ಜಾತಿ, ವರ್ಣ, ಧರ್ಮದ ಭೇದಭಾವವಿಲ್ಲದ ಸಮಾನತೆಯ ಸಮಾಜ ನಿರ್ಮಾಣವಾಗಬೇಕು ಎಂಬುದಾಗಿತ್ತು.

ಬಸವಣ್ಣನವರು “ಕಾಯಕವೇ ಕೈಲಾಸ” ಎಂಬ ತತ್ವವನ್ನು ಸಾರುತ್ತಾ ಪ್ರತಿಯೊಬ್ಬರೂ ಶ್ರಮದ ಮೂಲಕ ಬದುಕು ಕಟ್ಟಿಕೊಳ್ಳಬೇಕು ಎಂದು ಉಪದೇಶಿಸಿದರು. ಅವರು ಸಮಾಜದಲ್ಲಿ ಶೋಷಣೆ, ಅಸಮಾನತೆ, ಮೂಢನಂಬಿಕೆಗಳಿಗೆ ವಿರೋಧವಾಗಿ ಹೋರಾಡಿ ಮಾನವೀಯ ಮೌಲ್ಯಗಳನ್ನು ಬೋಧಿಸಿದರು.

ಆದರೆ ಇಂದಿನ ಸಮಾಜವನ್ನು ನೋಡಿದಾಗ ಬಸವಣ್ಣನವರ ಆ ಮಹಾನ್ ಕನಸು ಸಂಪೂರ್ಣವಾಗಿ ಈಡೇರಿದೆಯೇ ಎಂಬ ಪ್ರಶ್ನೆ ಮೂಡುತ್ತದೆ. ಜಾತಿ ಭೇದ, ಅನ್ಯಾಯ, ಅಸಮಾನತೆ ಇಂದಿಗೂ ಹಲವೆಡೆ ಕಾಣಿಸುತ್ತಿವೆ. ಸಮಾಜದ ಪ್ರತಿಯೊಬ್ಬರೂ ಬಸವಣ್ಣನವರ ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಮಾತ್ರ ಅವರ ನಿಜವಾದ ಆಸೆ ಈಡೇರುತ್ತದೆ.

ಆದ್ದರಿಂದ ಸರ್ಕಾರ, ಸಮಾಜದ ನಾಯಕರು ಹಾಗೂ ಸಾಮಾನ್ಯ ಜನರು ಬಸವಣ್ಣನವರ ತತ್ವಗಳನ್ನು ಅನುಸರಿಸಿ ಸಮಾನತೆ ಮತ್ತು ನ್ಯಾಯದ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು. ಆಗ ಮಾತ್ರ ವಿಶ್ವಗುರು ಬಸವಣ್ಣನವರ ಆಶಯಗಳು ಸಾರ್ಥಕವಾಗುತ್ತವೆ.

ಸಮಾನತೆ, ಸಹೋದರತ್ವ ಮತ್ತು ಶ್ರಮದ ಗೌರವ ಇದೇ ಬಸವಣ್ಣನವರ ಸಂದೇಶ.

# ಸ್ಟೀವನ್ ರಾಜ್‌ಗೆ ಪಿಎಚ್‌ಡಿ

• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಕಂಪ್ಯೂಟರ್ ಅಂಡ್ ಇನ್ಫಾರ್ಮೇಶನ್ ಸೈನ್ಸ್ ವಿಭಾಗದಲ್ಲಿ ಸಂಶೋಧನೆ ನಡೆಸಿದ ಎನ್. ಸ್ಟೀವನ್ ರಾಜ್ ಅವರಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ಪಿಎಚ್‌ಡಿ ಪದವಿ ಪ್ರಧಾನ ಮಾಡಿದೆ.

ಡಾ. ಧನಂಜಯ್ ಮಕ್ತೇದರ್ ಅವರ ಮಾರ್ಗದರ್ಶನದಲ್ಲಿ “ಆನ್ ಎಫಿಶಿಯಂಟ್ ವೈಪ್ ಎಂಪ್ಲಾಯಿಂಗ್ ಶಿಪ್ ಥ್ರೂ ಕ್ರಾಸ್ ಲೇಯರ್ ಮೆಕಾನಿಸಂ ಓವರ್ ಹೈಬ್ರಿಡ್ ನೆಟ್ವರ್ಕ್” ಎಂಬ ವಿಷಯದಡಿ ಅವರು ಸಂಶೋಧನೆ ನಡೆಸಿ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಇತ್ತೀಚೆಗೆ ಪ್ರಕಟವಾದ ಡಾಕ್ಟರೇಟ್ ಪದವಿ ಪರೀಕ್ಷೆಯ ಫಲಿತಾಂಶದಲ್ಲಿ ಅವರು ಯಶಸ್ವಿಯಾಗಿ ಉತ್ತೀರ್ಣರಾಗಿದ್ದು, ಈ ಸಾಧನೆಯ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಅವರಿಗೆ ಪಿಎಚ್‌ಡಿ ಪದವಿಯನ್ನು ಪ್ರಧಾನ ಮಾಡಿದೆ.

ಎನ್. ಸ್ಟೀವನ್ ರಾಜ್ ಅವರ ಈ ಶೈಕ್ಷಣಿಕ ಸಾಧನೆಗೆ ಕುಟುಂಬದವರು, ಸ್ನೇಹಿತರು ಹಾಗೂ ಗಣ್ಯರು ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಸಂಕಿರ್ಣ ಕಟ್ಟಡ ಕಾಮಗಾರಿ ವೀಕ್ಷಿಸಿದ ಈಶ್ವರ ಖಂಡ್ರೆ



• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಬೀದರ ನಗರದ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಸ್ಥಳದಲ್ಲಿ ನಿರ್ಮಾಣಗೊಳ್ಳುತ್ತಿರುವ ನೂತನ ಜಿಲ್ಲಾ ಸಂಕೀರ್ಣ ಕಟ್ಟಡ ಕಾಮಗಾರಿ ಸ್ಥಳಕ್ಕೆ ಶನಿವಾರ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಭೇಟಿ ನೀಡಿ ಪರಿಶೀಲಸಿದರು.

ನಂತರ ಮಾತನಾಡಿ, ಜಿಲ್ಲಾ ಸಂಕೀರ್ಣ ಕಟ್ಟಡವು 48 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ನಗರದ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಜಿಲ್ಲೆಯ ವಿವಿಧ ಸರ್ಕಾರಿ ಇಲಾಖೆಗಳು ಒಂದೇ ಸಂಕೀರ್ಣದಲ್ಲಿ ಕಾರ್ಯನಿರ್ವಹಿಸುವ ಮೂಲಕ ಸಾರ್ವಜನಿಕರಿಗೆ ಸುಲಭವಾಗಿ ಹಾಗೂ ವೇಗವಾಗಿ ಸೇವೆಗಳು ದೊರೆಯುವಂತೆ ಈ ಜಿಲ್ಲಾ ಸಂಕೀರ್ಣ ನಿರ್ಮಾಣವಾಗುತ್ತಿದೆ. ಇದು ಬೀದರ ಜಿಲ್ಲೆಯ ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ರೂಪಿಸಲು ಸಹಾಯಕಾರಿಯಾಗಲಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಅಪರ ಜಿಲ್ಲಾಧಿಕಾರಿ ಶಿವಾನಂದ ಬಿ.ಕರಾಳೆ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಲೋಕ ಅದಾಲತ್

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ**

ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿಯಿಂದ ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದಲ್ಲಿ ಶನಿವಾರ ಹಮ್ಮಿಕೊಳ್ಳಲಾದ ರಾಷ್ಟ್ರೀಯ ಲೋಕ ಅದಾಲತನಲ್ಲಿ ಮೋಟಾರು ವಾಹನ ವಿಮೆ ಪ್ರಕರಣ, ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳನ್ನು ಸಂಧಾನದ ಮೂಲಕ 163 ಪ್ರಕರಣಗಳನ್ನು ವಿಲೇವಾರಿಗೊಳಿಸಿ ಒಟ್ಟು 4,24,29,000 ರೂ.ಗಳ ಪರಿಹಾರ ಮೊತ್ತವನ್ನು ಮಂಜೂರು ಮಾಡಲಾಗಿದೆ ಎಂದು ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದ ಕಾನೂನು ಸೇವಾ ಸಮಿತಿಯ ಕಾರ್ಯದರ್ಶಿಗಳಾದ ಬಸವರಾಜ ಚೇಂಗಟಿ ಅವರು ತಿಳಿಸಿದ್ದಾರೆ.

# ಬಲಗೈ ಸಮುದಾಯಗಳ ಬೃಹತ್ ಹೋರಾಟದ ಕರಪತ್ರ ಬಿಡುಗಡೆ

ಮಲ್ಲಮ್ಮ ನುಡಿ ವಾರ್ತೆ

ಬೀದರಮಾರ್ಚ್15:ಬಲಗೈಸಮುದಾಯಗಳ ಒಳಮೀಸಲಾತಿ ಹೋರಾಟ ಸಮಿತಿ ಬೀದರ ವತಿಯಿಂದ ಮಂಗಳವಾರ ನಗರದಲ್ಲಿ ಬೃಹತ್ ಹೋರಾಟಕ್ಕೆ ಸಂಬಂಧಿಸಿದ ಕರಪತ್ರವನ್ನು ಬಿಡುಗಡೆ ಮಾಡಲಾಯಿತು.ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ಮಹೇಶ ಗೋರನಾಳಕರ್ ಮಾತನಾಡಿ,ರಾಜ್ಯದಲ್ಲಿ ಜಸ್ಟೀಸ್ ನಾಗಮೋಹನದಾಸ್ ಅವರ ಒಳಮೀಸಲಾತಿ ವರದಿಯಿಂದ ಉಂಟಾದ ಅವೈಜ್ಞಾನಿಕ ಗೊಂದಲದಿಂದ ಪ್ರವರ್ಗ (ಬಿ) ಹಾಗೂ ಪ್ರವರ್ಗ (ಸಿ) ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಅನ್ಯಾಯವಾಗುತ್ತಿದೆ ಎಂದು ಹೇಳಿದರು. ಯಾವುದೇ ಸಮುದಾಯದ ಹಕ್ಕನ್ನು ನಾವು ಕಸಿದುಕೊಳ್ಳಲು ಕೇಳುತ್ತಿಲ್ಲ. ನಮ್ಮಗೆ ದಕ್ಕಬೇಕಾದ ಮೀಸಲಾತಿಯನ್ನು ನೈತಿಕವಾಗಿ ಕೇಳುವುದು ನಮ್ಮ ಸ್ವಾಭಿಮಾನದ ಹಕ್ಕಾಗಿದೆ ಎಂದು ತಿಳಿಸಿದರು.

ಆದ್ದರಿಂದ ನಮ್ಮ 101 ಸಮುದಾಯಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಸರ್ಕಾರ ಬಿಂದು ಶ್ರೇಣಿಯಲ್ಲಿ ಉಂಟಾದ ಗೊಂದಲವನ್ನು ಸರಿಪಡಿಸಿ ನ್ಯಾಯ ನೀಡಬೇಕು ಎಂದು ಒತ್ತಾಯಿಸಿ, ಮಾರ್ಚ್ 17, 2026 ರಂದು ಬೀದರದಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಬೀದರ ವಿಶ್ವವಿದ್ಯಾಲಯದ ಸಿಂಡಿ-ಕೇಟ್ ಸದಸ್ಯರಾದ ವಿಠಲದಾಸ ಪ್ಯಾಗೆ ಮಾತನಾಡಿ, ಬಲಗೈ ಸಮುದಾಯವು ಒಳಮೀಸಲಾತಿಗೆ ವಿರೋಧಿಯಲ್ಲ. ಆದರೆ ಕೆಲವರು ಉದ್ದೇಶಪೂರ್ವಕವಾಗಿ ಬಲಗೈ ಸಮುದಾಯದ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಹೆಚ್.ಸಿ. ಮಹಾದೇವಪ್ಪಾ, ಡಾ.ಜಿ. ಪರಮೇಶ್ವರ ಹಾಗೂ ಪ್ರಿಯಾಂಕ್ ಖರ್ಗೆ ಅವರಿಗೆ ಅವಮಾನ ಮಾಡುವ ಮೂಲಕ ಸಮಾಜಗಳಲ್ಲಿ ದ್ವೇಷ ಹುಟ್ಟಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಆರೋಪಿಸಿದರು. ಇಂತಹ ಅಶಾಂತಿ ಮೂಡಿಸುವವರಿಗೆ ತಕ್ಕ ಉತ್ತರ ನೀಡುವುದಾಗಿ ಹೇಳಿದರು.

ಹಿರಿಯರಾದ ಡಾ.ಕಾಶಿನಾಥ ಚೆಲ್ವಾ ಮಾತನಾಡಿ, ಮಾರ್ಚ್ 17 ರಂದು ನಡೆಯುವ ಹೋರಾಟವು ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ನಡೆಯುತ್ತಿದೆ. ಬೀದರ ಜಿಲ್ಲೆಯ ಜನತೆ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಅನುಯಾಯಿಗಳು ತಮ್ಮ ಎಲ್ಲಾ ಕೆಲಸಗಳನ್ನು ಬದಿಗಿಟ್ಟು ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟದಲ್ಲಿ ಭಾಗವಹಿಸಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಸಮಿತಿಯ ಕಾರ್ಯಕಾರಿ ಸಮಿತಿ ಸದಸ್ಯರಾದ ಅರುಣ ಪಟೇಲ್, ಸಂಜುಕುಮಾರ ಸಾಗರ, ಪವನ ಮೀಟಾರೆ, ಪ್ರಕಾಶ ರಾವಣ, ರಾಹುಲ್ ಡಾಂಗೆ, ವಿನೋದ ಬಂದಗೆ, ಪ್ರದೀಪ್ ನಾಟೇಕರ್, ಸೂರ್ಯಕಾಂತ ಸಾಧೂರೆ, ಭೀಮರಾವ ಮಾಲಗತಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.ಪ್ರಮುಖರಾದ ಶಿವಕುಮಾರ ನಿಲಿಕಟ್ಟಿ, ರಾಜಕುಮಾರ ಮೂಲಭಾರತಿ, ಸಂಜುಕುಮಾರ ಮೇತ್ರೆ, ಉದಯ ನಾಯಕ, ಮುಕೇಶ್ ರಾಯ್, ಸುನೀಲ್ ಡೊಳೆ, ಮಲ್ಲಿಕಾರ್ಜುನ ಮೊಳಕೇರೆ, ಶಿವಕುಮಾರ ತುಂಗಾ, ಧನರಾಜ ಮುಸ್ತಾಪೂರ, ಸಂದೀಪ್ ಕಾಂಟೆ, ಸತೀಶ್ ಲಕ್ಕಿ, ಪುಟ್ಟು ದೀನೆ, ಶರಣು ಫುಲೆ, ಪ್ರವೀಣ ಕರಂಜೆ, ದಿನೇಶ್ ಶಿಂದೆ, ಸಂತೋಷ ಸೂರ್ಯವಂಶಿ, ವಿಠಲ ಕಾಂಬಳೆ, ಲಕ್ಷ್ಮಣ ಶೇರಿಕರ್, ತುಕಾರಾಮ ಯರನಳ್ಳಿ, ದಿಲೀಪ್ ಸನ್ನೂರಕರ್ ಹಾಗೂ ಶ್ರೀನಿವಾಸ ದಯಾಳ ಭಾಗವಹಿಸಿದ್ದರು.

ಮಹಿಳಾ ಮುಖಂಡರಾದ ಸುಧಾಮಣಿ ಗುಪ್ತಾ, ಗಂಗಮ್ಮ ಫುಲೆ, ರಂಜೀತಾ ಜೈನೋರ್, ಮಹಾದೇವಿ ನಿಲಿಕಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



# ವಾಣಿಜ್ಯ ಉದ್ದೇಶಕ್ಕೆ ಗೃಹ ಬಳಕೆ ಅನಿಲ ಬಳಸಿದರೆ ಕಾನೂನು ಕ್ರಮ



ವಿಜಯನಗರ (ಹೊಸಪೇಟೆ):

ಗೃಹ ಬಳಕೆಗಾಗಿ ರಿಯಾಯಿತಿ ದರದಲ್ಲಿ ನೀಡಲಾಗುವ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಜಿಲ್ಲೆಯ ವಾಣಿಜ್ಯ ಸಂಸ್ಥೆಗಳಲ್ಲಿ ನಿಯಮಬಾಹಿರವಾಗಿ ಬಳಸುತ್ತಿರುವುದನ್ನು ಪತ್ತೆ ಹಚ್ಚಲು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಆಹಾರ ನಿರೀಕ್ಷಕರು ಶನಿವಾರ ಜಿಲ್ಲೆಯಾದ್ಯಂತ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ಕಾರ್ಯಾಚರಣೆ ನಡೆಸಿದ ಅಧಿಕಾರಿಗಳ ತಂಡ ಹೋಟೆಲ್, ಬೇಕರಿ, ಫಾಸ್ಟ್ ಫುಡ್ ಸೆಂಟರ್, ಜನನಿಬಿಡ ಆಟೋ ಹಾಗೂ ಬಸ್ ನಿಲ್ದಾಣಗಳ ಬಳಿಯಿರುವ ಉಪಾಹಾರ ಮಂದಿರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ವೇಳೆ ಮಾಲೀಕರಿಗೆ ಗೃಹ ಬಳಕೆ ಸಿಲಿಂಡರ್‌ಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಸಬಾರದು. ಒಂದು ವೇಳೆ ನಿಯಮ ಉಲ್ಲಂಘಿಸಿ ಗೃಹ ಬಳಕೆ ಸಿಲಿಂಡರ್‌ಗಳನ್ನು ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡುವುದು ರುವುದು ಕಂಡುಬಂದಲ್ಲಿ, ಅಂತಹ ಸಿಲಿಂಡರ್‌ಗಳನ್ನು ವಶಪಡಿಸಿಕೊಳ್ಳುವುದರ ಜೊತೆಗೆ ಮಾಲೀಕರ ವಿರುದ್ಧ ಕಾನೂನು ರೀತ್ಯಾ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಆಹಾರ ಮತ್ತು ಆಹಾರ ನಾಗರಿಕರ ಸರಬರಾಜು ಇಲಾಖೆ ಉಪನಿರ್ದೇಶಕ ರಿಯಾಜ್ ಎಚ್ಚರಿಕೆ ನೀಡಿದರು.

# ಭಕ್ತಿ, ಸಂಸ್ಕೃತ್ತಿ ಸಹೋದರತ್ವವನ್ನು ಬೆಳೆಸುವ ಮಹತ್ವದ ಪರಂಪರೆ



ಮಲ್ಲಮ್ಮ ನುಡಿ ವಾರ್ತೆ ಬೀದರ

ಅಲ್ಲಮಪ್ರಭುವಿನ ಈ ಪವಿತ್ರ ಜಾತ್ರಾ ಮಹೋತ್ಸವವು ಗ್ರಾಮದಲ್ಲಿ ಭಕ್ತಿ, ಸಂಸ್ಕೃತಿ ಮತ್ತು ಸಹೋದರತ್ವವನ್ನು ಬೆಳೆಸುವ ಮಹತ್ವದ ಪರಂಪರೆ ಆಗಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಬೀದರ್ ದಕ್ಷಿಣ ಕ್ಷೇತ್ರದ ಅಷ್ಟೂರ ಗ್ರಾಮದಲ್ಲಿರುವ ಸುಪ್ರಸಿದ್ಧ ಶ್ರೀ ಅಲ್ಲಮಪ್ರಭು ದೇವಸ್ಥಾನದ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವರ ದರ್ಶನ ಪಡೆದು ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಜಾತ್ರಾ ಮಹೋತ್ಸವವು ಗ್ರಾಮದ ಎಲ್ಲ ಸಮಾಜದ ಪರಂಪರೆ ಮತ್ತು ಐಕ್ಯತೆಯನ್ನು ಪ್ರತಿಬಿಂಬಿಸುವ ಮಹತ್ವದ ಹಬ್ಬವಾಗಿದ್ದು, ಎಲ್ಲರ ಜೀವನದಲ್ಲಿ ಶಾಂತಿ, ಸಮೃದ್ಧಿ ಮತ್ತು ಸುಖವನ್ನು ತರಲಿ ಎಂದು ಹಾರೈಸಿದರು.

ಅಷ್ಟೂರ ಗ್ರಾಮದ ಸುಪ್ರಸಿದ್ಧ ಶ್ರೀ ಅಲ್ಲಮಪ್ರಭು ದೇವಸ್ಥಾನದಲ್ಲಿ ನಡೆಯುತ್ತಿರುವ ಈ ಪವಿತ್ರ ಜಾತ್ರಾ ಮಹೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶ ನನಗೆ ದೊರೆತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ದೇವಸ್ಥಾನವು ನಮ್ಮ ಪ್ರದೇಶದ ಭಕ್ತಿ, ಸಂಸ್ಕೃತಿ ಹಾಗೂ ಪರಂಪರೆಯ ಪ್ರತೀಕವಾಗಿದೆ.ಶ್ರೀ ಅಲ್ಲಮಪ್ರಭುಗಳ ಆಶೀರ್ವಾದದಿಂದ ನಮ್ಮ ಎಲ್ಲರ ಜೀವನದಲ್ಲಿ ಶಾಂತಿ, ಸಮೃದ್ಧಿ ಮತ್ತು ಸುಖ ಸದಾ ನೆಲೆಸಿರಲಿ ಎಂದು ಪ್ರಾರ್ಥಿಸುತ್ತೇನೆ. ಜಾತ್ರಾ ಮಹೋತ್ಸವಗಳು ನಮ್ಮ ಸಮಾಜದಲ್ಲಿ ಭಕ್ತಿ, ಐಕ್ಯತೆ ಹಾಗೂ ಸಹೋದರತ್ವವನ್ನು ಬಲಪಡಿಸುವ ಮಹತ್ವದ ಕಾರ್ಯಕ್ರಮಗಳಾಗಿವೆ. ಇಂತಹ ಧಾರ್ಮಿಕ ಕಾರ್ಯಕ್ರಮಗಳು ನಮ್ಮ ಸಂಸ್ಕೃತಿ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಮಹತ್ವದ ಪಾತ್ರ ವಹಿಸುತ್ತವೆ.

ಈ ಜಾತ್ರೆಯನ್ನು ಯಶಸ್ವಿಯಾಗಿ ಆಯೋಜಿಸಿರುವ ದೇವಸ್ಥಾನದ ಸಮಿತಿ ಸದಸ್ಯರು ಹಾಗೂ ಗ್ರಾಮದ ಎಲ್ಲ ಭಕ್ತರಿಗೆ ಹೃದಯಪೂರ್ವಕ ಅಭಿನಂದನೆಗಳು. ಶ್ರೀ ಅಲ್ಲಮಪ್ರಭುಗಳ ಕೃಪೆ ಸದಾ ನಿಮ್ಮೊಂದಿಗಿರಲಿ ಎಂದು ಹಾರೈಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಶ್ರೀಗಳಾದ ಸೋಮಶೇಖರ ಶಿವರಾಯ ವಡೆಯರ, ಶ್ರೀಮಂತ ವಡೇಯರ ದಿವ್ಯ ಸಾನಿಧ್ಯ ವಹಿಸಿದ್ದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂಗಮೇಶ ಹಳ್ಳಿ, ಮುಖಂಡರಾದ ಶಿವಕುಮಾರ ಸ್ವಾಮಿ, ಶಶಿಧರ ಪಾಟೀಲ, ನಾಗೇಶ ಪಾಟೀಲ್, ಶಿವಕುಮಾರ ನಾಗಲಗಿದ್ದಿ, ರಾಹುಲ, ಬಸಯ್ಯ ಸ್ವಾಮಿ, ಉಮೇಶ ರತನಗೊಂಡ, ರಾಜಕುಮಾರ ಪಾಟೀಲ್, ಬಿಜೆಪಿ ಬೀದರ್ ದಕ್ಷಿಣ ಯುವ ಮೋರ್ಚಾ ಅಧ್ಯಕ್ಷ ಶಿವಕುಮಾರ ಸುಲ್ತಾನಪುರ, ಬಾಬು, ಆಕಾಶ ಕೋಟೆ ಮತ್ತಿತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಲ್ಲಿ ಉನ್ನತ ಗುರಿ ಇರಲಿ:ಸಂಗಮೇಶ

ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ವಿದ್ಯಾರ್ಥಿಗಳು ಯಶಸ್ಸಿಗೆ ವಿದ್ಯಾರ್ಥಿ ದೆಸೆಯಲ್ಲೇ ಉನ್ನತ ಗುರಿ ಮತ್ತು ಸ್ಪಷ್ಟ ಕನಸುಗಳನ್ನು ಹೊಂದಿರಬೇಕು ಎಂದು ಪ್ರಥಮ ದರ್ಜೆ ಗುತ್ತಿಗೆದಾರ ಸಂಗಮೇಶ ಹುಣಜೆ ಮದಕಟ್ಟಿ ಹೇಳಿದರು.

ತಾಲೂಕಿನ ಮದಕಟ್ಟಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಭಾನುವಾರ ಆಯೋಜಿಸಿದ್ದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸತತ ಪ್ರಯತ್ನ, ಶಿಸ್ತುಬದ್ಧವಾದ ಯೋಜನಾ ಕ್ರಮ ರೂಢಿಸಿಕೊಂಡರೆ ಉನ್ನತ ಸಾಧನೆ ಮಾಡಲು ಸಾಧ್ಯ ಎಂದರು.

ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ದಿನಗಣನೇ ಶುರುವಾಗಿದ್ದು ವಿದ್ಯಾರ್ಥಿಗಳು ಯಾವುದೇ ಆತಂಕ ಗೊಂದಲಕ್ಕೆ ಒಳಗಾಗದೇ ಆತ್ಮವಿಶ್ವಾಸದಿಂದ ಪರೀಕ್ಷೆ ಎದುರಿಸಿ ಯಶಸ್ಸು ಕಂಡು ಕೊಳ್ಳಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಗುರು ಅಶೋಕರಾವ ಬರ್ಮಾ ಮಾತನಾಡಿ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಶಾಲೆಗೆ ಕೀರ್ತಿ ತಂದು ಕೊಡಬೇಕು ಎಂದು ತಿಳಿಸಿದರು. ದೈಹಿಕ ಶಿಕ್ಷಣ ಹಣಮಂತ ಕಾರಾಮುಂಗೆ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಶಿಕ್ಷಕರಾದ ದೀಪಕ ಹೊನ್ನಾಳೆ, ಪಂಚಯ್ಯ ಹಿರೇಮಠ, ಬಾಲಾಜಿ ಕಾಂಬಳೆ, ಕವಿರತ್ನ ಬರ್ಮಾ, ಮುರಳೀಧರ ಮಾನೆ ಸೇರಿದಂತೆ ಹಲವರು ಇದ್ದರು.



ಭಾಲ್ಕಿ ತಾಲೂಕಿನ ಮದಕಟ್ಟಿ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ನಡೆದ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರ ಸಂಗಮೇಶ ಹುಣಜೆ ಮದಕಟ್ಟಿ ಅವರನ್ನು ಸನ್ಮಾನಿಸಲಾಯಿತು. ಮುಖ್ಯಗುರು ಅಶೋಕರಾವ ಬರ್ಮಾ, ಹಣಮಂತ ಕಾರಾಮುಂಗೆ, ಕವಿರತ್ನ ಬರ್ಮಾ ಸೇರಿದಂತೆ ಹಲವರು ಇದ್ದರು.

> ಪ್ರಸ್ತುತ ಎಸ್ಸೆಸ್ಸೆಲ್ಸಿಯಲ್ಲಿ ಈ ಶಾಲೆಯಿಂದ ತಾಲೂಕಿಗೆ ಪ್ರಥಮ ಸ್ಥಾನ ಪಡೆಯುವ ವಿದ್ಯಾರ್ಥಿಗೆ ವೈಯಕ್ತಿಕವಾಗಿ ವಿಶೇಷ ಬಹುಮಾನ ನೀಡಿ ಪ್ರೋತ್ಸಾಹಿಸಲಾಗುವುದು.
>
> – ಸಂಗಮೇಶ ಹುಣಜೆ ಮದಕಟ್ಟಿ ಪ್ರಥಮ ದರ್ಜೆ ಗುತ್ತಿಗೆದಾರರು ಭಾಲ್ಕಿ

# ರಸ್ತೆ ಮಧ್ಯೆ ಕುರಿ ಬಜಾರ : ಸಂಚಾರಕ್ಕೆ ಅಡಚಣೆ, ಸ್ಥಳಾಂತರಕ್ಕೆ ಆಗ್ರಹ

ಮಲ್ಲಮ್ಮನುಡಿ ಹುಣಸಗಿ: ಪಟ್ಟಣದಲ್ಲಿ ಪ್ರತಿ ರವಿವಾರ ನಡೆಯುವ ಕುರಿ ಸಂತೆ ಸಂಚಾರಕ್ಕೆ ತೀವ್ರ ಅಡಚಣೆ ಉಂಟುಮಾಡುತ್ತಿದೆ ಎಂದು ನಾಗರಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಟ್ಟಣದ ಎಪಿಎಂಸಿ ಮುಂದೆ ಹಾದುಹೋಗುವ ಮುಖ್ಯ ರಸ್ತೆಯಿಂದ ಬಸವೇಶ್ವರ ವೃತ್ತದವರೆಗೆ ಬೆಳಿಗ್ಗೆ 7 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ರಸ್ತೆ ಮಧ್ಯೆಯೇ ಕುರಿ ವ್ಯಾಪಾರ, ಹಣ್ಣು ಮಾರಾಟ ಹಾಗೂ ಒತ್ತಾಗಾಡಿಗಳ ಮೇಲೆ ವಿವಿಧ ವಸ್ತುಗಳ ವ್ಯಾಪಾರ ನಡೆಯುತ್ತಿರುವುದರಿಂದ ಸಾರ್ವಜನಿಕರ ವಾಹನ ಓಡಾಡಲು ತುಂಬಾ ಕಷ್ಟವಾಗುತ್ತಿದೆ.ಈ ರಸ್ತೆ ರಾಯಚೂರು, ಗುಲ್ಬರ್ಗ, ಯಾದಗಿರಿ, ಹೈದ್ರಾಬಾದ್, ವಿಜಯಪುರ, ಬಾಗಲಕೋಟೆ, ಹುಬ್ಬಳ್ಳಿ ಹಾಗೂ ಧಾರವಾಡ ಸೇರಿದಂತೆ ಅನೇಕ ನಗರಗಳಿಗೆ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದ್ದು, ರವಿವಾರದಂದು ಕುರಿ ಸಂತೆ ನಡೆಯುವ ಕಾರಣದಿಂದ ವಾಹನ ಸಂಚಾರದಲ್ಲಿ ಗೊಂದಲ ಉಂಟಾಗುತ್ತದೆ. ಬಸ್‌ಗಳು ಸೇರಿದಂತೆ ಸಾರ್ವಜನಿಕ ವಾಹನಗಳು ಸಂಚರಿಸಲು ಬಹಳ ತೊಂದರೆ ಅನುಭವಿಸುತ್ತಿವೆ ಎಂದು ಸ್ಥಳೀಯರು ತಿಳಿಸಿದ್ದಾರೆ. ಹುಣಸಗಿ ತಾಲೂಕು ಕೇಂದ್ರವಾಗಿರುವುದರಿಂದ ಪಟ್ಟಣವು ದಿನದಿಂದ ದಿನಕ್ಕೆ ವೇಗವಾಗಿ ಬೆಳೆಯುತ್ತಿದ್ದು ಜನಸಂಚಾರವೂ ಹೆಚ್ಚುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ರಸ್ತೆ ಮಧ್ಯೆಯೇ ನಡೆಯುತ್ತಿರುವ ಸಂತೆ ಸಂಚಾರ ಸಮಸ್ಯೆಯನ್ನು ಮತ್ತಷ್ಟು ಗಂಭೀರಗೊಳಿಸಿದೆ.



### ಕುರಿ ಸಂತೆಗೆ ಪರ್ಯಾಯ ಸ್ಥಳದ ಕುರಿತು ಚರ್ಚೆ

ಹುಣಸಗಿ ಪಟ್ಟಣದಲ್ಲಿ ನಡೆಯುವ ಕುರಿ ಸಂತೆಯಿಂದ ಸಾರ್ವಜನಿಕರಿಗೆ ಅನಾನುಕೂಲ ಉಂಟಾಗುತ್ತಿರುವ ಬಗ್ಗೆ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಪಟ್ಟಣ ಪಂಚಾಯತ್ ಅಧ್ಯಕ್ಷರು, ಸದಸ್ಯರು ಹಾಗೂ ಹುಣಸಗಿ ಪಟ್ಟಣದ ಮುಖಂಡರ ಸಭೆಯನ್ನು ಶೀಘ್ರದಲ್ಲೇ ಕರೆಯಲಾಗುತ್ತದೆ. ಸಭೆಯಲ್ಲಿ ಕುರಿ ಸಂತೆಯನ್ನು ಬೇರೆ ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸುವ ಕುರಿತು ಚರ್ಚಿಸಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು.

–ಅರುಣಕುಮಾರ
ಮುಖ್ಯಾಧಿಕಾರಿಗಳು ಪಟ್ಟಣ ಪಂಚಾಯತ ಹುಣಸಗಿ

### ಸಾರ್ವಜನಿಕರಿಗೆ ಅನುಕೂಲವಾಗುವಂತೆ ಕ್ರಮ

ಈ ಕುರಿತು ಪಟ್ಟಣ ಪಂಚಾಯತ್ ಅಧಿಕಾರಿಗಳು ಹಾಗೂ ಪಟ್ಟಣ ಪಂಚಾಯತ್ ಅಧ್ಯಕ್ಷರೊಂದಿಗೆ ಮಾತುಕತೆ ನಡೆಸಿ ಕುರಿ ಸಂತೆಯ ಸ್ಥಳಾಂತರದ ಬಗ್ಗೆ ಮಾಹಿತಿ ಪಡೆದುಕೊಳ್ಳಲಾಗುವುದು. ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಆದಷ್ಟು ಬೇಗ ಸೂಕ್ತ ಕ್ರಮ ಕೈಗೊಳ್ಳಲು ಸಹಕಾರ ನೀಡಲಾಗುವುದು.

ಚಂದ್ರಶೇಖರ ದಂಡಿನ
ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಹುಣಸಗಿ.

# 625 ಅಂಕ ಗಳಿಸಿದವರಿಗೆ 2 ತೊಲೆ ಬಂಗಾರ ಗಿಫ್ಟ್: ಬಿರಾದಾರ್



• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ತಾಲೂಕಿನ ಸರ್ಕಾರಿ ಪ್ರೌಢಶಾಲೆ ಉಡಮಗಲ ಖಾನಾಪೂರದಲ್ಲಿ ಎಸ್ .ಎಸ್ .ಎಲ್ ಸಿ ಯ ವಿದ್ಯಾರ್ಥಿಗಳ ಬಿಳ್ಕೊಡುವ ಸಮಾರಂಭ.ಸರಸ್ವತಿ ಪೂಜೆ.ಹಾಗೂ ಶಾಲೆಯ 2025ನೇ ಸಾಲಿನ ಟಾಪರ್ಸ್ ವಿದ್ಯಾರ್ಥಿಗಳಿಗೆ ಸನ್ಮಾನ ಸಮಾರಂಭ ಕಾರ್ಯಕ್ರಮವು ದಿನಾಂಕ 14.03.2025 ರಂದು ಜರುಗಿತು. ಮೊದಲಿಗೆ ಸರಸ್ವತಿಯ ಪೂಜೆ ಕಾರ್ಯಕ್ರಮದಲ್ಲಿ ಶಾಲಾ ಎಸ್. ಡಿ. ಎಂ. ಸಿ ಅಧ್ಯಕ್ಷರಾದ ಖಾನಾಪೂರದಯ್ಯ ಹಾಗೂ ಸದಸ್ಯರಾದ ವೀರೇಶ್ ಪೂಜಾರಿ ಅವರು ಸರಸ್ವತಿಯ ಭಾವಚಿತ್ರಕ್ಕೆ ಮಾಲಾರ್ಪಣೆ ಮತ್ತು ಪುಷ್ಪಾರ್ಪಣೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಶಾಲೆಯ ಕನ್ನಡ ಕಲಾ ಶಿಕ್ಷಕರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹ ಕಾರ್ಯದರ್ಶಿಯಾದ ಡಾ ದಂಡಪ್ಪ ಬಿರಾದಾರ್ ಮಾತನಾಡುತ್ತಾ. ಕಳೆದ ಸಲ ಪರೀಕ್ಷೆ ನಮ್ಮ ಶಾಲೆಯ ಬಹಳ ಉತ್ತಮವಾಗಿತ್ತು.ಈ ಸಲ ಎಸ್ ಎಸ್ ಎಲ್ ಸಿ ಪರೀಕ್ಷೆ ಅದಕ್ಕಿಂತಲೂ ಅತ್ಯುತ್ತಮವಾಗಿ ಬರಬೇಕು. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಗಾಗಿ ಹಲವಾರು ರೂಪರೇಷೆಗಳನ್ನು ಮಾಡಲಾಗಿದೆ.ಈ ಸಲದ ಫಲಿತಾಂಶಕ್ಕಾಗಿ ಹೆಚ್ಚು ಮುತುವರ್ಜಿಯನ್ನು ವಹಿಸಿ ಹಲವಾರು ಯೊಜನೆಗಳನ್ನು ಮಾಡಿದೆ. ನಮ್ಮ ಶಾಲಾ ವಿದ್ಯಾರ್ಥಿಗಳು ಈ ಸಲ ಬೋರ್ಡ್ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಗಳಿಸಿದರೆ ನಮ್ಮ ತಂದೆಯವರಾದ ದಿವಂಗತ ಅಯ್ಯಪ್ಪ ಬಿರಾದಾರ ಇವರ ಹೆಸರಿನ ಮೇಲೆ ಒಂದು ತೊಲೆ ಬಂಗಾರವನ್ನು ಕೊಡುತ್ತೇನೆ.

ಜೊತೆಗೆ ಶಿಕ್ಷಣ ಪ್ರೇಮಿಗಳು ಸರಳ ಜೀವಿಗಳು ಸದಾ ಕ್ರಿಯಾಶೀಲತೆಯನ್ನು ರೂಢಿಸಿಕೊಂಡಿರುವ ರಾಯಚೂರಿನ ತಾಲೂಕಿನ ತಾಲೂಕ ದಂಡಾಧಿಕಾರಿಗಳು ಹಾಗೂ ತಹಸೀಲ್ದಾರ್ ಸುರೇಶ್ ವರ್ಮ ಅವರು ನಮ್ಮ ಶಾಲೆಗೆ ಭೇಟಿ ನೀಡಿ ಮಕ್ಕಳ ಶೈಕ್ಷಣಿಕ ಸಾಧನೆ.ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಅಭ್ಯಾಸದ ಕುರಿತು ಸಲಹೆ ಸೂಚನೆಗಳನ್ನು ನೀಡಿ. ಅವರು ಸಹ ಒಂದು ತೊಲೆ ಬಂಗಾರವನ್ನು ಕೊಡುವುದಾಗಿ ಶಾಲಾ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ಸಮಕ್ಷಮದಲ್ಲಿ ಪ್ರಕಟಣೆ ಮಾಡಿದ್ದಾರೆ.

ಆದ್ದರಿಂದ ವಿದ್ಯಾರ್ಥಿಗಳೇ ಚೆನ್ನಾಗಿ ಓದಿರಿ ಈಗಾಗಲೇ ನಮ್ಮ ಶಾಲಾ ಶಿಕ್ಷಕರು ಸಕಲರು ಅತ್ಯಂತ ಮುತುವರ್ಜ ವಹಿಸಿ ತಮ್ಮನ್ನು ಪರೀಕ್ಷೆ ಸಲುವಾಗಿ ಅತ್ಯುತ್ತಮವಾಗಿ ಸಿದ್ದ ಮಾಡಿದ್ದಾರೆ.ಪರೀಕ್ಷೆಯಲ್ಲಿ ಉತ್ತಮ ರೀತಿಯಲ್ಲಿ ಏರ್ಧೆ ಆಗುವುದರ ಮೂಲಕ ಶಿಕ್ಷಣ ಕಲಿಸಿದವರಿಗೂ ಮತ್ತು ಶಾಲೆಗೆ ಕೀರ್ತಿ ತಂದು ನಾವು ಕೊಡುವ ಕಾಣಿಕೆ ಅಥವಾ ಬಹುಮಾನವನ್ನು ಪಡೆದು ಶಾಲಿ ಇಲಾಖೆಗೆ ಕೀರ್ತಿ ತರಬೇಕೆಂದು ಡಾ. ಬಿರಾದಾರ ಹೆಳಿದರು.

ಶಾಲಾ ಮುಖ ಗುರುಗಳಾದ ವೀರೇಶ್ ಅಂಗಡಿ ಮಾತನಾಡುತ್ತಾ ನಮ್ಮ ಶಾಲಾ ಶಿಕ್ಷಕ ವೃಂದದವರು ವಿಶೇಷವಾಗಿ ಈ ಸಲ ಹೆಚ್ಚು ಆಸಕ್ತಿವಹಿಸಿ ವಿಶೇಷ ತರಗತಿಗಳನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ.

ಈಗಾಗಲೇ ಬಿರಾದರ ಸರ್ ಅವರು ಕೆಲವು ವಿಷಯಗಳಲ್ಲಿ ನೂರಕ್ಕೆ ನೂರು ಅಂಕಗಳಿಸಿದಂತ ವಿದ್ಯಾರ್ಥಿಗಳಿಗೆ ಬೆಳ್ಳಿ ಪದಕ ನೀಡಿ ಅವರು ಜುಲೈ 20 25 ರಲ್ಲಿ ಸನ್ಮಾನಿಸಿದ್ದರು.ಈ ಸಲ ಮತ್ತೆ 625ಕ್ಕೆ 625 ಅಂಕಗಳನ್ನು ಗಳಿಸಿದರೆ ಅವರು ಮತ್ತು ತಹಶೀಲ್ದಾರ್ ಸುರೇಶ್ ವರ್ಮ ಸರ್ ಒಂದು ತೊಲೆ ಬಂಗಾರ ಪ್ರಕಟಣೆ ಮಾಡಿದ್ದಾರೆ.

ಅವರಿಗೆ ಶಾಲಾವತಿಯಿಂದ ಧನ್ಯವಾದಗಳು.ಇಂದು ಸಹ ಮೂವರು ವಿದ್ಯಾರ್ಥಿಗಳಿಗೆ ಬಿರಾದಾರ ಅವರ ತಂದೆಯವರಾದ ದಿವಂಗತ ಅಯ್ಯಪ್ಪ ಬಿರಾದಾರ ಹೆಸರಿನ ಮೇಲೆ ಈ ವರ್ಷ ಸನ್ಮಾನವನ್ನ ಮಾಡಿದ್ದಾರೆ.ಮತ್ತು ಕನ್ನಡ ವಿಷಯದಲ್ಲಿ125ಕ್ಕೆ 125 ಅಂಕಗಳನ್ನು ಗಳಿಸಿದ ಪಲ್ಲವಿ ಹೂಗಾರರಿಗೆ ಸರಸ್ವತಿ ಶಿಕ್ಷಕಿಯು ಅವರು ಒಂದು ಸಾವಿರ ನಗುದು ಬಹುಮಾನವನ್ನ ನೀಡಿದ್ದಾರೆ. ಅದೇ ರೀತಿಯಾಗಿ ಹಿಂದಿ ವಿಷಯದಲ್ಲಿ ನೂರಕ್ಕೆ ನೂರು ಅಂಕಗಳು ಗಳಿಸಿದ ಶ್ರೀಧರ್ ಇವರಿಗೆ ನಫೀಸ ಅಂಜುಮ್ ಶಿಕ್ಷಕಿಯು ಒಂದು ಸಾವಿರ ಬಹುಮಾನವನ್ನ ನೀಡಿದ್ದಾರೆ. ನಮ್ಮ ಶಾಲಾ ಶಿಕ್ಷಕರಿಂದ ನಿಮ್ಮ ಮೇಲಿರುವ ಅಭಿಮಾನ. ಪ್ರೀತಿ. ಗೌರವ ಎಷ್ಟೇ ಇದೆ ಎಂಬುದು ಇದು ಎಲ್ಲವೂ ಸಾಕ್ಷಿಯಾಗಿವೆ.

ಆ ನಿಟ್ಟಿನಲ್ಲಿ ತಾವು ಚೆನ್ನಾಗಿ ಅಭ್ಯಾಸ ಮಾಡಬೇಕು ನಿಮ್ಮ ಶೈಕ್ಷಣಿಕೆ ಸಾಧನೆ ನಮ್ಮ ಶಾಲೆಗೆ ಕೀರ್ತಿ ಎಂದು ಹೇಳಿದರು .ಮಕ್ಕಳ ಕಾರ್ಯ ಚಟುವಟಿಕೆಗಳು ಕುರಿತು ಅಭ್ಯಾಸದ ಕುರಿತು ಶಾಲಾ

ಶಿಕ್ಷಕಿಯರಾದ .ಸಾವಿತ್ರಿ. ವೀಣಾ ಕುಲಕರ್ಣಿ. ಶಿವಲೀಲಾ ನಫಿಜಾ ಅಂಜುಮ್ ರವರು ಮಾತನಾಡಿದರು. ಸರಸ್ವತಿ ಶಿಕ್ಷಕಿಯು ಶಾಲಾ ವರದಿಯನ್ನು ಓದಿದರು. ಶಾಲಾ ದೈಹಿಕ ಶಿಕ್ಷಣ ಶಿಕ್ಷಕರು. ತಾಲೂಕ ದೈಹಿಕ ಶಿಕ್ಷಣ ಪ್ರವೀಕ್ಷಕರಾದ ಪರಶುರಾಮ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಣೆ ಮಾಡಿದರು .ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಾದ ಪ್ರಮೋದ್ ಕುಮಾರ್ .ತನುಜಾ ಗೀತಾ .ಅಂಕಿತಾ .ಸೇರಿದಂತೆ ಇನ್ನಿತರರು ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹೇಳಿದರು .ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಸಾಂಕೇತಿಕವಾಗಿ ಎಸ್ ಎಸ್ ಎಲ್ ಸಿ ಯ ಹಾಲ್ ಟಿಕೆಟ್ ನೀಡಲಾಯಿತು. ಗೋಯಿಂಗ್ ಟು ಸ್ಕೂಲ್, ಏನ್. ಜಿ.ಒ.ಸಂಸ್ಥೆಯ ನರಸಪ್ಪ .ನೀಲಕಂಠ ರಾಯ. ಕಾರ್ಯಕ್ರಮ ಆಯೋಜನೆ ಮಾಡುವ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು . ನಂತರ ವಿದ್ಯಾರ್ಥಿಗಳಿಗೆ ಸಿಹಿ ಭೋಜನ ವ್ಯವಸ್ಥೆಯನ್ನು ಮಾಡಲಾಯಿತು.

# ತಾಲೂಕು ನ್ಯಾಯಾಲಯದ ಸ್ಥಳ ಪರಿಶೀಲನೆ ನಡೆಸಿದ ಹೈಕೋರ್ಟ್ ನ್ಯಾಯಮೂರ್ತಿ ಸಿ.ಎಂ. ಪೂಣಚ್ಚ



ಮಲ್ಲಮ್ಮ ನುಡಿವಾರ್ತೆ ಕುಕನೂರು

ಪಟ್ಟಣದಲ್ಲಿ ನೂತನವಾಗಿ ಮಂಜೂರಾಗಿರುವ ತಾಲೂಕು ನ್ಯಾಯಾಲಯದ ಕಟ್ಟಡ ನಿರ್ಮಾಣಕ್ಕಾಗಿ ಗುರುತಿಸಲಾದ ಜಾಗಕ್ಕೆ ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯಮೂರ್ತಿಗಳಾದ ಸಿ.ಎಂ. ಪೂನ್ನಚ್ಚ ಅವರು ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿದರು.

ಸ್ಥಳಪರಿಶೀಲನೆ:–ನ್ಯಾಯಮೂರ್ತಿ ಸಿಎಂ ಪೂನ್ನಚ್ಚ ಕುಕನೂರು ಪಟ್ಟಣದ 19 ವಾರ್ಡ್‌ನ ಗುದ್ನೆಪ್ಪನ ಮಠದಲ್ಲಿ ಪ್ರಸ್ತಾವಿತ ಜಾಗದ ವಿಸ್ತೀರ್ಣ, ಸುತ್ತಮುತ್ತಲಿನ ಪರಿಸರ ಮತ್ತು ಸಾರ್ವಜನಿಕರಿಗೆ ಇರುವ ಸಂಪರ್ಕ ವ್ಯವಸ್ಥೆಯನ್ನು ಕೂಲಂಕಷವಾಗಿ ಪರಿಶೀಲಿಸಿದರು.

ಈಗಾಗಲೇ ಈ ಜಮೀನಿನ ವಿಚಾರವಾಗಿ ಕೋರ್ಟ್ ಹಂತದಲ್ಲಿ ಇರುವುದರಿಂದ ಆದಷ್ಟು ಬೇಗ ಈ ಜಾಗದ ಇತ್ಯರ್ಥಗೊಂಡ ನಂತರ ಕಟ್ಟಡ ನಿರ್ಮಾಣಕ್ಕೆ ಯಾವುದೇ ತಾಂತ್ರಿಕ ತೊಂದರೆಗಳಿಲ್ಲದಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಸಿ. ಚಂದ್ರಶೇಖರ್. ಕೊಪ್ಪಳ ಹೆಚ್ಚುವರಿ

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಕುಮಾರ ಡಿ. ಕೆ, ತಾಲೂಕು ನ್ಯಾಯಾಧೀಶರು, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗತ್ತಿ , ಕೊಪ್ಪಳ ಡಿವೈಎಸ್ ಪಿ ಮುತ್ತಣ್ಣ ಸರ್ವಗೋಳ್, ಕುಕನೂರು ತಹಶೀಲ್ದಾರ್ ಬಸವರಾಜ್ ಬೆಣ್ಣೆಶಿರೂರು ಹಾಗೂ ಯಲಬುರ್ಗಾ ಕುಕನೂರು ವಕೀಲರ ಸಂಘದ ಅಧ್ಯಕ್ಷ ಸುಭಾಸ್ ಎಸ್ ಹೊಂಬಾಳ ಸೇರಿದಂತೆ ಪದಾಧಿಕಾರಿಗಳು, ಹಾಗೂ ಇಲಾಖೆಯ ಪ್ರಮುಖ ಅಧಿಕಾರಿಗಳು ಉಪಸ್ಥಿತರಿದ್ದರು.

# ಮಕ್ಕಳಲ್ಲಿ ಕಲೆ ಸಾಹಿತ್ಯ ಸಂಸ್ಕೃತಿ ಬೆಳೆಸಿ: ಬೋಯಿನ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಮಕ್ಕಳಲ್ಲಿರುವ ಕಲೆ ಸಾಹಿತ್ಯ ಸಾಂಸ್ಕೃತಿಕ ಬೆಳೆಸುವಲ್ಲಿ ಈ ಶಾಲೆಯ ಕಾರ್ಯ ಶ್ಲಾಘನೀಯವಾಗಿದೆ ಎಂದು ತಾಲೂಕು ಪಂಚಾಯತಿ ಮಾಜಿ ಸದಸ್ಯ ಹಣಮಂತಪ್ಪ ಬೋಯಿನ್ ಹೇಳಿದರು. ತಾಲೂಕಿನ ಬಳಿಚಕ್ರ ಗ್ರಾಮದ ಶ್ರೀ ಭಕ್ತಿಲಿಂಗೇಶ್ವರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು 8ನೇ ತರಗತಿ ಮಕ್ಕಳ ಬಿಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಮಾನಗಳಲ್ಲಿ ಮಕ್ಕಳಲ್ಲಿ ಇರುವ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಮರೆಮಾಚಿ ಹೋಗಿದೆ, ಆದರೂ ಈ ಶಾಲೆಯಲ್ಲಿ ವಿಶಿಷ್ಟತೆ ಹೊಂದಿರುವ ಈ ಭಾಗದ ಏಕೈಕ ಖಾಸಗಿ ಶಾಲೆಯಾಗಿದೆ, ಬಾಲ್ಯವಹಿಸಿನಿಂದಲೇ ಕಲೆ ಸಾಹಿತ್ಯ ಸಂಸ್ಕೃತಿಯನ್ನು ಮಕ್ಕಳಲ್ಲಿ ಮೂಡಿಸುವಂತಹ ಅಭಿವೃದ್ಧಿ ಹೊಂದಿದೆ ಎಂದು ಹೇಳಿದ.

ಶ್ರೀ ಭಕ್ತಿಲಿಂಗೇಶ್ವರ ಮಠದ ಕಾರ್ಯದರ್ಶಿ ತಾಯಪ್ಪ ಬೊಮ್ಮಣ್ಣ ಮಾತನಾಡಿ ಮಠದ ಅಭಿವೃದ್ಧಿಗೆ ಸರ್ವರ ಸಹಕಾರ ಸಹಾನುಮತದಿಂದ ಸಾಗಿದೆ, ಭಕ್ತರ ಮಕ್ಕಳ ಜೀವನವನ್ನು ರೂಪಿಸುವ ಕಾರ್ಯವನ್ನು ಶ್ರೀಮಠ ಮಾಡುತ್ತಿದೆ, ಮಕ್ಕಳ ಕಲ್ಯಾಣಕ್ಕಾಗಿ ಈ ಗ್ರಾಮಕ್ಕೆ ಲಿಂಗೈಕ್ಯ ಶ್ರೀ ರಾಜು ಮುತ್ಯ ಅವರು ಆಗಮಿಸಿ ಅನುಷ್ಠಾನ ಪೂರ್ಣಗೊಳಿಸಿ ಶ್ರೀಮಠವನ್ನ ಸ್ಥಾಪನೆ ಮಾಡಿ ಭಕ್ತರ ಮತ್ತು ಅವರ ಮಕ್ಕಳನ್ನ ಲೋಕಕಲ್ಯಾಣ ಮಾಡಲು ಹೊರಟಿದ್ದು, ಅವರ ವಾಕ್ಯಗಳು ಮತ್ತು ಸಿದ್ಧಾಂತಗಳನ್ನ ನಾವು ನೀವು ಪಾಲಿಸೋಣ ಎಂದು ಹೇಳಿದರು. ಈ ಸಂಧರ್ಭದಲ್ಲಿ ಕಾರ್ಯಕ್ರಮದ ಅಧ್ಯಕ್ಷತೆ ಮಲ್ಲಣ್ಣ ಬಡಿಗೇರ, ನಿವೃತ್ತ ಮುಖ್ಯ ಗುರು ಕೆ.ಆರ್ ಚೌಹಾನ, ಸಿಪಿಐ ಶಿವಾನಂದ ಮುರುಳಿ, ಸೋಮಶೇಖರ್ ಸ್ವಾಮಿ, ಕಮಲ ರಾಥೋಡ, ವಿಶ್ವರಾಧ್ಯ, ವಿನೋದ್ ರಾಥೋಡ, ಮುಕ್ಕಣ್ಣ ಬಡಿಗೇರ, ಭೀಮಣ್ಣಗೌಡ, ಭದ್ರಪ್ಪ ಪಲಿಮೆನ್, ಮಯಣಗೌಡ, ಬನ್ನಪ್ಪ ಕಾಳಬಳಗುಂದಿ, ಮಲ್ಲಪ್ಪ ಕಾಳಬಳಗುಂದಿ, ಪತ್ರಕರ್ತ ದೇವಿಂದ್ರ, ಭದ್ರಪ್ಪ ಬೋಳೇರ್, ಸಾಬಣ್ಣ ನೀಲಹಳ್ಳಿ, ಹಣಮಂತ ಜಾದವ, ಗೋಪಾಲ್ ರಾಥೋಡ, ಹಣಮಂತ ಕಿಲ್ಲಕೇರಾ ಮತ್ತು ಬಳಿಚಕ್ರ ಗ್ರಾಮದ ಯುವಕರು ಹಾಗೂ ಪೋಷಕರು ಮುದ್ದು ಮಕ್ಕಳು ಇದ್ದರು. ವಿದ್ಯಾರ್ಥಿಗಳು ವಿವಿಧ ಬಗೆಯ ನೃತ್ಯಗಳು, ಸಾಂಸ್ಕೃತಿಕ ಸಾಮಾಜಿಕ ನಾಟಕ ಪ್ರದರ್ಶನ ಮಾಡಿ ಹುಡುಗರ ಗಮನ ಸೆಳೆದವು.

# ಶ್ರದ್ದೆಯಿಂದ ಓದಿದರೆ ಸಾಧನೆ ಕಷ್ಟವಲ್ಲ: ಶರಣಪ್ಪ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಕಷ್ಟಪಟ್ಟು ಶ್ರದ್ದೆಯಿಂದ ಓದಿದರೆ ಸಾಧನೆ ಕಷ್ಟವೇ ಅಲ್ಲ, ಜೀವನದಲ್ಲಿನ ಕನಸು ನನಸಾಗಬೇಕೆಂದರೆ ಸತತ ಪರಿಶ್ರಮ ಮತ್ತು ಶ್ರದ್ದೆಯಿಂದ ಪರೀಕ್ಷೆ ಎದುರಿಸಿದಾಗ ಮಾತ್ರ ಯಶಸ್ಸು ಸಿಗಲು ಸಾಧ್ಯವಾಗುತ್ತದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಮಾನೇಗಾರ ಯರಗೋಳ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಯರಗೋಳ ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ನಡೆದ ಬೀಳ್ಕೊಡಿಗೆ ಸಮಾರಂಭ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಅವರು ಮಾತನಾಡಿದರು. ನಿಮ್ಮಲ್ಲಿರುವ ಆತ್ಮ ವಿಶ್ವಾಸವನ್ನು ಬೆಳಸಿಕೊಳ್ಳಿ, ನಿಮ್ಮಲ್ಲಿನ ಸಾಮಾರ್ಥ್ಯದ ಮೇಲೆ ನೀವು ನಂಬಿಕೆ ಇಟ್ಟರೆ ಮಾತ್ರ ಒಳ್ಳೆಯ ಫಲಿತಾಂಶ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕೆಲವೊಮ್ಮೆ ನಮ್ಮಲ್ಲಿರುವ ಶಕ್ತಿ ನಮಗೇ ಗೊತ್ತಿರುವುದಿಲ್ಲ. ಹೀಗಾಗಿ ಸ್ವಾಮೀ ವಿವೇಕಾನಂದರು ಶಿಕ್ಷಣದ ಕುರಿತು ಮಗುವಿನಲ್ಲಿರುವ ದೈವತ್ವವನ್ನು, ಸಾಮಾರ್ಥ್ಯವನ್ನು ಹೊರಗೆಳೆಯುವುದೇ ಶಿಕ್ಷಣ ಎಂದು ಹೇಳಿದ್ದಾರೆ ಎಂದರು.

ಮನೆಯಲ್ಲಿ ಬಡತನವಿದೆ ಎಂದು ಯಾರು ನಿರಾಶೆಯಾಗಬಾರದು. ಸಾಧಿಸುವ

ಹಂಬಲವಿದ್ದರೆ ಯಾವುದೂ ಅಸಾಧ್ಯವಲ್ಲ. ಎಂತಹ ಪ್ರತಿ–ಕೂಲ ಪರಿಸ್ಥಿತಿಯಲ್ಲೂ ಸಾಧನೆ ಮಾಡಬಹುದಾಗಿದೆ. ಯಾವುದೇ ಗುರಿ ತಪ್ಪಲ್ಲ. ಆದರೆ ಆ ನಿಮ್ಮ ಗುರಿ ದೊಡ್ಡದಾಗಿರಬೇಕು. ಜೀವನದಲ್ಲಿ ಗುರಿ ಇಟ್ಟುಕೊಂಡು ಕನಸು ಕಾಣಬೇಕಾದರೆ ಅದಕ್ಕೆ ಯಾವುದೇ ರೀತಿಯಾಗಿ ಬಾರ್ಡರ್ ( ಸೀಮೆ) ಮಿತಿ ಇರುವುದಿಲ್ಲ. ನಾನು ಸಹ ಹಳ್ಳಿಯಿಂದ ಬಂದಿದ್ದೇನೆ ಎಂದು ತಮ್ಮ ಬಾಲ್ಯದ ನೆನೆಪನ್ನು ವಿದ್ಯಾರ್ಥಿಗಳಿಗೆ ಹೇಳಿದರು. ಯಾವುದೇ ಸಾಧನೆ ಸುಲಭವಲ್ಲ, ಕಷ್ಟವು ಅಲ್ಲ. ಕಠಿಣ ಪರಿಶ್ರಮಪಟ್ಟರೆ ಮಾತ್ರ ಪ್ರತಿಫಲ ಸಿಗುತ್ತದೆ ಎಂದರು. ಈ ಸಂದರ್ಭದಲ್ಲಿ ಸರ್ವೋದಯ ಶಾಲೆ ಹಾಗೂ ಪ್ರಿಯಾಂಕ ಪ್ರೌಢ ಶಾಲೆಯ 10 ನೇ ತರಗತಿ ಮಕ್ಕಳು ಭಾಗವಹಿಸಿದ್ದರು. ಶಾಲೆಯ ಮುಖ್ಯ ಗುರುಗಳಾದ ಬಾಬುರಾವ್ ಚವ್ಹಾಣ್, ಎಸ್ಡಿಎಮ್ಸಿ ಅಧ್ಯಕ್ಷ ಚನ್ನಬಸಪ್ಪ ಜೋಗಿ, ಶಿಕ್ಷಕರು ಚನ್ನಬಸಪ್ಪ ಗೋಡಿ–ಕಾರ್, ನಾಜಿಯಾ, ಶೈಲಜಾ , ರೇಣುಕಾ,

ಗ್ರಾಮಸ್ಥರಾದ ಲಕ್ಮಿಕಾಂತ್ ಗೋಡಿಕಾರ್, ನಾಗರೆಡ್ಡಿ ಬಾನರ್, ಹನಮಂತ ದೊಡ್ಡಮನಿ , ಬನ್ನಪ್ಪ ಹುಲಿಬೆಟ್ಟ, ಆಂಜನೇಯ ಕಟ್ಟಿಮನಿ, ಚನ್ನಬಸವ ಸೇರಿದಂತೆ ಇತರರು ಉಪಸ್ಥಿತರಿದ್ದರು.

# 15ರವರೆಗೆ ಕಾಲುವೆಗಳಿಗೆ ನೀರು ಹರಿಸಲು ಆಗ್ರಹ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ


ಹಿಂಗಾರು ಹಂಗಾಮಿನ ಬೆಳೆಗಳು ಕೈಗೆ ಬರುವ ಹಂತದಲ್ಲಿದ್ದು, ರೈತರ ಹಿತದೃಷ್ಟಿಯಿಂದ ಏಪ್ರಿಲ್ 15ರವರೆಗೆ ಕಾಲುವೆಗಳಿಗೆ ನೀರು ಹರಿಸಬೇಕು ಎಂದು ನಮ್ಮ ಕರ್ನಾಟಕ ಸೇನೆಯ ಹೋಬಳಿ ಘಟಕದ ಅಧ್ಯಕ್ಷರಾದ ಶರಣು ದೇವರಮನಿ ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು

ಇತ್ತೀಚೆಗೆ ನಡೆದ ಐಸಿಸಿ ಸಭೆಯಲ್ಲಿ ವಾರಾಬಂದಿ ಪದ್ಧತಿಯನ್ವಯ ಏಪ್ರಿಲ್ 3ರವರೆಗೆ ಮಾತ್ರ ನೀರು ಹರಿಸಲು ನಿರ್ಧರಿಸಲಾಗಿದೆ. ಈಗಾಗಲೇ ಅನ್ನದಾತರು ಭರವಸೆಯಿಂದ ಸಜ್ಜೆ, ಮೆಕ್ಕೆಜೋಳ, ಶೇಂಗಾ ಹಾಗೂ ಭತ್ತದಂತಹ ಬೆಳೆಗಳನ್ನು ಬೆಳೆದಿದ್ದಾರೆ. ಬೆಳೆಗಳು ಪ್ರಸ್ತುತ ಕಾಳು ಕಟ್ಟುವ ಸಮಯದಲ್ಲಿದ್ದು, ಈ ವೇಳೆ ನೀರು ಸ್ಥಗಿತಗೊಳಿಸಿದರೆ ಸಂಪೂರ್ಣ ಬೆಳೆ ನಾಶವಾಗಿ ರೈತರು ಬೀದಿಗೆ ಬೀಳುವಂತಾಗುತ್ತದೆ. ಅಷ್ಟೇ ಅಲ್ಲದೆ, ಕೆಲಸವಿಲ್ಲದೆ ಜಿಲ್ಲೆಯ ರೈತರು ಗುಳೆ ಹೋಗುವ ಆತಂಕವೂ ಎದುರಾಗುವುದು,

ಸರ್ಕಾರ ಕೂಡಲೇ ನಿರ್ಧಾರವನ್ನು ಬದಲಿಸಿ, ಏಪ್ರಿಲ್ 15ರವರೆಗೆ ಮುಖ್ಯ ಕಾಲುವೆಗೆ ನಿರಂತರ ನೀರು ಹರಿಸಲು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ, ರೈತ ಸಮುದಾಯದೊಂದಿಗೆ ನಮ್ಮ ಕರ್ನಾಟಕ ಸೇನೆಯು ಬೀದಿಗಿಳಿದು ಹೋರಾಟ ನಡೆಸಲಿದೆ, ಎಂದು ದೇವರಮನಿ ಅವರು ಎಚ್ಚರಿಸಿದ್ದಾರೆ.

# ಧ್ವನಿ ಸಂಘಟನೆ ಜಿಲ್ಲಾಧ್ಯಕ್ಷರಿಗೆ ತಾಲೂಕ ಪದಾಧಿಕಾರಿಗಳಿಂದ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್

ಗುರುಮಠಕಲ್: ಧ್ವನಿ ಸಂಘಟನೆ ಜಿಲ್ಲಾಧ್ಯಕ್ಷರಾದ ಇಂಧುದರ ಸಿನ್ನೂರ ಅವರನ್ನು ಗುರುಮಠಕಲ್ ತಾಲೂಕು ಧ್ವನಿ ಪತ್ರಕರ್ತರು ಭಾನುವಾರ ಸನ್ಮಾನಿಸಿ ಗೌರವಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ ಅಭಿನಂದನೆ ಸಲ್ಲಿಸಲಾಯಿತು.ಈ ಸಂದರ್ಭದಲ್ಲಿ ಇಂಧುದರ ಸಿನ್ನೂರ ಅವರು ಪತ್ರಕರ್ತರೊಂದಿಗೆ ಸಮಾಲೋಚನೆ ನಡೆಸಿ ಸಂಘಟನೆಯ ಬೆಳವಣಿಗೆ, ಪತ್ರಕರ್ತರ ಸಮಸ್ಯೆಗಳು ಹಾಗೂ ಮುಂಬರುವ ಕಾರ್ಯಕ್ರಮಗಳ ಕುರಿತು ಚರ್ಚೆ ನಡೆಸಿದರು.

ಧ್ವನಿ ಸಂಘಟನೆಯನ್ನು ಇನ್ನಷ್ಟು ಬಲಪಡಿಸುವುದು ಹಾಗೂ ಪತ್ರಕರ್ತರ ಹಕ್ಕು ಹಿತಾಸಕ್ತಿಗಳನ್ನು ಕಾಪಾಡುವ ದಿಶೆಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದು ಅವರು ಕರೆ ನೀಡಿದರು.

ತಾಲೂಕಿನ ಪತ್ರಕರ್ತರು ತಮ್ಮ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಹಂಚಿಕೊಂಡು ಸಂಘಟನೆಯ ಚಟುವಟಿಕೆಗಳನ್ನು ಮತ್ತಷ್ಟು ಚುರುಕುಗೊಳಿಸಲು ಸಹಕಾರ ನೀಡುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಯಾದಗಿರಿ ಜಿಲ್ಲಾ ವೀರಶೈವ ಮಹಾಸಭಾ ಮಾಜಿ ಅಧ್ಯಕ್ಷರಾದ ಶ್ರೀ ಸೋಮಶೇಖರ ಮಣ್ಣೂರ ಗುರುಮಠಕಲ್ ತಾಲೂಕು ಧ್ವನಿ ಪತ್ರಕರ್ತರ ಅಧ್ಯಕ್ಷ ರವಿ ಬುರನೊಳ ಸೇರಿದಂತೆ ಸಂಘದ ಸದಸ್ಯರು ಉಪಸ್ಥಿತರಿದ್ದರು.

# ದಕ್ಷಿಣ ಧ್ರುವದಿಂ ಉತ್ತರ ಧ್ರುವಕೆ ಲೋಕಾರ್ಪಣೆ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಇತ್ತೀಚೆಗೆ ಇಲ್ಲಿಗೆ ಸಮೀಪದ ಗುರುಮಠಕಲ್ ದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಕನ್ನಡದ ಅಸ್ಮಿತೆ ಕಾರ್ಯಕ್ರಮದಲ್ಲಿ ಲೇಖಕ ಡಾ. ಸಿದ್ಧರಾಮ ಹೊನ್ಕಲ್ ಅವರ *ದಕ್ಷಿಣ ಧ್ರುವದಿಂ ಉತ್ತರ ಧ್ರುವಕೆ..* ಎಂಬ ಅವರ ಹತ್ತನೇ ಪ್ರವಾಸ ಕಥನವನ್ನು ಸಾನಿಧ್ಯ ವಹಿಸಿದ ಪರಮಪೂಜ್ಯ ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ವೇದಿಕೆಯಲ್ಲಿದ್ದ ಡಾ.ಜೆ.ವಿ.ಪುರುಷೋತ್ತಮ ಅವರು ಹಾಗೂ ಮುಖ್ಯ ಅತಿಥಿಗಳಾಗಿ ವೇದಿಕೆಯಲ್ಲಿದ್ದ

ಡಾ.ಎಂ.ಎಸ್.ಶಿರವಾಳ, ಶರಣ ಸಾಹಿತಿ ವಿಶ್ವಾರಾಧ್ಯ ಸತ್ಯಂಪೇಟೆ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಬಾಬುರಾಯ ದೊರೆ, ಇಂಗ್ಲಿಷ್ ಉಪನ್ಯಾಸಕರಾದ ಮಹೇಶ ಚಂದಾಪುರ ಮುಂತಾದವರು ಲೋಕಾರ್ಪಣೆ ಮಾಡಿದರು. ಲೇಖಕ ಸಿದ್ಧರಾಮ ಹೊನ್ಕಲ್ ಉಪಸ್ಥಿತರಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಈ ಹಿಂದೆ ಪ್ರಶಸ್ತಿ ಪಡೆದ ಅವರ ಪ್ರವಾಸ ಕೃತಿ ಪಂಚನದಿಗಳ ನಾಡಿನಲ್ಲಿ, ಗುಲ್ಬರ್ಗಾ ವಿವಿಯ ಪ್ರಶಸ್ತಿ ಪಡೆದ ಕನ್ಯಾಕುಮಾರಿಯಿಂದ ಹಿಮಾಲಯದವರೆಗೆ, ಗಾಂಧೀಯ ನಾಡಿನಲ್ಲಿ, ಕಲ್ಬುರ್ಗಿಯಿಂದ ಕಾಠಮಂಡುವಿನವರೆಗೆ, ಪಂಚವಟಿಯ ನೆಲದಲ್ಲಿ, ಮೂರು ದೇಶ ನೂ–ರೊಂದು ಅನುಭವ, ಲಕ್ನೋ ಸಾಂಸ್ಕೃತಿಕಯಾನ,

ಲೋಕ ಸಂಚಾರಿ, ಹೀಗೆ ವೈವಿಧ್ಯಮಯ ಪ್ರದೇಶಗಳ, ವಿದೇಶಗಳ ಪ್ರವಾಸ ಕಥನ ಬರೆದು ನಾಡಿನಲ್ಲಿ ಅತ್ಯಂತ ಹೆಚ್ಚು ಪ್ರವಾಸ ಕಥನ ಬರೆದ ಲೇಖ–ಕರ ಸಾಲಿನಲ್ಲಿ ಇರುವ ಲೇಖಕ ಸಿದ್ಧರಾಮ ಹೊನ್ಕಲ್ ಅವರ ಹೊಸ ಕೃತಿ "ದಕ್ಷಿಣ ಧ್ರುವದಿಂ ಉತ್ತರ ಧ್ರುವಕೆ" ಇಂದು ತಮ್ಮ ಕಾಲೇಜಿನಲ್ಲಿ, ಅದು ಈ ಗಡಿನಾಡಿನಲ್ಲಿ ಕನ್ನಡದ ಅಸ್ಮಿತೆ ಕುರಿತ ಕಾರ್ಯಕ್ರಮದಲ್ಲಿ ಲೋಕಾರ್ಪಣೆ ಆದದ್ದೂ ತುಂಬಾ ಸಂತೋಷ ಎಂದು ಪ್ರಾಚಾರ್ಯರಾದ ಡಾ.ಜೆ.ವಿ.ಪುರುಷೋತ್ತಮ ಅವರು ಲೇಖಕ ಸಿದ್ಧರಾಮ ಹೊನ್ಕಲ್ ಅವರಿಗೆ ಅಭಿನಂದಿಸಿದರು. ಅವರ ಪ್ರವಾಸ ಕಥನಗಳು ಅನೇಕ ವಿಶ್ವ ವಿದ್ಯಾಲಯಗಳಲ್ಲಿ ಪಠ್ಯವಾಗಿ ರೋದು ಈ ಗಿರಿ ನಾಡಿಗೆ ಸಂದ ಗೌರವ ಎಂದು ಮುಂದುವರಿದು ಕೃತಿ ಕುರಿತು ಮಾತನಾಡಿದರು. ಪೂಜ್ಯರಾದ ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳು ಮಾತನಾಡಿ ಸಿದ್ಧರಾಮ ಹೊನ್ಕಲ್ ರು ಈಗಾಗಲೇ ಎಂಬತ್ತು ಕೃತಿ ರಚಿಸಿ ಗಡಿನಾಡಿನ ಈ ಜಿಲ್ಲೆಗೆ ಹೆಸರು ತಂದಿದ್ದಾರೆ.

ಅವರು ನೂರು ಕೃತಿ ತರಲಿ ಎಂದು ಶುಭಾಶೀರ್ವಾದ ಮಾಡಿ ಅಭಿನಂದಿಸಿದರು.

# ಖಾನಾಪುರ ಕೆರೆಗೆ ತಡೆಗೋಡೆ ನಿರ್ಮಿಸುವಂತೆ ರೈತೋದಯ ಹಸಿರು ಸೇನೆ ಒತ್ತಾಯ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ವಡಗೇರಾ ಸಮೀಪದ ಖಾನಾಪುರ ಗ್ರಾಮದ ಕೆರೆಗೆ ತಡೆಗೋಡೆ ನಿರ್ಮಿಸುವಂತೆ ಕರ್ನಾಟಕ ರಾಜ್ಯ ರೈತೋದಯ ಹಸಿರು ಸೇನೆ ಜಿಲ್ಲಾಧ್ಯಕ್ಷ ಶರಣಪ್ಪ ಕೃಷ್ಣಪ್ಪನೋರ ಒತ್ತಾಯಿಸಿದ್ದಾರೆ. ಖಾನಾಪುರದಿಂದ ತಾಲೂಕು ಕೇಂದ್ರ ವಡಗೇರಾಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಗ್ರಾಮಕ್ಕೆ ಮತ್ತು ಮುಖ್ಯ ರಸ್ತೆಗೆ ಅತ್ಯಂತ ದೊಡ್ಡದಾದ ಕೆರೆಯನ್ನು ಹೊಂದಿದೆ ದಿನನಿತ್ಯ ಸಾವಿರಾರು ವಾಹನ ಸವರಾರು ಇದೇ ರಸ್ತೆಯ

ಮೂಲಕ ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಓಡಾಡುತ್ತಾರೆ ಈ ಹಿಂದೆ ಇಲ್ಲಿ ಅಹಿತಕರ ಘಟನೆಗಳು ನಡೆದಿವೆ ವಾಹನ ಸವಾರರು ಕೆರೆಯಲ್ಲಿ ಬಿದ್ದ ಉದಾಹರಣೆಗಳಿವೆ ಚಿಕ್ಕ ಮಕ್ಕಳು ಜನ ಜಾನುವಾರುಗಳು ಅದೆಷ್ಟು ಬಾರಿ ಅಪಾಯದಿಂದ ಪಾರಾಗಿದ್ದಾರೆ

ಇದೇ ರಸ್ತೆಯ ಮೂಲಕ ಜರಾ ಪ್ರತಿನಿಧಿಗಳು ಅಧಿಕಾರಿಗಳು ಓಡಾಡುತ್ತಾರೆ ಆದರೆ ಜನರ ಸುರಕ್ಷತೆಗಾಗಿ ತಡಗೋಡೆ ನಿರ್ಮಿಸದಿರುವುದು

ದುರದೃಷ್ಟಕರ ಸಂಗತಿಯಾಗಿದೆ ಕೂಡಲೇ ಅಧಿಕಾರಿಗಳು ಎಚ್ಚೆತ್ತುಕೊಂಡು ಖಾನಾಪುರ

ಗ್ರಾಮದ ಕೆರೆಗೆ ತಡೆಗೂಡೆ ನಿರ್ಮಿಸಬೇಕು ಒಂದು ವೇಳೆ ನಿರ್ಲಕ್ಷ ವಹಿಸಿದ್ದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಉಗ್ರ ಹೋರಾಟ ಮಾಡುವುದಾಗಿ ಜಿಲ್ಲಾಧ್ಯಕ್ಷ ಶರಣಪ್ಪ ಕೃಷ್ಣಪ್ಪನೂರ ಕಲ್ಯಾಣ ಕರ್ನಾಟಕ ವಿಭಾಗೀಯ ಅಧ್ಯಕ್ಷ ರಾಮಕೃಷ್ಣ ಪೂಜಾರಿ, ದೇವರಾಜ ಕುರಕುಂದಿ,

ಭೀಮರಾಯ ಅರ್ಜುನಗಿ, ಚಂದ್ರಶೇಖರ ಹೊಸಬಾವಿ, ಬಸ್ಸು ಹಳಿಮನಿ, ಶರಣಪ್ಪ ಕಾಡುಪ್ನೂರ, ಸಾಹೇಬಗೌಡ ಖಾನಾಪೂರ, ಸಾಬಣ್ಣ ಕಾಮಣ್ಣೂರ, ಮಾಳಪ್ಪ, ವಿಜಯಕುಮಾರ ಖಾನಾಪೂರ, ಹಳ್ಳೆಪ್ಪ ಎಲೇರಿ,ಮೈಬೂಬ್ ಗಿಡದೊರ ಹಾಗೂ ಇನ್ನಿತರರು ಎಚ್ಚರಿಸಿದ್ದಾರೆ.

# ಕಲ್ಯಾಣ ಕರ್ನಾಟಕದ ಹಿತಕ್ಕಾಗಿ ಅವಿರತ ಹೋರಾಟ ಅಗತ್ಯ ಬಿದ್ದರೆ ಪ್ರಾಣತ್ಯಾಗಕ್ಕೂ ಸಿದ್ಧ: ಪಡುಕೋಟೆ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ.

ಕಲ್ಯಾಣ ಕರ್ನಾಟಕದ ಹಿತಕ್ಕಾಗಿ ಪ್ರಾಣಾರ್ಪಣೆ ಮಾಡಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ನಮ್ಮ ಕರ್ನಾಟಕ ಸೇನೆ ರಾಜ್ಯಾಧ್ಯಕ್ಷ ಬಸವರಾಜ ಪಡುಕೋಟೆ ನುಡಿದರು. ನಗರದ ಎಸ್‌ಡಿಎನ್ ಹೊಟೇಲ್ ಆವರಣದಲ್ಲಿ ಜರುಗಿದ ನಮ್ಮ ಕರ್ನಾಟಕ ಸೇನೆ ಕಲ್ಯಾಣ ಕರ್ನಾಟಕ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸ್ವಾತಂತ್ರ ಬಂದು 75 ವರ್ಷಗಳಾಗುತ್ತಿದ್ದರೂ ನಮ್ಮ ಭಾಗ ಹಿಂದುಳಿದಿದ್ದು ಸರ್ವಾಂಗೀಣ ಏಳ್ಗೆಗಾಗಿ ಸಂಘಟನೆ ವಿಸ್ತೃತ ಹೋರಾಟ ನಡೆಸಲಿದೆ. ಅಗತ್ಯ ಬಿದ್ದರೆ ಪ್ರಾಣ ಒತ್ತೆ ಇಟ್ಟು ನುಗ್ಗುತ್ತೇವೆ. ಪ್ರಾಣಾರ್ಪಣೆ ಮಾಡಲು ಹಿಂದೆ ಮುಂದೆ ನೋಡುವುದಿಲ್ಲ ಎಂದು ಅವರು ಹೇಳಿದರು.

ಪ್ರಾಕೃತಿಕವಾಗಿ ಸಂಪದ್ಭರಿತವಾಗಿದ್ದರೂ ಸಾಮಾಜಿಕ, ಆರ್ಥಿಕ ರಾಜಕೀಯವಾಗಿ, ಸರ್ವರಂಗದ ಅಭಿವೃದ್ಧಿಯ ದೃಷ್ಟಿಯಿಂದ ತೀರ ಹಿಂದುಳಿದಿರುವ ಈ ಭಾಗದ ಏಳ್ಗೆಗೆ ನಕಸೇ ದೊಡ್ಡ ಹೋರಾಟ ರೂಪಿಸಲಿದೆ ಎಂದು ತಿಳಿಸಿದರು. ಈ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಕಲ್ಯಾಣ ಕರ್ನಾಟಕ ಮಟ್ಟದ ಸಮಾವೇಶ ಯಾದಗಿರಿಯಲ್ಲಿ ನಡೆಸಲಾಗುವುದು ಎಂದು ಪ್ರಕಟಿಸಿದರು. ಸಭೆ ಉದ್ಘಾಟಿಸಿದ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯ ಶರಣಪ್ಪ ಮಾನೇಗಾರ ಮಾತನಾಡಿ ಕನ್ನಡ ಪರ ಸಂಘಟನೆಗಳ ಪಾತ್ರ ಅಪಾರವಾಗಿದೆ. ರಾಜಕೀಯ ಪಕ್ಷಗಳು ಹೋರಾಟ ಮಾಡಿದರೆ ಅದು ಕೇವಲ ಟೀಕೆಗೆ ಮಾಡಿದ ವಿರೋಧಕ್ಕಾಗಿ ವಿರೋಧ ಮಾಡಿದ್ದಾರೆ ಎನ್ನಲಾಗುತ್ತದೆ. ಸಂಘಟನೆಯವರು ನ್ಯಾಯ ಹಾಗೂ ಸತ್ಯದ ಪರ ಹೋರಾಟ ನಡೆಸಿದಲ್ಲಿ ಯಾವುದೇ ಸರ್ಕಾರ ಮಣಿಯಲಿದೆ ಎಂದು ನುಡಿದರು.

ಪ್ರಥಮ ದರ್ಜೆ ಗುತ್ತಿಗೆದಾರ ಹಣಮೇಗೌಡ ಬೀರನಕಲ್ ಮಾತನಾಡಿ ಸಂಘಟನೆಗಳು ಬಲಿಷ್ಠವಾದಷ್ಟು ಅಧಿಕಾರಿಗಳು ಶಿಸ್ತು ರೂಢಿಸಿಕೊಳ್ಳುತ್ತಾರೆ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ ಸಾಹುಕಾರ ಮಾತನಾಡಿ, ಕನ್ನಡ ಪರ ಸಂಘಟನೆಗಳ ಹೋರಾಟ ಮಾದರಿಯಾಗಿದ್ದು,



> “ಕಲ್ಯಾಣ ಕರ್ನಾಟಕದ ವ್ಯಾಪ್ತಿಯ ಯಾವುದೇ ಸಭೆ ಸಮಾರಂಭ ಸಮಾವೇಶ ಯಾದಗಿರಿಯಲ್ಲಿ ಆಯೋಜಿಸಲು ಸೂಚಿಸಿದಲ್ಲಿ ಅದನ್ನು ಯಶಸ್ವಿಗೊಳಿಸಲು ಜಿಲ್ಲಾ ಘಟಕ ಕಂಕಣಬದ್ಧವಾಗಿ ಕೆಲಸ ಮಾಡಿ ಯಶಸ್ವಿಗೆ ಶ್ರಮಿಸುತ್ತೇವೆ
>
> **ವಿಶ್ವಾರಾಧ್ಯ ದಿಮ್ಮೆ ಜಿಲ್ಲಾಧ್ಯಕ್ಷರು ನಕಸೇ**

ಇಂದು ಕನ್ನಡ ರಕ್ಷಣೆ ಕಾರ್ಯ ಈ ಸಂಘಟನೆಗಳಿಂದ ಆಗುತ್ತಿದೆ ಇದರಲ್ಲಿ ನಕಸೇ ಕಾರ್ಯ ಜಿಲ್ಲೆಯಲ್ಲಿ ಮಾದರಿಯಾಗಿದೆ. ಅಲ್ಪ ಕಾಲದಲ್ಲೇ ಹಿರಿದಾದ ಸಾಧನೆ ಮಾಡುತ್ತಿದೆ ಎಂದು ಶ್ಲಾಘಿಸಿದರು.

ಸಗರನಾಡು ಸೇವಾ ಪ್ರತಿಷ್ಠಾನ ಅಧ್ಯಕ್ಷ ಸುರಪುರದ ಪ್ರಕಾಶ ಅಂಗಡಿ ಕನ್ನೆಳ್ಳಿ ಮಾತನಾಡಿ, 40 ವರ್ಷಗಳಿಂದ ಕನ್ನಡ ಪರ ಸಂಘಟನೆ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಬಸವರಾಜ ಪಡುಕೊಟೆ ಅವರ ಹೋರಾಟ ಸಾಧನೆ ಅಪೂರ್ವವಾಗಿದ್ದು, ಇನ್ನು ಹೆಚ್ಚಿನ ಕೊಡುಗೆ ಕೊಡಬಲ್ಲರು ಎಂದು ಆಶಯ ನುಡಿಗಳು ಆಡಿದರು. ರಾಜ್ಯ ಪ್ರಧಾನ ಸಂಚಾಲಕ ಭೀಮಣ್ಣ ಶಖಾಪೂರ ಪ್ರಾಸ್ತಾವಿಕ ಮಾತನಾಡಿ, ಸಂಘಟನೆ ಬಲಪಡಿಸಲು ಗ್ರಾಮ ಮಟ್ಟದಲ್ಲಿ ಕಾರ್ಯನಿರ್ವಹಿಸಬೇಕೆಂದು ಸಲಹೆ ನೀಡಿದರು.

ಕಾಂಗ್ರೆಸ್ ಯುವ ಮುಖಂಡ ಅನಿಲ್ ಹೆಡಗಿಮುದ್ರಾ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವೇದಿಕೆ ಮೇಲೆ ನಕಸೇ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ನಾಗರಾಜ ಜಾಕನಳ್ಳಿ, ಶ್ರೀಮತಿ ಲಕ್ಷ್ಮೀ, ದೇಸಾಯಿಗೌಡ, ಕಲ್ಬುರ್ಗಿ ಜಿಲ್ಲಾಧ್ಯಕ್ಷ ಪುನಿತ್ ಕವಡೆ, ರಾಯಚೂರು ಜಿಲ್ಲಾಧ್ಯಕ್ಷ ಕೊಂಡಪ್ಪ, ಬೀದರ ಜಿಲ್ಲಾಧ್ಯಕ್ಷ ಗಣೇಶ, ಕೊಪ್ಪಳ ಜಿಲ್ಲಾಧ್ಯಕ್ಷ ಜಿಲ್ಲಾಧ್ಯಕ್ಷ ರಮೇಶ, ಯಾದಗಿರಿ ಜಿಲ್ಲಾ ಮಹಿಳಾ ಅಧ್ಯಕ್ಷೆ ಶ್ರೀದೇವಿ ಕಟ್ಟಿಮನಿ ಇದ್ದರು.

ಇದೇ ವೇಳೆ ಕಲ್ಯಾಣ ಕರ್ನಾಟಕ ಅಧ್ಯಕ್ಷರಾಗಿ ಸುಧೀಂದ್ರ ಇಜೇರಿ, ಉಪಾಧ್ಯಕ್ಷರಾಗಿ ರಂಗಯ್ಯ ಮುಸ್ತಾಜಿರ್, ಬೀದರ ಜಿಲ್ಲಾ ಉಪಾಧ್ಯಕ್ಷರಾಗಿ ಸುರೇಶ ಇವರಿಗೆ ಆಯ್ಕೆ ಮಾಡಲಾಯಿತು.

ಯಾದಗಿರಿ ಜಿಲ್ಲೆಗೆ ಅಮರದೀಪ (ಗೌರವಾಧ್ಯಕ್ಷ), ಭೀಮು ಪೂಜಾರಿ (ಪ್ರ. ಕಾರ್ಯದರ್ಶಿ), ಚೆನ್ನಬಸವ ಕನಕ, ಲಿಂಗಣ್ಣ ವಾರದ (ಉಪಾಧ್ಯಕ್ಷರು), ಅಂಬ್ರೇಷ್ ತೆಲುಗುರು (ಪ್ರ.ಸಂಚಾಲಕ), ಗೋವಿಂದ ರಾಠೋಡ (ಸಹ ಕಾರ್ಯದರ್ಶಿ), ಗುರುಮಠಕಲ್ ತಾಲ್ಲೂಕಿಗೆ ಅಬ್ದುಲ್ ರಿಯಾಜ್ ಸಾಹುಕಾರ (ಅಧ್ಯಕ್ಷ), ಹಣಮಂತ ಪೂಜಾರಿ ತಾತಳಗೇರಾ (ಉಪಾಧ್ಯಕ್ಷ) ನೇಮಕ ಮಾಡಲಾಯಿತು.

ಸನ್ಮಾನ: ಇದೇ ವೇಳೆ ನಗರದ ಇಬ್ಬರು ವೈದ್ಯರಿಗೆ ಅವರ ಸೇವೆ ಪರಿಗಣಿಸಿ ವೈದ್ಯರಾದ ಮಕ್ಕಳ ತಜ್ಞ ಡಾ. ಎಂ.ವಿ. ಶಿವಪ್ರಸಾದ ಮೇತ್ರಿ, ಆಯುಷ ವೈದ್ ಡಾ.ಪ್ರಕಾಶ ರಾಜಾಪೂರ ಇವರಿಗೆ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಡಗೇರಿ ತಾ. ಅಧ್ಯಕ್ಷ ಮಲ್ಲು ಕಲ್ಮನಿ, ಶಹಾಪೂರ ಅಧ್ಯಕ್ಷ ಸಿದ್ದು ಪಟ್ಟೇದಾರ, ಹುಣಸಗಿ ಅಧ್ಯಕ್ಷ ಭೀಮಣ್ಣಗೌಡ, ಸುರಪುರ ಅಧ್ಯಕ್ಷ ವೆಂಕಟೇಶ ಪ್ಯಾಪ್ಲಿ ಸೇರಿದಂತೆ ಜಿಲ್ಲೆಯ ಪದಾಧಿಕಾರಿಗಳು ಕಾರ್ಯಕರ್ತರು ಭಾಗಿಯಾದರು. ಕನಸೇ ಜಿಲ್ಲಾದ್ಯಕ್ಷ ವಿಶ್ವಾ–ರಾಧ್ಯ ದಿಮ್ಮೆ ನೇತೃತ್ವ ವಹಿಸಿದ್ದರು. ಬಸರಡ್ಡಿ ಅಭಿಷ್ಯಾಳ ನಿರೂಪಿಸಿ, ಸ್ವಾಗತಿಸಿ ವಂದಿಸಿದರು.

# ರಾಜಶೇಖರ ರಾಮಸ್ವಾಮಿ ಅಧಿಕಾರ ಸ್ವೀಕಾರ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಇಲ್ಲಿನ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ರಾಜಶೇಖರ ರಾಮಸ್ವಾಮಿ ಅವರು ಮಾರ್ಚ 13ರಂದು ಅಧಿಕಾರ ಸ್ವೀಕರಿಸಿದರು.

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಹಾಗೂ ವೈಯಕ್ತಿಕ ಗಮನಕ್ಕೆ ತರಬೇಕಾದಂತಹ ಅರೆ ಸರಕಾರಿ ಪತ್ರ ಹಾಗೂ ರಹಸ್ಯ ಪತ್ರಗಳನ್ನು ನಗರಾಭಿವೃದ್ಧಿ ಪ್ರಾಧಿಕಾರ, ಐ.ಡಿ.ಎಸ್.ಎಮ್.ಟಿ.

ಲೇಔಟ್, ಮಂತ್ರಾಲಯ ರಸ್ತೆ, ರಾಯಚೂರು ಇಲ್ಲಿಗೆ ಸಲ್ಲಿಸಬಹುದಾಗಿದೆ ಎಂದು ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯ ಪ್ರಕಟಣೆ ತಿಳಿಸಿದೆ.

# ವೃತ್ತಿ ಶಿಕ್ಷಣ ಪ್ರದರ್ಶನ, ಕೆರಿಯರ್ ಮೇಳ ಆಯೋಜನೆ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಸರ್ಕಾರದ ನಿರ್ದೇಶನದಂತೆ ಇಲ್ಲಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಡಯಟ್ ಯರಮರಸ್‌ನಲ್ಲಿ ಜಿಲ್ಲಾ ವೃತ್ತಿಪರ ಮತ್ತು ವೃತ್ತಿ ಮಾರ್ಗದರ್ಶನ ಘಟಕವನ್ನು ಸ್ಥಾಪಿಸಲಾಗಿದ್ದು, ಇದರ ಅಂಗವಾಗಿ ಜಿಲ್ಲೆಯ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಹಂತದ ವಿದ್ಯಾರ್ಥಿಗಳಿಗೆ ವೃತ್ತಿ ಪ್ರಪಂಚದ ಅರಿವು ಮೂಡಿಸಲು ವೃತ್ತಿ ಶಿಕ್ಷಣ ಪ್ರದರ್ಶನ ಮತ್ತು ಕೆರಿಯರ್ ಮೇಳವನ್ನು

ಮಾರ್ಚ್ 17ರ ಬೆಳಿಗ್ಗೆ 9ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ 10ನೇ ತರಗತಿ, ಪಿಯುಸಿ ನಂತರ ವಿದ್ಯಾರ್ಥಿಗಳಿಗೆ ಲಭ್ಯವಿರುವ ವಿವಿಧ ಶಿಕ್ಷಣಾವಕಾಶಗಳು, ತಾಂತ್ರಿಕ ಶಿಕ್ಷಣ, ಐಟಿಐ, ಡಿಪ್ಲೋಮಾ, ಎಂಜಿನಿಯರಿಂಗ್, ಮೆಡಿಕಲ್, ಕೌಶಲ್ಯ ತರಬೇತಿ, ಕೃಷಿ, ಕಂಪ್ಯೂಟರ್ ಕೋರ್ಸ್‌ಗಳು, ವಿದ್ಯಾರ್ಥಿವೇತನ, ತರಬೇತಿ ಕೇಂದ್ರಗಳು ಹಾಗೂ

ಉದ್ಯೋಗಾವಕಾಶಗಳ ಕುರಿತು ಸಂಪೂರ್ಣ ಮಾಹಿತಿ ನೀಡಲಾಗುತ್ತದೆ. ಆಸಕ್ತರು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಡಯಟ್ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯಾಗಿರಿ ಬಡಾವಣೆಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ



- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದ ವಿದ್ಯಾಗಿರಿ ಬಡಾವಣೆಯಲ್ಲಿ. ಬಡಾವಣೆಯ ಮಹಿಳೆಯರು ಸೇರಿಕೊಂಡು ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯ್ತು.

ಬಡಾವಣೆಯ ಸುಧಾರಾಣಿ, ರೂಪ, ಲೀಲಾವತಿ, ವಿದ್ಯಾ, ಅನುಶ್ರೀಯ, ಶ್ರೀದೇವಿ, ಯಶೋದ, ಪವಿತ್ರ, ರೇಖಾ, ಸುಮಾ, ಶ್ರೀಲತಾ, ಉಷಾರಾಣಿ, ಉಮಾ, ನೀಲಮ್ಮ, ಪುಷ್ಪ, ಸುನೀತಾ, ಭವ್ಯ, ವರ್ಷ, ಸುಲೋಚನಾ, ರತ್ನ ಮತ್ತು ಅನ್ನಪೂರ್ಣ ಇವರೆಲ್ಲರೂ ಸೇರಿ ಈ ಕಾರ್ಯಕ್ರಮ ಆಯೋಜಿಸಿದ್ದರು.

ವೀರಶೈವ ಕಾಲೇಜಿನ ನಿವೃತ್ತ ಪ್ರಾಧ್ಯಾಪಕಿ ಡಾ ಸುಧಾರಾಣಿ ಮಾತನಾಡಿ, ಮಹಿಳೆಯರು ಸಬಲರಾಗಬೇಕು, ಎಲ್ಲಾ ಕ್ಷೇತ್ರಗಳಲ್ಲಿ ಮುಂದೆ ಬರಬೇಕು, ಕಾಯಕ ಮಾಡಿ ಜೀವನ ಮಾಡಬೇಕು, ವಿದ್ಯಾವಂತರಾಗಬೇಕು, ಮಹಿಳೆಯರು ಈ ದೇಶದ ಬೆನ್ನೆಲುಬು ಎಂದರು.

ಉಷಾರಾಣಿ ಮಾತನಾಡಿ ಹೆಣ್ಣು ಜೀವನದ ಕಣ್ಣು ಹೆಣ್ಣೊಂದು ಕಲಿತರೆ ಶಾಲೆಯನ್ನು ತೆರೆದಂತೆ ಹೆಣ್ಣು ಈ ದೇಶದ ಸಂಪತ್ತು ಪ್ರತಿ ವರ್ಷ ನಾವು ಸಂಭ್ರಮದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಾ ಬಂದಿದ್ದೇವೆ ಎಂದು ತಿಳಿಸಿದರು. ಪವಿತ್ರ ಸ್ವಾಗತಿಸಿ ನಿರೂಪಿಸಿ ವಂದಿಸಿದರು ಕೆಲವರು ಹಾಡುಗಳನ್ನು ಹೇಳಿದರು ಮಕ್ಕಳು ನೃತ್ಯ ಮಾಡಿದರು.


# ಶಿಕ್ಷಣವೇ ಜೀವನದ ದಾರಿ, ಆತ್ಮವಿಶ್ವಾಸದಿಂದ ಯಶಸ್ಸು ಖಚಿತ: ಯಲ್ಲಪ್ಪ ಕಾಡ್ಲೂರು

ಮಲ್ಲಮ್ಮ ನುಡಿ ಹುಣಸಗಿ: ಶಿಕ್ಷಣವೇ ಜೀವನದ ದಾ–ರಿಯಾಗಿದ್ದು ಆತ್ಮವಿಶ್ವಾಸದಿಂದ ಮಾತ್ರ ಯಶಸ್ಸು ಸಾಧ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಯಲ್ಲಪ್ಪ ಕಾಡ್ಲೂರು ಹೇಳಿದರು.

ತಾಲೂಕಿನ ಗೆದ್ದಲಮರಿ ಗ್ರಾಮದ ಸರಕಾರಿ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮ ಹಾಗೂ ರಾಜ್ಯ ಮಟ್ಟದ ವಿದ್ಯಾರತ್ನ ಪ್ರಶಸ್ತಿ ಪುರಸ್ಕೃತ ಶಾಲಾ ಪ್ರಧಾನಗುರು ವಿ.ಎಂ. ಬೆಳ್ಳುಬ್ಬಿ ಅವರಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಕರ ಪರಿಶ್ರಮ ಮತ್ತು ಮುಖ್ಯಗುರುಗಳ ನಿಷ್ಠೆಯ ಫಲವೇ ಈ ಪ್ರಶಸ್ತಿ ಗೌರವವಾಗಿದೆ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅಮೂಲ್ಯವಾಗಿದೆ ಎಂದು ಹೇಳಿದರು.

ದೈಹಿಕ ಶಿಕ್ಷಕ ಲಾಲಪ್ಪನಾಯ್ಕ ಮಾತನಾಡಿ, ಶಿಕ್ಷಣ ಸೇವೆಯೇ ನನ್ನ ಜೀವನದ ಧ್ಯೇಯ. ವಿದ್ಯಾರ್ಥಿಗಳ ಪ್ರಗತಿ ಹಾಗೂ ಅವರ ಸಾಧನೆಗಳೇ ನನ್ನ ಸಂತೋಷ. ವರ್ಗಾವಣೆ ಕರ್ತವ್ಯದ ಭಾಗವಾದರೂ ಈ ಶಾಲೆಯ ನೆನಪುಗಳು ಸದಾ ಹೃದಯದಲ್ಲಿ ಉಳಿಯುತ್ತವೆ ಎಂದು ಭಾವನಾತ್ಮಕವಾಗಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ಮುಖ್ಯಗುರು ವಿ.ಎಂ. ಬೆಳ್ಳುಬ್ಬಿ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಕನಸುಗಳನ್ನು ಸಾಧಿಸಲು ಧೈರ್ಯದಿಂದ ಮುನ್ನುಗ್ಗಬೇಕು. ನಿರಂತರ ಅಧ್ಯಯನದ ಜೊತೆಗೆ ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು.



ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಪೋಷಕರ ಬೆಂಬಲವೂ ಅಗತ್ಯವೆಂದು ತಿಳಿಸಿದರು. ಶಿಕ್ಷಕ ತೀರ್ಥಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪರಶುರಾಮ ಶಾಲಾ ವಾರ್ಷಿಕ ವರದಿ ವಾಚಿಸಿದರು. ಅಗ್ನಿ ಸರಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ ಬಸವರಾಜ್ ಹಿರೇಮಠ ಉಪನ್ಯಾಸ ನೀಡಿದರು. ಈ ವೇಳೆ ವಿದ್ಯಾರತ್ನ

ಪ್ರಶಸ್ತಿ ಪುರಸ್ಕೃತ ವೀರಣ್ಣ ಬೆಳ್ಳುಬ್ಬಿ ಹಾಗೂ ವರ್ಗಾವಣೆಗೊಂಡ ದೈಹಿಕ ಶಿಕ್ಷಕ ಲಾಲಪ್ಪನಾಯ್ಕ ಅವರನ್ನು ಶಿಕ್ಷಕ ವೃಂದ ಮತ್ತು ಅಭಿಮಾನಿಗಳು ಸನ್ಮಾನಿಸಿದರು. ಸಂಗೀತ ಶಿಕ್ಷಕ ಅಶೋಕ್ ರಾಜನಕೋಳೂರು ಸಂಗಡಿಗರೊಂದಿಗೆ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷ ಹಣಮಂತ್ರಾಯ ಜಾಲಹಳ್ಳಿ, ಉಪಾಧ್ಯಕ್ಷ ಸಂಗಣ್ಣ ಕುಂಬಾರ ಸೇರಿದಂತೆ ಹಲವು ಗಣ್ಯರು, ಶಿಕ್ಷಕ–ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ವಿರೇಶ ಕುಂಬಾರ ಸ್ವಾಗತಿಸಿದರು. ಉದಯ ಅಂಬಿಗೇರ ಕಾರ್ಯಕ್ರಮ ನಿರೂಪಿಸಿದರು. ಸುವರ್ಣ ಬಿರಾದಾರ ವಂದಿಸಿದರು.



**ಹುಣಸೂರು ತಾಲೂಕಿನ ಬನ್ನಿಕುಪ್ಪೆ ಗ್ರಾಮದ ಗ್ರಾಮದೇವತೆ ಶ್ರೀ ಬನ್ನಮ್ಮನವರ ದೊಡ್ಡ ರಥವು ವಿಜೃಂಭಣೆಯಿಂದ ಜರುಗಿತು ಕಾರ್ಯಕ್ರಮವನ್ನು ಉಕ್ಕಿನ ಕಂತೆ ಮಾದಳ್ಳಿ ಮಠದ ಶ್ರೀ ಸಾಂಬ ಸದಾಶಿವ ಸ್ವಾಮಿಗಳು ಹ ವಿಧಾನಸಭಾ ಕ್ಷೇತ್ರದ ಶಾಸಕರು ಜಿಡಿ ಹರೀಶ್ ಗೌಡ ಹಾಗೂಮಾಜಿ ಶಾಸಕ ಎಚ್ ಪಿ ಮಂಜುನಾಥ್ ರಥೋತ್ಸವಕ್ಕೆ ಚಾಲನೆ ನೀಡಿದರು**

**ಈ ಸಂದರ್ಭದಲ್ಲಿ ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಡಿ ಎಂ ತ್ರಿವೇಣಿ ರವರು2028 ಎಚ್ ಪಿ ಮಂಜುನಾಥ್ ಮಂತ್ರಿಗಳು ಆಗಲಿ ಕರ್ನಾಟಕ ಸರ್ಕಾರದಲ್ಲಿಎಂದು  ತಾಯಿಗೆ ಹಣ್ಣು ಜವನ ಎಸೆದು ತಮ್ಮ ಹರಕೆಗಳನ್ನು ರಥ.ಎಳೆಯುವ ಮೂಲಕ ತಮ್ಮ ಹರಕೆಯನ್ನು ತೀರಿಸಿದರು ಹಾಗೂ ಇನ್ನಿತರ ಕೂಡ ಭಕ್ತಾದಿಗಳು ತಮ್ಮ ತಮ್ಮ ಹರಕೆಯ ಈಡೇರಿಸುವಂತೆ ದೇವರಲ್ಲಿ ಭಕ್ತಿ ಪೂರ್ವಕವಾಗಿ  ಬೇಡಿಕೊಂಡಿದ್ದಾರೆ  ಸುತ್ತ ಮುತ್ತ ಹಳ್ಳಿಯ ಯಜಮಾನರು ಗ್ರಾಮಸ್ಥರು ಆಧುನಿಕರ ಕಡೆ ಮುಖಂಡರು ಭಕ್ತಾದಿಗಳು ರಥೋತ್ಸವದಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು**

# ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

:ಗಣತಂತ್ರ ಉಳಿಸಿ, ಸಾರ್ವಭೌಮತೆಯನ್ನು ರಕ್ಷಿಸಿ, ಸಮಾಜಕ್ಕಾಗಿ ಹೋರಾಡಿ ಲಿಂಗ ತಾರತಮ್ಯ ವಿರೋಧಿಸಿ, ಜೀವನೋಪಾಯದ ಮೇಲಿನ ದಾಳಿಯನ್ನು ವಿರೋಧಿಸಿ 118 ನೇ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬಳ್ಳಾರಿಯ ಗಾಂಧಿ ಭವನದಲ್ಲಿ ಸಿಐಟಿಯು ಮತ್ತು ಜೆಎಮ್‌ಎಸ್ ಸಂಘಟನೆಯಿಂದ ಬಳ್ಳಾರಿಯ ಗಾಂಧಿ ಭವನದಲ್ಲಿ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಬಾಲಕಿಯರ ಬಾಲ ಮಂದಿರದ ಅಧೀಕ್ಷಕರಾದ ನಾಗವೇಣಿ ಅವರು ಆಗಮಿಸಿ ಉದ್ಘಾಟನೆ

ಭಾಷಣವನ್ನು ಮಾಡಿದರು. ಪ್ರತಿನಿತ್ಯ ಹೆಣ್ಣನ್ನು ಕನಿಷ್ಠಗೊಳಿಸುವ ಹೆಣ್ಣಿನ ಘನತೆಗೆ ಧಕ್ಕೆ ತರುವ ಹೆಣ್ಣು ಮಕ್ಕಳ ಸಾಗಾಣಿಕೆ, ಆಯ್ಕೆಯ ಮೇಲೆ ದಾಳಿ ಮರ್ಯಾದೆಗೇಡು ಹತ್ಯೆಗಳು, ಅತ್ಯಾಚಾರಗಳು, ಹೆಣ್ಣು ಭ್ರೂಣಹತ್ಯೆ, ಬಾಲ್ಯ ವಿವಾಹ ಹಾಗೂ ಲಿಂಗ ತಾರತಮ್ಯ ಕೊನೆಗಾಣಿಸಬೇಕು ಎಂದು ಹೇಳಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಉದ್ಘಾಟನಾ ದಿನವಾಗಿ ಮಹಿಳೆಯರ ಮೇಲಿನ ದಬ್ಬಾಳಿಕೆ ನಿಜ ಕಾರಣಗಳನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಹಾಗೂ



ಭಾಷಣವನ್ನು ಮಾಡಿದರು. ನಂತರ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ಸಂಗಾತಿ ಚಂದ್ರಕುಮಾರಿ ಅವರು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭ ಕೋರಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ದಿನದಂದು ಮೂಲ ಚರಿತ್ರೆಯನ್ನು ರಕ್ಷಿಸುವ

ಪಣತೊಡುತ್ತಾ ಶೋಷಣೆ ಮತ್ತು ದಬ್ಬಾಳಿಕೆ ವಿರುದ್ಧ ನಿರಂತರ ಹೋರಾಟಗಳನ್ನು ನೆನೆಯುವ ಪರ್ಯಾಯಗಳ ಇರುವಿಕೆಯನ್ನು ಮತ್ತದನ್ನು ಗಳಿಸಲು ಹೋಗುವ ಹೋರಾಟ ಮಾಡೋಣ ಎಂದು ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಜಿಲ್ಲಾ ಸಂಚಾಲಕರಾದ ಉಮಾದೇವಿ, ಸಿಐಟಿಯುನ ರಾಜ್ಯ ಉಪಾಧ್ಯಕ್ಷರಾದ ಜೆ ಸತ್ಯ ಬಾಬು, ಸಿಐಟಿಯು ಜಿಲ್ಲಾ ಕಾರ್ಯದರ್ಶಿಗಳಾದ ಮಲ್ಲಮ್ಮ, ಅಕ್ಷರ ದಾಸೋಹ ನೌಕರರ ಸಂಘಟನೆಯ ಜಿಲ್ಲಾ ಕಾರ್ಯದರ್ಶಿಗಳಾದ ದುರುಗಮ್ಮ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿಗಳಾದ

ಸಂಗಾತಿ ವರಲಕ್ಷ್ಮಿ, ಅಂಗನವಾಡಿ ನೌಕರ ಸಂಘಟನೆಯ ತಾಲೂಕ ಅಧ್ಯಕ್ಷರಾದ ಕಾಂ. ಕಿರಣ್ ಕುಮಾರಿ, ಕಾರ್ಯದರ್ಶಿಗಳಾದ ಈರಮ್ಮ, ನಗರ ಕಾರ್ಯದರ್ಶಿಗಳಾದ ರಾಣಿ ಎಲಿಜಬೆತ್ ಹಾಗೂ ಸಿಐಟಿಯು ಸಾಮೂಹಿಕ ಸಂಘಟನೆಯ ಎಲ್ಲಾ ಪದಾಧಿಕಾರಿಗಳು ಮತ್ತು ಸದಸ್ಯರು ಭಾಗವಹಿಸಿದ್ದರು.

# ಕೊಲೆ ಅಪರಾಧಿಗೆ ದಂಡಸಹಿತ ಜೀವಾವಧಿ ಶಿಕ್ಷೆ

- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಪ್ರೀತಿ ವಿಚಾರಕ್ಕೆ ಅಡ್ಡಿಯಾದನೆಂದು ಕೊಲೆಯಾದ ಕುಕನೂರು ತಾಲ್ಲೂಕಿನ ತಳಕಲ್ ಗ್ರಾಮದ ಮಂಜುನಾಥ ಎಂಬ ಬಾಲಕನ ಕೊಲೆ ಪ್ರಕರಣದಲ್ಲಿ ಆರೋಪಿಯ ಮೇಲಿನ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಅಪರಾಧಿಗೆ ರೂ.7 ಸಾವಿರಗಳ ದಂಡ ಸಹಿತ ಜೀವಾವಧಿ ಶಿಕ್ಷೆಯನ್ನು ವಿಧಿಸಿ ಕೊಪ್ಪಳ ನ್ಯಾಯಾಲಯವು ಆದೇಶ ಹೊರಡಿಸಿದೆ.

ತಳಕಲ್ ಗ್ರಾಮದ ಅಣ್ಣಪ್ಪ ತಂ.ಹೇಮಣ್ಣ ನಡುವಲಮನಿ ಎಂಬ ವ್ಯಕ್ತಿಯು ಅದೇ ಗ್ರಾಮದ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿದ್ದನು. ಈ ವಿಷಯವನ್ನು ಹುಡುಗಿಯ ತಮ್ಮ ಮಂಜುನಾಥ ಎಂಬ ಬಾಲಕನು ಮನೆಯಲ್ಲಿ ಹೇಳಿದ್ದರಿಂದ ಹುಡುಗಿ ಮನೆಯವರು ಅಣ್ಣಪ್ಪನಿಗೆ ಹುಡಗಿಯ ತಂಟೆಗೆ ಬರದಂತೆ ಬೈದು ಬುದ್ಧಿವಾದ ಹೇಳಿ, ತಾಕೀತು ಮಾಡಿದ್ದರು. ಇದರಿಂದ ಕೋಪಗೊಂಡ ಅಣ್ಣಪ್ಪನು ತನ್ನ ಪ್ರೀತಿ ವಿಚಾರಕ್ಕೆ ಬಾಲಕ ಮಂಜುನಾಥ ಅಡ್ಡಿಯಾಗುವನೆಂದು ಭಾವಿಸಿ 2020 ರ ಜುಲೈ 19 ರಂದು ಬಾಲಕನನ್ನು ಚಿಗರಿ ನೋಡುವ ಆಸೆ ತೋರಿಸಿ, ಕೊಪ್ಪಳ ತಾಲ್ಲೂಕಿನ ಹಲಗೇರಿ ಸೀಮಾದಲ್ಲಿರುವ ಸರಕಾರಿ ಇಚ್ಚಲ ಹಳ್ಳದಲ್ಲಿ ಕೊಲೆಗೈದು, ಗುಂಡಿ ತೋಡಿ ಮುಚ್ಚಿ ಇಟ್ಟಿದ್ದನು. ಈ ಬಗ್ಗೆ ಕುಕನೂರು ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ.57/2020, ಕಲಂ: 364, 302, 201 ಐಪಿಸಿ ಅಡಿ ಪ್ರಕರಣ ದಾಖಲಾಗಿತ್ತು.

ಆಗಿನ ತನಿಖಾಧಿಕಾರಿಗಳಾಗಿದ್ದ ಯಲಬುರ್ಗಾ ಪೊಲೀಸ್ ವೃತ್ತ ನಿರೀಕ್ಷಕರಾಗಿದ್ದ ನಾಗರೆಡ್ಡಿಯವರು ಪ್ರಕರಣದ ತನಿಖೆಯಲ್ಲಿ ಆರೋಪಿತನ ವಿರುದ್ಧದ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ನ್ಯಾಯಾಲಯಕ್ಕೆ ಆರೋಪಿಯ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆಯಲ್ಲಿ ಆರೋಪಿಯ ವಿರುದ್ಧದ ಆರೋಪಗಳು ಸಾಕ್ಷಾ ಧಾರಗಳಿಂದ ಸಾಬೀತಾದ ಹಿನ್ನೆಲೆಯಲ್ಲಿ ಕೊಪ್ಪಳ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಸಿ.ಚಂದ್ರಶೇಖರ ಅವರು ಅಪರಾಧಿಗೆ ಜೀವಾವಧಿ ಶಿಕ್ಷೆ  ಹಾಗು ರೂ.7000/– ಗಳ ದಂಡವನ್ನು ವಿಧಿಸಿ ಮಾರ್ಚ್ 12 ರಂದು ತೀರ್ಪು ನೀಡಿದ್ದಾರೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಬಂಡಿ ಅಪರ್ಣಾ ಮನೋಹರ ಅವರು ವಾದ ಮಂಡಿಸಿದ್ದರು. ಕುಕನೂರು ಪೊಲೀಸ್ ಠಾಣೆ ಸಿಬ್ಬಂದಿ ಅರ್ಜುನ್ ಸಿಪಿಸಿ–464, ಬಸಯ್ಯ ಸಿಎಚ್‌ಸಿ–182, ಅಮರೇಗೌಡ ಸಿಪಿಸಿ–502 ಇವರು ಸಾಕ್ಷೀದಾರರನ್ನು ಸರಿಯಾದ ಸಮಯಕ್ಕೆ ನ್ಯಾಯಾಲಯಕ್ಕೆ ಹಾಜರುಪಡಿಸಿ ಸಹಕರಿಸಿದ್ದಾರೆ ಎಂದು ಕೊಪ್ಪಳ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸರ್ಕಾರಿ ಅಭಿಯೋಜಕರ ಕಾರ್ಯಾಲಯದ ಪ್ರಕಟಣೆ ತಿಳಿಸಿದೆ.

# ಹಿಮೋಫಿಲಿಯಾಗೆ ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಲಕ್ಷಾಂತರ ರೂ ವೆಚ್ಚದ ಚಿಕಿತ್ಸೆ ಉಚಿತ

ಬಳ್ಳಾರಿ,: ಸರಿಯಾಗಿ ರಕ್ತ ಹೆಪ್ಪುಗಟ್ಟದ, ಕೀಲು ಸ್ನಾಯಿಗಳಲ್ಲಿ ರಕ್ತ ಸ್ರಾವ ಆಗುವ, ಮೈ ಜಜ್ಜುಗಟ್ಟುವಿಕೆಯ ಲಕ್ಷಣಗಳ ಹಿಮೋಫಿಲಿಯಾ ಕಾಯಿಲೆಯ ಚಿಕಿತ್ಸೆಗೆ ಲಕ್ಷಾಂತರ ರೂ ಬೇಕು. ಆದರೆ ಇಂತಹ ಚಿಕಿತ್ಸೆಯನ್ನು ಇಲ್ಲಿನ ಜಿಲ್ಲಾ ಆಸ್ಪತ್ರೆಯಲ್ಲಿ ಉಚಿತವಾಗಿ ನೀಡುವ ಕಾರ್ಯಕ್ಕೆ ಚಾಲನೆ ದೊರೆತಿದೆ.

ಜಿಲ್ಲಾ ಆಸ್ಪತ್ರೆಯಲ್ಲಿ ಕೆಲ ದಿನಗಳ ಹಿಂದೆ ಜಿಪಂ ಸಿಇಓ ಮಹಮ್ಮದ್ ಹ್ಯಾರೀಸ್ ಸುಮೇರ, ರಾಜೇಶ್ ನ್ಯಾಯಾಧೀಶ ಹೊಸಮನಿ ಹಿಮೋಫಿಲಿಯಾ ಸೋಂಕಿತ ಮಗುವಿಗೆ ಲಸಿಕೆ ನೀಡುವ ಮೂಲಕ ಆರು ತಿಂಗಳ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಈ ವೇಳೆ ಡಿಹೆಚ್‌ಓ

ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಬಸಾರೆಡ್ಡಿ ಮೊದಲಾದವರು ಇದ್ದರು.

ಸಾಮಾನ್ಯ ಆರೋಗ್ಯವಂತ ಮನುಷ್ಯನ ದೇಹದಿಂದ ರಕ್ತ ಹೊರ ಬಂದಾಗ 11 ಸೆಕೆಂಡ್ ನಲ್ಲಿ ಹೆಪ್ಪುಗಟ್ಟಬೇಕು. ಆದರೆ ಈ ಹಿಮೋಫಿಲಿಯಾ ಸೋಂಕು ಇರುವ ರೋಗಿಗಳಲ್ಲಿ ರಕ್ತಸ್ರಾವ ನಿರಂತರವಾಗಿರುತ್ತದೆ. ಇದ–ಕ್ಕೆ ಕಾರಣ ರಕ್ತದಲ್ಲಿನ 8 ಮತ್ತು 9 ನೇ ಅಂಶಗಳ ಕೊರತೆಯಾಗಿದೆ. ಜೊತೆಗೆ ಇದು ಅನುವಂಶೀಯ ಕಾಯಿಲೆಯಾಗಿದ್ದು. ಪುರುಷರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಇದರ ಚಿಕಿತ್ಸೆಯು ಕೊರತೆಯಿರುವ ಹೆಪ್ಪುಗಟ್ಟುವಿಕೆಯನ್ನು ಹೊರಗಿನಿಂದ ನೀಡುವುದನ್ನು



ಒಳಗೊಂಡಿರುತ್ತದೆ.

ರೋಗಲಕ್ಷಣಗಳು: ರಕ್ತಸ್ರಾವ, ಗಾಯಗಳಾಗುವುದು, ಶಸ್ತ್ರಚಿಕಿತ್ಸೆಯ ನಂತರ ಅತಿಯಾದ, ದೀರ್ಘಕಾಲದವರೆಗೆ ರಕ್ತಸ್ರಾವವಾಗುತ್ತದೆ. ತೀವ್ರತರವಾದ ಪ್ರಕರಣಗಳಲ್ಲಿ ಮಿದುಳಿನೊಳಗೆ ಸಹ ರಕ್ತಸ್ರಾವ ಆಗಬಹುದು, ಇದು ತಲೆನೋವು, ವಾಂತಿ ಅಥವಾ ಫಿಟ್ಸ್ ಗೂ ಕಾರಣವಾಗುತ್ತದೆ.

ಸರಿಯಾದ ಚಿಕಿತ್ಸೆ ಇಲ್ಲದಿದ್ದರೆ, ದೀರ್ಘಕಾಲದ ಕೀಲು ಕಾಯಿಲೆ ದೇಹದ ಆಳವಾದ ಆಂತರಿಕ ರಕ್ತಸ್ರಾವ ಮತ್ತು ಅಪರೂಪದ ಸಂದರ್ಭಗಳಲ್ಲಿ ಜೀವಕ್ಕೆ ಅಪಾಯಕಾರಿ ಮಿದುಳಿನ ರಕ್ತಸ್ರಾವ ಸಂಭವಿಸಬಹುದು.

**ಚಿಕಿತ್ಸೆ:**

ಅಧುನಿಕ, ಸಕ್ರಿಯ ಚಿಕಿತ್ಸೆ (ಪ್ರೊಫಿಲ್ಯಾಕ್ಸಿಸ್ – ರಕ್ತಸ್ರಾವವಾಗದಂತೆ ಮುನ್ನೆಚ್ಚರಿಕೆ ಕ್ರಮವಾಗಿ ನೀಡುವ ಚಿಕಿತ್ಸೆ)ಯಾಗಿದೆ ದೇಹದಿಂದ ರಕ್ತಸ್ರಾವ ಆಗುವುದನ್ನು ತಡೆಯಲು ಹೆಪ್ಪುಗಟ್ಟುವ ಅಂಶಗಳನ್ನು ಲಸಿಕೆ ಮೂಲಕ (ಫ್ಯಾಕ್ಟರ್ ರಿಪ್ಲೇಸ್ಮೆಂಟ್ ಥೆರಪಿ) ನೀಡಲಾಗುತ್ತದೆ.

ಸ್ನಾಯುಗಳು ಮತ್ತು ಕೀಲುಗಳನ್ನು ಬಲಪಡಿಸಲು ನಿಯಮಿತವಾಗಿ ವ್ಯಾಯಾಮ ಮಾಡಬೇಕಿದೆ. ರಕ್ತ ತೆಳುವಾಗಿಸುವ ಔಷಧಿಗಳನ್ನು ತೆಗೆದುಕೊಳ್ಳಬಾರದು.

**ಬಳ್ಳಾರಿ ಜಿಲ್ಲೆಯಿಂದ ಈ ಉಚಿತ ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಯಲ್ಲಿ 22 ರೋಗಿಗಳನ್ನು ನೋಂದಾಯಿಸಲಾಗಿದೆ. 11 ಮಕ್ಕಳಿಗೆ (ವಯಸ್ಸು 18 ವರ್ಷದೊಳಗಿನವರಿಗೆ ಮಾತ್ರ) ಉಳಿದ 11ಹಿರಿಯ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಆರು ತಿಂಗಳು ನಿರಂತರವಾಗಿ ಲಸಿಕೆ ಪಡೆಯಬೇಕು. ಇದ-ರಿಂದ ಒಂದಿಷ್ಟು ಕಡಿಮೆಯಾಗುವ ಸಾಧ್ಯತೆ ಇದೆ. ಸರ್ಕಾರ ಪ್ರಾಯೋಗಿಕವಾಗಿ ಇದನ್ನು ಹಮ್ಮಿಕೊಂಡಿದೆ. ಒಂದು ಲಸಿಕೆ 50 ರಿಂದ 60 ಸಾವಿರ ರೂ ವೆಚ್ಚದ್ದಾಗಿದೆ. ಇದನ್ನು ಸರ್ಕಾರ ಮುಂದುವರಿಸಬಹುದು.**

**ಡಾ.ಎನ್.ಬಸಾರೆಡ್ಡಿ**
**ಜಿಲ್ಲಾ ಶಸ್ತ್ರಚಿಕಿತ್ಸಕರು, ಬಳ್ಳಾರಿ.**

**ಚಿಕಿತ್ಸೆ ವೆಚ್ಚ :**

ವಿವಿಧ ರೂಪಾಂತರಗಳು ಮತ್ತು ಗಾತ್ರಗಳ ಆಧಾರದ ಮೇಲೆ ಬೆಲೆಗಳು ಬದಲಾಗುತ್ತದೆ. ಹೆಚ್ಚು ಎಂದರೆ ಸ 2.35 ಲಕ್ಷ ರೂ ಕಡಿಮೆ ಎಂದರೆ 1,20 ಲಕ್ಷ ರೂ ವರೆಗೆ ಒಬ್ಬರಿಗೆ ವೆಚ್ಚವಾಗುತ್ತದೆ. ಒಬ್ಬರಿಗೆ ತಿಂಗಳಿಗೆ ಒಂದು ಇಂಜೆಕ್ಷನ್ ಕೊಡಬೇಕಾಗುತ್ತದೆ ಮತ್ತು ಇದು ಜೀವನ ಪೂರ್ತಿ ಕೊಡಬೇಕಾಗುತ್ತದೆ. ಈ ದುಬಾರಿ ಚಿಕಿತ್ಸೆಯನ್ನು ಸರ್ಕಾರಗಳು ಉಚಿತವಾಗಿ ನೀಡಲು ಈ ವರ್ಷ ಅಭಿಯಾನ ಹಮ್ಮಿಕೊಂಡಿದೆ ಇದರಡಿ ಆರು ತಿಂಗಳು ಉಚಿತ ಚಿಕಿತ್ಸೆ ನೀಡಲಾಗುತ್ತದೆ.

# ನೆಮ್ಮದಿಯ ಜೀವನಕ್ಕೆ ವಾತ್ಸಲ್ಯಮನೆ ಆಸರೆ: ರೋಹಿತಾಕ್ಷ

- ಮಲ್ಲಮ್ಮ ನುಡಿ ವಾರ್ತೆ ಸಿರುಗುಪ್ಪ

ಅಸಹಾಯಕರ ಬಾಳಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯು ಬೆಳಕಾಗುತ್ತಿದೆ. ವಾತ್ಸಲ್ಯಮನೆ ನೆಮ್ಮದಿಯ ಬದುಕಿಗೆ ಆಸರೆಯಾಗಿದೆ ಎಂದು ಜಿಲ್ಲಾ ನಿರ್ದೇಶಕರೋಹಿತಾಕ್ಷ ಹೇಳಿದರು. ತಾಲೂಕಿನ ಉಪ್ಪಾರ ಹೊಸಳ್ಳಿ ಗ್ರಾಮದ ಫಲಾನುಭವಿ ಹೋಟೆಲ್ ನೀಲಮ್ಮ ಅವರಿಗೆ ಶ್ರೀ–ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ರೂ. 1,35,000/– ವೆಚ್ಚದಲ್ಲಿ ನಿರ್ಮಿಸಿದ ವಾತ್ಸಲ್ಯ ಮನೆಯನ್ನು ಭಾನುವಾರ ಹಸ್ತಾಂತರ ಮಾಡಿ ಮಾತನಾಡಿದರು.

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಬಡ, ನಿರ್ಗತಿಕ ಮಹಿಳೆಯರ ಬದುಕಿನಲ್ಲಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದೆ. ಅನೇಕ ಸಾಮಾಜಿಕ ಕಾರ್ಯಕ್ರಮಗಳ ಮುಖಾಂತರ ಮಹಿಳಾ ಸಬಲೀಕರಣಕ್ಕಾಗಿ ಮಾತೃಶ್ರೀ ಹೇಮಾವತಿ ಅಮ್ಮನವರು ಹಗಲಿರುಳು ಶ್ರಮಿಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ. ಜ್ಞಾನ ವಿಕಾಸ ಕಾರ್ಯಕ್ರಮದಡಿಯಲ್ಲಿ ಸಮಾಜದಲ್ಲಿರುವ ಅತಿ ದುರ್ಬಲ



ಮತ್ತು ಅಸಹಾಯಕ ಸ್ಥಿತಿಯಲ್ಲಿರುವ ಕುಟುಂಬಗಳನ್ನು ಗುರುತಿಸಿ ಅವರ ಜೀವನ ನಿರ್ವಹಣೆಗೆ ಬೇಕಾದ ಮಾಸಾಶನ ಹಾಗೂ ಅಗತ್ಯಕ್ಕೆ ಅನುಕೂಲವಾಗುವಂತೆ ವಾತ್ಸಲ್ಯ ಕಿಟ್‌ಗಳನ್ನು ಕೊಡುವುದರೊಂದಿಗೆ ಸೂರು ಇಲ್ಲದವರಿಗೆ ಸ್ವಂತ ಸೂರು ನಿರ್ಮಾಣ ಮಾಡಿ ಕೊಡಲಾಗುತ್ತಿದೆ. ದುಸ್ಥಿತಿಯಲ್ಲಿ ಜೀವಿಸುತ್ತಿರುವ ಅಸಹಾಯಕ ಬಂಧುಗಳಿಗೆ ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಜೀವಿತಾವಧಿಯ ಕೊನೆಯ ಕ್ಷಣದಲ್ಲಿ ನೆಮ್ಮದಿಯ ಜೀವನವನ್ನು ಕಲ್ಪಿಸುವುದು ಮಾತೃಶ್ರೀ ಹೇಮಾವತಿ ಅಮ್ಮನವರ ಆಶಯವಾಗಿದೆ,

ಈವರೆಗೆ ರಾಜ್ಯಾದ್ಯಾಂತ 18,847 ಜನ ಫಲಾನುಭವಿಗಳು ಮಾಸಾಶನ ಪಡೆಯುತ್ತಿದ್ದು, ರಾಜ್ಯಾದ್ಯಾಂತ 726 ಹೊಸ ಮನೆ ರಚನೆ ಮಾಡಿದ್ದು 166 ಹಳೆ ಮನೆ ದುರಸ್ಥಿ ಮಾಡಲಾಗಿದೆ, ಮತ್ತು 238 ಜನರಿಗೆ ಶೌಚಾಲಯ, ಸ್ನಾನಗೃಹ ರಚನೆ ಮಾಡಿಕೊಡಲಾಗಿದೆ, 61 ಫಲಾನುಭವಿಗಳ ಮನೆಗಳಿಗೆ ಸೋಲಾರ್, ವಿದ್ಯುತ್, ನಲ್ಲಿ ನೀರಿನ ಅಳವಡಿಕೆ ಮಾಡಲಾಗಿದ್ದು, 2049 ಜನರಿಗೆ ವಾತ್ಸಲ್ಯ ಮಿಕ್ಸ್ ಆಹಾರ ಕಿಟ್ ವಿತರಣೆ ಮಾಡಲಾಗಿದೆ, 102 ಜನ ಮಕ್ಕಳಿಗೆ ವಾತ್ಸಲ್ಯ ವಿದ್ಯಾನಿಧಿ ಒದಗಣೆ ಮಾಡಲಾಗಿದ್ದು, 127 ವಾತ್ಸಲ್ಯ ಕುಟುಂಬದ ನೆರವಿಗೆ ಪೋಷಕರನ್ನು ನೇಮಿಸಿದ್ದು ಮತ್ತು ಆಹಾರ ಪೂರೈಕೆಗೆ ಕುಟುಂಬಗಳಿಗೆ 127 ಟಿಫಿನ್ ಬಾಕ್ಸ್ ವಿತರಿಸಲಾಗಿದೆ. ಈವರೆಗೆ ವಾತ್ಸಲ್ಯ ಕಾರ್ಯಕ್ರಮಕ್ಕಾಗಿ 11 ಕೋಟಿ 03 ಲಕ್ಷದ 88 ಸಾವಿರ ರೂಪಾಯಿ ವಿನಿಯೋಗಿಸಲಾಗಿದೆ ಎಂದು ಹೇಳಿದರು.

ವಾತ್ಸಲ್ಯ ಮನೆ ಹಸ್ತಾಂತರ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಶಾಸಕ ಎಂ ಎಸ್ ಸೋಮಲಿಂಗಪ್ಪ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರು ಸಮಾಜದಲ್ಲಿ ಇರುವ ಕಡು ಬಡವರು, ನಿರ್ಗತಿಕರು, ಅಸಹಾಯಕರಿಗೆ ಸಹಾಯ ಮಾಡುವುದರ ಮೂಲಕ ಸೂರಿಲ್ಲದವರಿಗೆ ಸೂರು ಕಲ್ಪಿಸಿಕೊಡುತ್ತಿರುವುದು ಶ್ಲಾಘನೀಯ ಇಂತಹ ಕಾರ್ಯಕ್ರಮಗಳು ಗ್ರಾಮದಲ್ಲಿ ಆಗಬೇಕಾದರೆ ಗ್ರಾಮದವರ ಸಹಕಾರವೂ ಅಗತ್ಯವಾಗಿರುತ್ತದೆ ಎಲ್ಲರ ಸಹಕಾರದಲ್ಲಿ ಉತ್ತಮ ಕೆಲಸಗಳು ಆಗಲು ಸಾಧ್ಯವಾಗುತ್ತದೆ ಎಂದರು.

ಇಂತಹ ಕಾರ್ಯಕ್ರಮಗಳಿಗೆ ಪ್ರತಿಯೊಬ್ಬ ಸಹೃದಯಿಗಳು ತಮ್ಮನ್ನ ತಾವು ತೊಡಗಿಸಿಕೊಂಡಲ್ಲಿ ಶೋಚನೀಯ ಸ್ಥಿತಿಯಲ್ಲಿ ಬದುಕುವ ವ್ಯಕ್ತಿಗಳಿಗೆ ಆಸರೆಯಾಗಬಹುದು ಎಂಬ ಅಶಯ ವ್ಯಕ್ತಪಡಿಸಿದರು.

ವಾತ್ಸಲ್ಯ ಫಲಾನುಭವಿ ಹೋಟೆಲ್ ನೀಲಮ್ಮ ಮಾತನಾಡಿ, ಕಳೆದ 10 ವರ್ಷಗಳಿಂದ ಮಳೆಗಾಲದಲ್ಲಿ ಮನೆ ಸೋರುತ್ತಿತ್ತು, ಗೋಡೆ ಕುಸಿಯುವ ಪರಿಸ್ಥಿತಿಯಲ್ಲಿತ್ತು, ಅದೇ ಮನೆಯಲ್ಲಿ ಜೀವ ಕಳೆಯುತ್ತಿದ್ದೆ, ನನ್ನ ಪರಿಸ್ಥಿತಿಯನ್ನು ನೋಡಿ ನನಗೆ ವಾತ್ಸಲ್ಯ ಮನೆ ನಿರ್ಮಿಸಿಕೊಟ್ಟರು, ನಮ್ಮಂತಹ ಅನೇಕ ಅನಾಥರ ಬಾಳಿಗೆ ಸೂರು ಕಲ್ಪಿಸಿಕೊಡುತ್ತಿರುವ ಧರ್ಮಸ್ಥಳದ ಪೂಜ್ಯ ದಂಪತಿಗಳಿಗೆ ಕೋಟಿ–ಕೋಟಿ ನಮನ ಸಲ್ಲಿಸುತ್ತೇನೆ ಎಂದು ಭಾವುಕರಾದರು.

ಕಾರ್ಯಕ್ರಮದಲ್ಲಿ ತಾಲೂಕು ಕ್ಷೇತ್ರ ಯೋಜನಾಧಿಕಾರಿ ಸುಧೀರ್ ಹಂಗಳೂರು, ಗ್ರಾಮ ಪಂಚಾಯತ್ ಅಧ್ಯಕ್ಷೆ ಸುವರ್ಣಮ್ಮ, ತಾಲೂಕು ವಿಚಕ್ಷಣಾಧಿಕಾರಿ ರಾಕೇಶ,

ತಾಲೂಕು ಜ್ಞಾನವಿಕಾಸ ಸಮನ್ವಯಾಧಿಕಾರಿ ಪ್ರಿಯಾ, ಮೇಲ್ವಿಚಾರಕಿ ರಾಧಿಕಾ, ಸೇವಾಪ್ರತಿನಿಧಿ ಶಕುಂತಲಾ, ಊರಿನ ಗಣ್ಯರಾದ ವೆಂಕಟೇಶ, ಶ್ರೀಧರ, ಶ್ರೀನಿವಾರ, ಅರುಣ್ ಕುಮಾರ, ಮೌನೇಶ ಯಾದವ್ ಸ್ವ ಸಹಾಯ ಸಂಘದ ಸದಸ್ಯರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ತಾಲೂಕು ಕೃಷಿ ಮೇಲ್ವಿಚಾರಕ ವೀರೇಶ್ ನಿರೂಪಿಸಿ, ಸ್ವಾಗತಿಸಿ, ವಂದಿಸಿದರು.

## ವ್ಯಕ್ತಿ ಮೇಲೆ ಚಿರತೆ ದಾಳಿ ಕ್ಯಾರೆ ಎನ್ನದ  ಅರಣ್ಯ ಇಲಾಖೆ

# ಮಂಜುನಾಥ್ ವೈಯಕ್ತಿಕ  ಧನ ಸಹಾಯ

- ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಕಣಗಾಲು ಗ್ರಾಮದಲ್ಲಿ ಕೂಲಿ ರೈತನ ಮೇಲೆ ಚಿರತೆ ದಾಳಿ ನಡೆದು ನಾಲ್ಕು ದಿನ ಕಳೆದಿದ್ದು, ಜನಪ್ರತಿನಿಧಿಗಳಾಗಲಿ, ಅರಣ್ಯ ಇಲಾಖೆ ಅಧಿಕಾರಿಗಳಾಗಲಿ ಆತನ ಆರೋಗ್ಯದ ಬಗ್ಗೆ ಸಣ್ಣ ಕಾಳಜಿ ವಹಿಸದೆ ನಿರ್ಲಕ್ಷ ಮಾಡಿರುವುದು ಮಾನವೀಯತೆಯ ಕರಾಳ ಮುಖಕ್ಕೆ ಹಿಡಿದ ಕೈಗನ್ನಡಿಯಾಗಿದೆ.

ಹುಣಸೂರು ತಾಲೂಕು ಹನಗೋಡು ಹೋಬಳಿ ಕಣಗಾಲು ಗ್ರಾಮದ ಮಹದೇವನಾಯಕರ ಮಗನಾದ ಮಾದೇಶ ನಾಯಕ ವ್ಯವಸಾಯ ಮಾಡುತ್ತಿರುವ ಸಂದರ್ಭದಲ್ಲಿ ಏಕಾಏಕಿ ಚಿರತೆ ಇವರ ಮೇಲೆರಗಿ ಗಾಯಗೊಳಿಸಿದೆ.

ಗಾಯಗೊಂಡ ರೈತನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಿದ್ದು ಅದೇ ದಿನ ಅರಣ್ಯ ಇಲಾಖೆ ಸಿಬ್ಬಂದಿ ಒಬ್ಬರು ಭೇಟಿ ಮಾಡಿದ್ದು ಬಿಟ್ಟರೆ, ಇದುವರೆಗೂ ಜನಪ್ರತಿನಿಧಿಗಳಾಗಲಿ, ಅರಣ್ಯ ಇಲಾಖೆಯವರಾಗಲಿ ಭೇಟಿ ನೀಡಿ



ಆರೋಗ್ಯ ವಿಚಾರಿಸಿ ಇರುವುದಿಲ್ಲ.

ಒಂದು ವೇಳೆ ಚಿರತೆ ವ್ಯಕ್ತಿಯನ್ನು ಬಲಿ ಪಡೆದಿದ್ದರೆ ಎಂಥ ದುರಂತವಾಗುತ್ತಿತ್ತು ಎಂದು ಆಕ್ರೋಶ ವ್ಯಕ್ತಪಡಿಸಿರುವ ಗ್ರಾಮಸ್ಥರು, ಜನಪ್ರತಿನಿಧಿಗಳ ಹಾಗೂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಮಾಜಿ ಶಾಸಕ ಮಂಜುನಾಥ್ ವೈಯಕ್ತಿಕ ಸಹಾಯ**

ವಿಷಯ ತಿಳಿದು ಆಸ್ಪತ್ರೆ ಮುಖ್ಯಸ್ಥರೊಂದಿಗೆ ದೂರವಾಣಿ ಮುಖಾಂತರ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಗಾಯಾಳು ಮಾದೇಶ ನಾಯಕರ ಅರೋಗ್ಯ ಹಾಗೂ ಚಿಕಿತ್ಸೆ ಬಗೆ ಚರ್ಚಿಸಿ, ತಮ್ಮ ಸಹೋದರ ಡಾಕ್ಟರ್ ಶ್ರೀನಾಥರನ್ನು ಆಸ್ಪತ್ರೆಗೆ ಕಳುಹಿಸಿ ವೈಯಕ್ತಿಕ ಧನ ಸಹಾಯ ಮಾಡಿ ಮಾನವೀಯತೆ ಮೆರೆದಿದ್ದಾರೆ.

# ಕನ್ನಡ ಸಾಹಿತ್ಯ ಸಂಸ್ಕೃತಿಯನ್ನು ರಕ್ಷಿಸಬೇಕು: ಕಳಕಪ್ಪ



• ಮಲ್ಲಮ್ಮ ನುಡಿವಾರ್ತೆ ಕುಕನೂರು

ಕನ್ನಡ ನಾಡಿನ ನೆಲ, ಜಲ, ಭಾಷೆ ಸಾಹಿತ್ಯ ಸಂಸ್ಕೃತಿಯನ್ನು ಎಲ್ಲರೂ ಒಗ್ಗಟ್ಟಾಗಿ ರಕ್ಷಿಸಬೇಕಾಗಿದೆ ಎಂದು ಕುಕನೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕಳಕಪ್ಪ ಕುಂಬಾರ ಹೇಳಿದರು.

ಅವರು ಶುಕ್ರವಾರ ದಿವಸ ಕುಕನೂರ ಪಟ್ಟಣದ ಗುದ್ನೆಪ್ಪ ಮಠದಲ್ಲಿ ಅಲ್ಪಸಂಖ್ಯಾತರ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ ದತ್ತಿ ಉಪನ್ಯಾಸ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಅವರು ಮುಂದುವರೆದ ಮಾತನಾಡಿ ನಮ್ಮ ಮಾತೃಭಾಷೆ ಕನ್ನಡವನ್ನು ಉಳಿಸಿಕೊಂಡು ಹೋಗಲು ಸಾಹಿತ್ಯ ಪರಿಷತ್ತಿನ ದತ್ತಿ ಉಪನ್ಯಾಸ ತುಂಬಾ ಸಹಕಾರಿಯಾಗಿದೆ. ಅಲ್ಲದೆ ಕನ್ನಡದ ಪ್ರೇಮ ಪ್ರತಿಯೊಬ್ಬರಲ್ಲಿ ಮೂಡಬೇಕು, ಮತ್ತು ದತ್ತಿ ದಾನಿಗಳನ್ನು ಕನ್ನಡ ಸಾಹಿತ್ಯ ಪರಿಷತ್ ಸದಾ ಅಭಿನಂದಿಸುತ್ತದೆ ಎಂದರು.

ಅಲ್ಪಸಂಖ್ಯಾತರ ಮುರಾರ್ಜಿ ವಸತಿಶಾಲೆಯ ಮುಖ್ಯೋಪಾಧ್ಯಾಯ ಬಸವಂತಪ್ಪ ದೊಡ್ಡಮನಿ ಮಾತನಾಡಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ದಾಟಿಸುವಲ್ಲಿ ದತ್ತಿ ಉಪನ್ಯಾಸಗಳ ಪಾತ್ರ ತುಂಬಾ ಮಹತ್ತರವಾದದ್ದು ಎಂದು ಹೇಳಿದರು.

ಶಿಕ್ಷಕಿ ಜ್ಯೋತಿ ವಿಜಯ ಕುಮಾರ್ ಮುಧೋಳ. ಅವರು "ಶರಣರ ಸಾಹಿತ್ಯ ಭಾರತೀಯ ಕೃಷಿ ಮತ್ತು ಸಂಸ್ಕೃತಿ," ಶಿಕ್ಷಕ ಮಾಂತೇಶ್ ಅಂಗಡಿ, ಅವರು , "ಏರಿ ಮಣ್ಣಿನ ಹೊಲಕ್ಕೆ ಉಸಿಕಿನ ಹೊದಿಕೆ ಮತ್ತು ಕೃಷಿ, " ಶಿಕ್ಷಕ ಬಸವರಾಜ್ ಉಪ್ಪಿನ್ ಅವರು "ನಾಡು ನುಡಿ ಬೆಳವಣಿಗೆ ಮತ್ತು ಗ್ರಾಮೀಣ ಪ್ರದೇಶದಲ್ಲಿ ಸಾಹಿತ್ಯ ಅಭಿವೃದ್ಧಿ " ಎಂಬ ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಕುಕನೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಗೌರವ ಕೋಶಾಧ್ಯಕ್ಷ ಬಸವರಾಜ್ ಮೇಟಿ ಪ್ರಾಸ್ತವಿಕವಾಗಿ ಆಶಯ ನುಡಿಗಳನ್ನು ನುಡಿದರು. ದಿವಂಗತ ಶಂಕ್ರಪ್ಪ ಸಿದ್ದಪ್ಪ ದೊಡ್ಡಯರಾಶಿ ಬನ್ನಿಕೊಪ್ಪ, ದಿವಂಗತ ರೊಕ್ಕಪ್ಪ ಆರ್ಯಾರ್ ಕುಕುನೂರು, ದಿವಂಗತ ರುದ್ರಮ್ಮ ರುದ್ರಪ್ಪ ಅಂಗಡಿ ರಾಜೂರು ಇವರ ಸ್ಮರಣಾರ್ಥವಾಗಿ ಮತ್ತು ಗೌರವ ದತ್ತಿ ದಾನಿಗಳಾದ ಯಂಕಣ್ಣ ಶಂಕ್ರಪ್ಪ ಯರಾಶಿ, ಈಶಪ್ಪ ರೊಕ್ಕಪ್ಪ ಆರ್ಯರ್ ಶರಣಪ್ಪ ರುದ್ರಪ್ಪ ಅಂಗಡಿ ದತ್ತಿದಾನಿಗಳಾಗಿದ್ದರು. ಕಾರ್ಯಕ್ರಮದಲ್ಲಿ ದತ್ತಿದಾನಿಗಳ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಲಾಯಿತು. ವೇದಿಕೆಯಲ್ಲಿ ಪಂಚಾಯಿತಿ ಅಧ್ಯಕ್ಷೆ ಲೀಲಾವತಿ ಮುಧೋಳ, ಉಪಾಧ್ಯಕ್ಷೆ ಮಂಜುಳಾ ಕಲ್ಮನಿ, ಅಶೋಕ್ ಮಾದಿನೂರು, ಎಚ್. ಕೆ. ಕುರಿ, ಹನುಮಂತ ಹಿರೇಮನಿ, ರಮೇಶ್ ಕುಲಕರ್ಣಿ ,ಯೋಗಪ್ಪ ಮಂಗಳೂರು, ಕಸಾಪ ಪದಾಧಿಕಾರಿ ಭೀಮರೆಡ್ಡಿ ಶಾಡ್ಲಿಗೇರಿ, ಪ್ರಧಾನ ಕಾರ್ಯದರ್ಶಿ ಫೀರಸಾಬ್ ದಫೇದಾರ್, ಸಾಹಿತ್ಯ ಆಸಕ್ತ ಕಸಾಪ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಕಾರುಣ್ಯ ಆಶ್ರಮಕ್ಕೆ ಸರ್ಕಾರದ ಸಹಕಾರ ಇರುತ್ತದೆ: ಹಿಟ್ನಾಳ

ಮಲ್ಲಮ್ಮನುಡಿವಾರ್ತೆ ಸಿಂಧನೂರು

ಮನುಷ್ಯ ಹುಟ್ಟಿದ ಮೇಲೆ ಸಾಮಾಜಿಕ ಜವಾಬ್ದಾರಿ ನಿಭಾಯಿಸಬೇಕು ಎಂದು ಹೇಳುತ್ತಾರೆ. ಆದರೆ ಬಹಳಷ್ಟು ಜನರು ತಮ್ಮ ಕುಟುಂಬದ ಜವಾಬ್ದಾರಿಯನ್ನು ನಿಭಾಯಿಸಿಕೊಂಡು ಹೋಗದೇ ಸಂದರ್ಭದಲ್ಲಿ ಕಾರುಣ್ಯ ಆಶ್ರಮ ಆಡಳಿತ ಮಂಡಳಿಯ ಚನ್ನಬಸವಯ್ಯ ತಾತನವರು ಬಹು ದೊಡ್ಡ ಜವಾಬ್ದಾರಿಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ ಎಂದರೆ ಅವರು ಗುಣ ಎಂ–ತದು ಎಂಬುದನ್ನು ನಾವು ಇಲ್ಲಿ ಅರ್ಥಮಾಡಿಕೊಳ್ಳಬೇಕಾಗಿದೆ.

ಸಿಂಧನೂರು ತಾಲೂಕಿನ ಕಾರುಣ್ಯ ಆಶ್ರಮಕ್ಕೆ ಕೊಪ್ಪಳ ಲೋಕಸಭಾ ಕ್ಷೇತ್ರದ ಸದಸ್ಯರಾದ ಕೆ. ರಾಜಶೇಖರ್ ಹಿಟ್ನಾಳ ಅವರು ಆಶ್ರಮಕ್ಕೆ ಭೇಟಿ ನೀಡಿ ವಾಸ್ತುವ ಸ್ಥಿತಿಯನ್ನು ನೋಡಿ ಭಾವುಕರಾದರು. ನಂತರ ಕಾರುಣ್ಯ ಆಶ್ರಮ ಕುರಿತು ಮಾತನಾಡಿದರು ಆದರೆ ಸಮಾಜದಲ್ಲಿ ಶಿಕ್ಷಣ ಸಂಸ್ಥೆ. ಹಾಸ್ಟೆಲ್ ಸಂಸ್ಥೆಗಳನ್ನು ಹಲವು ಸಂಸ್ಥೆಗಳು ನಡೆಸಬಹುದು .ಆದರೆ ಇಂತಹ ಸಂಸ್ಥೆ ನಡೆಸಬೇಕಾದರೆ




ಕಠಿಣವಾದ ಪರಿಶ್ರಮ ಬೇಕಾಗುತ್ತದೆ. ಆದರೆ ಕಾರುಣ್ಯ ಆಶ್ರಮ ಆಡಳಿತ ಮಂಡಳಿ ಇಂತಹ ಜವಾಬ್ದಾರಿಯಿಂದ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಒಳ್ಳೆ ಆರೋಗ್ಯ ಐಶ್ವರ್ಯ ಕೊಟ್ಟು ಭಗವಂತ ಅವರನ್ನು ಕಾಪಾಡಲಿ ಎಂದು ಹೇಳಿದರು ಏಕೆಂದರೆ ಕೆಲವರು ಆರೋಗ್ಯವಾಗಿ ಇದ್ದಾರೆ ಇನ್ನೂ ಕೆಲವರು ಆರೋಗ್ಯವಾಗಿ ಇಲ್ಲದೆ ಇದ್ದಾರೆ ಅಂತವರನ್ನು ಅವರು ತಮ್ಮ ಮಗು ತರಹ ಜೋಪಾನದಿಂದ ಕಾಪಾಡಿಕೊಂಡು ಹೋಗುತ್ತಿದ್ದಾರೆ. ಎಂದರೆ ನಿಜಕ್ಕೂ ಚನ್ನಬಸವಯ್ಯ ಹರಟೆನೂರು ತಾತನವರು ಶ್ಲಾಘನೀಯ ಎಂದರೆ ತಪ್ಪಾಗಲಾರದು ಸಮಾಜದಲ್ಲಿ ಇಂತಹ ಪರಿಸ್ಥಿ ಯಾರಿಗೂ ಬರಬಾರದು. ಏಕೆಂದರೆ ಸಮಾಜದಲ್ಲಿ ಜೀವನ ಮಟ್ಟ ಸುಧಾರಿಸಿದೆ. ಎಲ್ಲಾ ರೀತಿಯ ಚೆನ್ನಾಗಿದೆ. ಇವತ್ತಿನ ದಿನದಲ್ಲಿ ಚೆನ್ನಾಗಿ ಇರುವುದೇ ಮುಳ್ಳುಯಾಗದೆ ಎಂದು ಅನಿಸುತ್ತದೆ. ಈ ಪರಿಸ್ಥಿತಿಗೆ ಎಲ್ಲರೂ ಚಪ್ಪಾಳೆ ತಟ್ಟಿದಾಗ ಒಂದು ಸಂಸ್ಥೆಗಳು ನಡೆಸಿಕೊಂಡು ಹೋಗುವುದಕ್ಕೂ ಶಕ್ತಿ ಬರುತ್ತದೆ ಹಾಗಾಗಿ ಚನ್ನಬಸವಯ್ಯ ಹರಟೆನೂರು ತಾತನವರು ಆಶ್ರಮಕ್ಕೆ ನನ್ನದು ಸಹಕಾರ ಇರುತ್ತದೆ. ಮತ್ತು ಆಶ್ರಮಕ್ಕೆ ಜಾಗ ಇಲ್ಲ ಎಂದು ಅವರು ಪ್ರಸ್ತಾಪ ಮಾಡಿದ್ದಾರೆ. ಅದನ್ನು ತಾಲೂಕು ತಹಶೀಲ್ದಾರ್ ಅವರು ಜೊತೆಗೆ ಮಾತನಾಡುತ್ತೇನೆ. ಇಂತಹ ಒಳ್ಳೆ ಕಾರುಣ್ಯ ಆಶ್ರಮ ಬೆಳೆಸುವುದಕ್ಕೆ ಸರ್ಕಾರದಿಂದ ಏನು ಕೊಡಬೇಕು ಕೊಡುತ್ತೇನೆ ಮತ್ತು ನನ್ನ ವ್ಯಕ್ತವಾಗಿ ಸಹಕಾರ ಇದ್ದೇ ಇರುತ್ತದೆ ಎಂದು ಹೇಳಿದರು . ಇದೇ ಸಂದರ್ಭದಲ್ಲಿ ಕಾರುಣ್ಯ ಆಶ್ರಮ ಆಡಳಿತ ಮಂಡಳಿ ಸಂಸದರಾದ ರಾಜಶೇಖರ ಹಿಟ್ನಾಳ ಅವರಿಗೆ ಸನ್ಮಾನಿಸಿ ಗೌರವಿಸಲಾಯಿತು.ಈ ಸಂದರ್ಭದಲ್ಲಿ ಹನುಮೇಶ ಇಂಗ್ಲೀಷ್ ಬಾಗೋಡಿ. ಡಾ. ನಾಗವೇಣಿ. ವೀರೇಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಪಿಯು: ರಾಜ್ಯಶಾಸ್ತ್ರ ವಿಷಯಕ್ಕೆ 972 ಗೈರು

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ 2026ರ ಮಾರ್ಚ್ 13ರ ಶುಕ್ರವಾರ ನಡೆದ ರಾಜ್ಯಶಾಸ್ತ್ರ ವಿಷಯದಲ್ಲಿ 972 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ನಡೆದ ರಾಜ್ಯಶಾಸ್ತ್ರ ವಿಷಯದಲ್ಲಿ ಪರೀಕ್ಷೆಗೆ 10,349 ವಿದ್ಯಾರ್ಥಿಗಳು ನೋಂದಣಿಯಾಗಿದ್ದ ಪೈಕಿ 9,371 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿ, 972 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅ್ಯಂಗಲ ಮಹಿಳಾ ಬಿಸಿ ಗ್ರೂಪ್ ವತಿಯಿಂದ ಅದ್ದೂರಿ ಮಹಿಳಾ ದಿನಾಚರಣೆ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಪಟ್ಟಣದಲ್ಲಿ ಅಂಗಲ್ಯ ವಿಮೆನ್ ಬಿಸಿ ಗ್ರೂಪ್ ವತಿಯಿಂದ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಶನಿವಾರ ಅತ್ಯಂತ ಸಡಗರ ಮತ್ತು ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಸಮೂಹದ ಮಹಿಳೆಯರೆಲ್ಲರೂ ಒಗ್ಗೂಡಿ ಕೇಕ್ ಕತ್ತರಿಸುವ ಮೂಲಕ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡರು. ಸಮಾಜದಲ್ಲಿ ಮಹಿಳೆಯರ ಪಾತ್ರ ಮತ್ತು ಅವರ ಸಾಧನೆಗಳನ್ನು ಸ್ಮರಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಒಗ್ಗಟ್ಟಿನ ಸಂಕೇತ:ಗ್ರೂಪ್‌ನ ಎಲ್ಲಾ ಸದಸ್ಯರು ಏಕರೂಪ ನೇರಳೆ ಬಣ್ಣದ ಸೀರೆಗಳನ್ನು ಧರಿಸುವ ಮೂಲಕ ಒಗ್ಗಟ್ಟನ್ನು ಪ್ರದರ್ಶಿಸಿದರು.



ಕಾರ್ಯಕ್ರಮದಲ್ಲಿ ಮಕ್ಕಳೂ ಸಹ ಉತ್ಸಾಹದಿಂದ ಭಾಗವಹಿಸಿ ಸಂಭ್ರಮಕ್ಕೆ ಮೆರುಗು ನೀಡಿದರು. ಈ ವೇಳೆ ಪ್ರೇಮ ಮೂಲಗೆ ಅವರು ಮಾತನಾಡಿ,

ಮಹಿಳೆಯರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸಬಲರಾಗಬೇಕು ಎಂಬ ಆಶಯದೊಂದಿಗೆ ಈ ದಿನವನ್ನು ಆಚರಿಸಲಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ರತ್ನಮ್ಮ ಹಲ್ಕುಡೆ, ಕವಿತಾ, ಪೂರ್ಣಿಮಾ, ರೇಣುಕಾ, ಶೀಲಾ, ರೂಪಾ, ಸರೋಜನ,

ಶಿವಾನಂದಾ ಸೇರಿದಂತೆ ಬಿಸಿ ಗ್ರೂಪ್‌ನ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

# ಮಹಿಳೆಯರಿಗೆ ಸಮಾನ ಅವಕಾಶ ಗೌರವ ನೀಡಿದಾಗ ಮಾತ್ರ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯ : ಮಮತಾ ರಾಯರೆಡ್ಡಿ



• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ಕೇವಲ ಒಂದು ಕುಟುಂಬದ ಶಕ್ತಿಯಲ್ಲ, ಅವಳು ಇಡೀ ರಾಷ್ಟ್ರದ ಚೈತನ್ಯ. ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಗೌರವ ನೀಡಿದಾಗ ಮಾತ್ರ ಸಮಾಜದ ಸಮಗ್ರ ಅಭಿವೃದ್ಧಿ ಸಾಧ್ಯ,"ಎಂದು ಆರಾಮ್ ಸಂಸ್ಥೆಯ ಅಧ್ಯಕ್ಷೆ ಮಮತಾ ರಾಯರೆಡ್ಡಿ ಅಭಿಪ್ರಾಯಪಟ್ಟರು.

ಇಂದು ಪಟ್ಟಣದಲ್ಲಿ ಕೊಪ್ಪಳ ಜಿಲ್ಲಾ ಹಾಗೂ ಯಲಬುರ್ಗಾ ವಿಧಾನಸಭಾ ಮಹಿಳಾ ಕಾಂಗ್ರೆಸ್ ಹಾಗೂ ಆರಾಮ್(ಎನ್.ಜಿ.ಓ) ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಮಹಿಳೆಗೆ ಕೇವಲ ಒಂದು ದಿನದ ಮಟ್ಟಿಗೆ ಗೌರವ ನೀಡಿದರೆ ಸಾಲದು. ಆಕೆಯ ತ್ಯಾಗವನ್ನು ಪ್ರತಿದಿನವೂ ಸ್ಮರಿಸೋಣ ಮತ್ತು ಆಕೆಗೆ ಬೇಕಾದ ಸಮಾನ ಅವಕಾಶ ಹಾಗೂ ಸುರಕ್ಷತೆಯನ್ನು ಒದಗಿಸೋಣ. ಅಂದೇ ಈ ದಿನಾಚರಣೆಗೆ ನಿಜವಾದ ಅರ್ಥ ಸಿಗುತ್ತದೆ. "ಒಬ್ಬ ಮಹಿಳೆ ತನ್ನ ಇಡೀ ಜೀವನವನ್ನು ಕುಟುಂಬಕ್ಕಾಗಿ ಮುಡಿಪಾಗಿಡುತ್ತಾಳೆ. ತನ್ನ ಆಸೆ, ಆಕಾಂಕ್ಷೆಗಳನ್ನು ಬದಿಗಿಟ್ಟು ಇತರರ ಸುಖದಲ್ಲಿ ಸಂತೋಷ ಕಾಣುವ ಆಕೆಯ ತ್ಯಾಗಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ. ತಾಯಿಯಾಗಿ, ಮಗಳಾಗಿ, ಪತ್ನಿಯಾಗಿ ಅವಳು ನೀಡುವ ಕೊಡುಗೆ ಅನನ್ಯ., ಅವಳು ತ್ಯಾಗದ ಸಂಕೇತ, ಸಮಾಜದಲ್ಲಿ ಎಷ್ಟೇ ಸವಾಲುಗಳು ಎದುರಾದರೂ, ನೋವುಗಳನ್ನು ನಗುಮುಖದಿಂದಲೇ ನುಂಗಿ ಜವಾಬ್ದಾರಿಗಳನ್ನು ನಿಭಾಯಿಸುವ ಆಕೆಯ ತಾಳ್ಮೆಯೇ ಆಕೆಯ ಅತಿದೊಡ್ಡ ಶಕ್ತಿ. ತಾಳ್ಮೆಯೆಂದರೆ ಸೋಲಲ್ಲ, ಅದು ಪರಿಸ್ಥಿತಿಯನ್ನು ಗೆಲ್ಲುವ ದಾರಿ ಎಂದು ಮಹಿಳೆ ಸಾಬೀತುಪಡಿಸಿದ್ದಾಳೆ ಎಂದು ಹೇಳಿದರು. ಮಹಿಳಾ ಸಾಧಕಿಂ–ಯರಿಗೆ "2026ನೇ ಸಾಲಿನ ಕೊಪ್ಪಳ ಜಿಲ್ಲಾ ಸ್ತ್ರೀ ರತ್ನ ಪ್ರಶಸ್ತಿ ಪ್ರಧಾನ" : ವಿವಿಧ ಕ್ಷೇತ್ರಗಳಲ್ಲಿ (ಶಿಕ್ಷಣ, ಕೃಷಿ, ಸಮಾಜ ಸೇವೆ, ಮತ್ತು ಕ್ರೀಡೆ ಇನ್ನು ಇತರೆ) ಗಣನೀಯ ಸಾಧನೆ ಮಾಡಿದ 14 ಜನ ಸಾಧಕ ಮಹಿಳೆಯರನ್ನು ಫಲಾಪೇಕ್ಷೆಯಿಲ್ಲದೇ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿ–ಯಾಗಿದ್ದ ಶರಣಮ್ಮ ಚಟ್ಟಿ ಅವರು ಮಾತನಾಡಿ,"ಇಂದಿನ ದಿನಗಳಲ್ಲಿ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿರುವುದು ಸಂತಸದ ವಿಷಯ. ಆದರೆ, ಗ್ರಾಮೀಣ ಭಾಗದ ಮಹಿಳೆಯರಲ್ಲಿ ಇಂದಿಗೂ ಶಿಕ್ಷಣ ಮತ್ತು ಆರೋಗ್ಯದ ಬಗ್ಗೆ ಅರಿವು ಮೂಡಿಸುವ ಅಗತ್ಯವಿದೆ" ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ, ಶತಾಯುಷಿ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೆಕ್ಯಾತರ ಅವರಿಂದ ರಾಮಾಯಣದ ಸನ್ನಿವೇಶವನ್ನು ಅಪರೂಪದ

ಈ ಕಾರ್ಯಕ್ರಮದಲ್ಲಿ ಅಂತರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪುರಸ್ಕೃತ ಶರಣಮ್ಮ ಚನ್ನಪ್ಪ ಚಟ್ಟಿ, ಜಿಲ್ಲಾ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ಜ್ಯೋತಿ ಎಂ ಗೊಂಡಬಾಳ, ಶ್ರೀಮತಿ ಗಿರಿಜಾ ಸಂಗಟಿ, ಫರೀದಾ ಬೇಗಂ ತಂಬಾಕದಾರ, ಸಾವಿತ್ರಿ ಎಸ್ ಗೊಲ್ಲರ್, ಜಯಶ್ರೀ ಕಂದುಕುರ್, ನಂದಿತಾ ದಾನರೆಡ್ಡಿ, ಶರಣಮ್ಮ ಪೂಜಾರಿ, ಪಟ್ಟಣ ಪಂಚಾಯತ ಅಧ್ಯಕ್ಷೆ ಲೀಲಾವತಿ ಪ್ರವೀಣ್ ಮುಧೋಳ್, ಉಪಾಧ್ಯಕ್ಷೆ ಮಂಜುಳಾ ಕಲ್ಮನಿ ಇನ್ನೂ ಜಿಲ್ಲೆಯ ಮಹಿಳೆಯರು ಉಪಸ್ಥಿತರಿದ್ದರು.

# ವೈಜ್ಞಾನಿಕ ಮನೋಭಾವ ಬೆಳೆಸಲು ಗ್ರಾಮದಲ್ಲಿ ವಿಶೇಷ ಜಾಗೃತಿ

• ಮಲ್ಲಮ್ಮ ನುಡಿ ವಾರ್ತೆ ಕುಕನೂರು

ಮೌಢ್ಯತೆ ಮತ್ತು ಅಂಧಶ್ರದ್ಧೆಗಳಿಂದ ದೂರವಿದ್ದು, ವೈಜ್ಞಾನಿಕ ಚಿಂತನೆ ಬೆಳೆಸಿಕೊಳ್ಳಲು ಬ್ರೇಕ್ ಥ್ರೂ ಸೈನ್ಸ್ ಸೊಸೈಟಿ (ಃಖಖ)ವತಿಯಿಂದ ಶನಿವಾರ ಬಿನ್ನಾಳ ಗ್ರಾಮದಲ್ಲಿ ವಿಶೇಷ ಕಾರ್ಯಕ್ರಮ ನಡೆಯಿತು.

ತಾಲೂಕಿನ ಬಿನ್ನಾಳ ಗ್ರಾಮದ ಶ್ರೀ ಶಣ್ಮುಖೇಶ್ವರ ದೇವಸ್ಥಾನದ ಆವರಣದಲ್ಲಿ ಮೌಢ್ಯತೆಯನ್ನು ದೂರವಾಗಿಸಲು ವಿಜ್ಞಾನ ಅರಿಯೋಣ ಎಂಬ ವಿಚಾರ ಸಂಕಿರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬ್ರೇಕ್ ಥ್ರೋ ಸೈನ್ಸ್ ಸೊಸೈಟಿ ಯ ರಾಜ್ಯ ಕಾರ್ಯದರ್ಶಿ ಆನಂದ ರಾಜ ಮಾತನಾಡಿ, “ಮೌಢ್ಯತೆ ಮತ್ತು ಅಂಧಶ್ರದ್ಧೆಗಳಿಂದ ದೂರವಿರಿ. ವೈಜ್ಞಾನಿಕ ಚಿಂತನೆ ಬೆಳಸಿಕೊಳ್ಳಿ. ಪರಿಸರದಲ್ಲಿ ಬರುವ ಬದಲಾವಣೆಗಳ ಬಗ್ಗೆ ಅರಿವು ಇಲ್ಲದ ಕಾರಣ ಜನರು ಅನಾವಶ್ಯಕ ಭಯಕ್ಕೆ ಒಳಗಾಗುತ್ತಿದ್ದಾರೆ. ಮೊದಲು ಭಯವನ್ನು ಬಿಟ್ಟು, ಯಾವುದೇ ವಿಷಯದ ನೈಜತೆಯನ್ನು ತಿಳಿಯಲು ಪ್ರಯತ್ನಿಸಬೇಕು”ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ




ಗ್ರಾಮದ ಶಿಕ್ಷಣಪ್ರೇಮಿ ಮತ್ತು ಪತ್ರಕರ್ತ ಜಗದೀಶ್ ಚಟ್ಟಿ ಹೇಳಿದರು, “ಮಕ್ಕಳು ಮತ್ತು ಯುವಕರು ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಯಾವುದೇ ಘಟನೆ ಅಥವಾ ವಿಷಯವನ್ನು ಅಂಧವಾಗಿ ನಂಬುವುದಕ್ಕಿಂತ ಅದರ ಹಿಂದೆ ಇರುವ ವೈಜ್ಞಾನಿಕ ಕಾರಣಗಳನ್ನು ಅರಿತುಕೊಳ್ಳುವುದು ಮುಖ್ಯ” ಎಂದರು.

ಸಮಾರಂಭದಲ್ಲಿ ವಿದ್ಯಾರ್ಥಿಗಳಿಗಾಗಿ ವೈಜ್ಞಾನಿಕ ಪ್ರಾಯೋಗಿಕ ಪ್ರದರ್ಶನಗಳು ಹಮ್ಮಿಕೊಳ್ಳಲಾಗಿದ್ದು, ಗ್ರಾಮಸ್ಥರು, ಯುವಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ ವಿಜ್ಞಾನ ಅರಿವನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ವಿಜ್ಞಾನ ಶಿಕ್ಷಕ, ಗುರುರಾಜ ದೊಡ್ಡಮನಿ ಅವರು ಮಾತನಾಡಿ,, “ಬ್ರೇಕ್ ಥ್ರೂ ಸೈನ್ಸ್ ಸೊಸೈಟಿ (ಃಖಖ) ಸಮಾಜದಲ್ಲಿ ವೈಜ್ಞಾನಿಕ ಮನೋಭಾವವನ್ನು ಉತ್ತೇಜಿಸಲು, ಮೂಢನಂಬಿಕೆಗಳನ್ನು ವಿರೋಧಿಸಲು ಮತ್ತು ವಿಜ್ಞಾನ ಪ್ರಸಾರಕ್ಕಾಗಿ ಕಾರ್ಯನಿರ್ವಹಿಸುವ ಸ್ವಯಂಸೇವಾ ಸಂಸ್ಥೆ. ದೇಶದಾದ್ಯಂತ ಶಾಖೆಗಳನ್ನು ಹೊಂದಿರುವ ಈ ಸಂಸ್ಥೆ ವಿದ್ಯಾರ್ಥಿಗಳಲ್ಲಿ ಮತ್ತು ಜನಸಾಮಾನ್ಯರಲ್ಲಿ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಲು ವೈಜ್ಞಾನಿಕ ಶಿಬಿರಗಳು, ಉಪನ್ಯಾಸಗಳು ಮತ್ತು ಪ್ರಾಯೋಗಿಕ ಚಟುವಟಿಕೆಗಳನ್ನು ಆಯೋಜಿಸುತ್ತದೆ. ಮುಖ್ಯ ಚಟುವಟಿಕೆಗಳಲ್ಲಿ ಮಕ್ಕಳ ವಿಜ್ಞಾನ ಶಿಬಿರಗಳು, ವೈಜ್ಞಾನಿಕ ಚಿಂತನೆ ಮತ್ತು ವಿಜ್ಞಾನ ಪ್ರಸಾರ ಪ್ರಮುಖವಾಗಿದೆ. ಶಿಕ್ಷಣದ ಕೊರತೆಯಿಂದ ಮೌಢ್ಯತೆ ಇನ್ನೂ ಜೀವಂತವಾಗಿದೆ. ಎಲ್ಲರಿಗೂ ವೈಜ್ಞಾನಿಕ ಅರಿವು ಮೂಡಿದಾಗ ಮಾತ್ರ ಸಮಾಜ ಮೌಢ್ಯತೆಯಿಂದ ಸಂಪೂರ್ಣವಾಗಿ ಹೊರಬರಲು ಸಾಧ್ಯ” ಎಂದರು.

ಅತಿಥಿಗಳಾಗಿ ಬಸವರಾಜ ತಹಶೀಲ್ದಾರ, ಉಪನ್ಯಾಸಕ ವಿರುಪಾಕ್ಷ ಪಂತರ, ಹಾಗೂ ಗ್ರಾಮ ಶಿಕ್ಷಣಪ್ರೇಮಿಗಳಾದ ಬಸವರಾಜ ಮಲ್ಲಪ್ಪ ಮೆಣಸಿನಕಾಯಿ, ಬೀಮಣ್ಣ ಕುರಿ, ಜಗದೀಶ ದಂಡಿನ ಉಪಸ್ಥಿತರಿದ್ದರು.

## ಹೋಟೆಲ್ ಮಾಲ್ ಗಳಲ್ಲಿ ಸಿಲಿಂಡರ್ ನೋ ಪ್ರಾಬ್ಲಮ್

# ಏಕೆ ಸಾರ್ವಜನಿಕ, ಗ್ರಾಹಕರಿಗೆ ಸಿಲೆಂಡರ್ ಸಿಗುತ್ತಿಲ್ಲ ಏಕೆ : ರಾಕೇಶ್

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ಕಂಪ್ಲಿ ತಾಲೂಕಿನ ಗ್ರಾಹಕರಿಗೆ ಸಿಗುತ್ತಿಲ್ಲ ಸಿಲಿಂಡರ್ ಗಳು ಆದರೆ ಹೋಟೆಲ್, ಮಾಲ್ ಗಳಿಗೆ ಪ್ರತಿನಿತ್ಯ ಸಿಲಿಂಡರ್ ನೋ ಪ್ರಾಬ್ಲಂ..! ಆದರೆ ಸಾರ್ವಜನಿಕರಿಗೆ ಏಕೆ ಸಿಗುತ್ತಿಲ್ಲ ಎಂದು ಸ್ಥಳೀಯ ಯುವಕ ರಾಕೇಶ್ ಆಕ್ರೋಶ ವ್ಯಕ್ತಪಡಿಸಿದ್ದಾನೆ.

ಈ ಸಂದರ್ಭದಲ್ಲಿ ರಾಕೇಶ್ ಮಾತನಾಡಿ ಕಂಪ್ಲಿ ತಾಲ್ಲೂಕಿನಲ್ಲಿರುವ ಪ್ರತಿಯಾಬ್ಬ ಗ್ರಾಹಕರು ಮತ್ತು ಸಾರ್ವಜನಿಕರು ಸಿಲೆಂಡರ್ ಗಾಗಿ ಪರದಾಡುತ್ತಿರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಆದರೆ ಹೋಟೆಲ್ಗಳಲ್ಲಿ, ಮಾಲ್ಗಳಲ್ಲಿ, ಹಾಗೂ ರೆಸ್ಟೋರೆಂಟ್ ಗಳಲ್ಲಿ ಸಿಲಿಂಡರ್ ಗಳು ಕೊರತೆ ಕಾಣುತ್ತಿಲ್ಲ..! ಏಕೆ ಎಂಬುವುದೇ ಯಕ್ಷಪ್ರಶ್ನೆಯಾಗಿದೆ ಕಾಡುತ್ತಿದೆ.

ಮುಂದಿನ ವಾರ ಯುಗಾದಿ ಮತ್ತು ರಂಜಾನ್ ಹಬ್ಬದ ಇದ್ದು, ಗ್ರಾಹಕರು ಮನೆಯಲ್ಲಿ ಸಿಹಿ ತಿಂಡಿ ತಿನಿಸುಗಳನ್ನು ತಯಾರಿಸಿ ಬಹಳಷ್ಟು ಸಂತೋಷದಿಂದ ಹಬ್ಬವನ್ನು ಆಚರಿಸುವ ಬದಲು ಸಿಲೆಂಡರ್ ಗಾಗಿ ಕಾಯುವುದೇ ಒಂದು ದೊಡ್ಡ ಹಬ್ಬವಾಗಿದೆ.

ಆದರೆ ಗ್ಯಾಸ್ ಮಾಲೀಕರು ಮತ್ತು ಗ್ಯಾಸ್ ಏಜೆನ್ಸಿಗಳು ಸಿಲಿಂಡರ್ ಕೊರತೆಗೆ ಸೂಕ್ತ ಕಾರಣ ಹೇಳದೆ ಗ್ರಾಹಕರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂಬುದು ನನ್ನ ಅಭಿಪ್ರಾಯವಾಗಿದೆ.

ಇಲ್ಲಿ ಅಚ್ಚರಿವಾದ ಸಂಗತಿ ಏನೆಂದರೆ, ಪ್ರತಿಯೊಂದು ಹೋಟೆಲ್ಗಳಲ್ಲಿ, ರೆಸ್ಟೋರೆಂಟ್ ಗಳಲ್ಲಿ, ಯಾವುದೇ ಸಿಲೆಂಡರ್ ಕೊರತೆ ಕಾಣುತ್ತಿಲ್ಲ.

ಪಾಪ ನಮ್ಮ ಗ್ರಾಹಕರು ಮಾತ್ರ ಪ್ರತಿದಿನ ಸಿಲಿಂಡರ್ ಗಾಗಿ ಪರದಾಡುವ ಪರಿಸ್ಥಿತಿ ಕಂಪ್ಲಿ ತಾಲೂಕಿನಲ್ಲಿ ದೊಡ್ಡ ಸಮಸ್ಯೆಯಾಗಿದೆ. ಸಾರ್ವಜನಿಕರು ಹಾಗೂ ಗ್ರಾಹಕರಿಗೆ ಪ್ರತಿನಿತ್ಯ ಸಿಲಿಂಡರ್ ಕೇಳಿದಾಗ 1500 ರಿಂದ 2,000 ರೂಪಾಯಿಗಳು ಕೇಳುತ್ತಿದ್ದಾರೆ ಎಂಬ ಆರೋಪವೂ ಇದೆ.

ಈ ಸಮಸ್ಯೆಗೆ ತಕ್ಕ ಪರಿಹಾರವನ್ನು ಹಾಗೂ ಸಾರ್ವಜನಿಕ ಸಮಸ್ಯೆಯನ್ನು ಆದಷ್ಟು ಬೇಗನೆ ಪರಿಹರಿಸಲು ಸೂಕ್ತ ಕ್ರಮಗಳನ್ನು ಕೈಗೊಂಡು ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

# ಉಪ ಚುನಾವಣೆ ಸಾರ್ವತ್ರಿಕ ಚುನಾವಣೆಗೆ ಶ್ರೀಕಾರ: ಶರಣು ತಳ್ಳಿಕೇರಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಹಿಂದೂ ವಿರೋಧಿ ಕಾಂಗ್ರೆಸ್ ಸರಕಾರವನ್ನು ಕಿತ್ತೊಗೆಯಲು ರಾಜ್ಯದ ಜನ ತುದಿಗಾಲ ಮೇಲೆ ನಿಂತಿದ್ದಾರೆ. 2028 ಸಾರ್ವತ್ರಿಕ ಚುನಾವಣೆಗೆ ಬಾಗಲಕೋಟ ಉಪ ಚುನಾವಣೆ ಶ್ರೀಕಾರ ಹಾಕಲಿದೆ ಎಂದು ಬಿಜೆಪಿ ರಾಜ್ಯ ಕಾರ್ಯದರ್ಶಿ ಹಾಗೂ ಚುನಾವಣಾ ಉಸ್ತುವಾರಿ ಶರಣು ತಳ್ಳಿಕೇರಿ ಹೇಳಿದರು. ಅವರು ನಗರದ ಬಿ.ವಿ.ವಿ.ಸಂಘದ ನೂತನ ಸಭಾಭವನದಲ್ಲಿ ಶುಕ್ರವಾರ ಭಾರತೀಯ ಜನತಾ ಪಾರ್ಟಿಯಿಂದ ನಡೆದ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣಾ ಪೂರ್ವಭಾವಿ ಕಾರ್ಯಾಗಾರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು, ಉಪ ಚುನಾವಣೆ ಗೆಲ್ಲುವ ಮೂಲಕ 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಸರಕಾರ ಬಂದೆ ಬರುತ್ತೆ ಎಂಬ ಸಂದೇಶವನ್ನು ಸಾರೋಣ. ಬಾಗಲಕೋಟೆ ಹಿಂದೂತ್ವದ ಗಟ್ಟಿ ನೆಲವಾಗಿದ್ದು, ಈ ಹಿಂದೂ ವಿರೋಧಿ ಸರಕಾರ ತನ್ನ ಹಗರಣ, ಆಡಳಿತ ವೈಫಲ್ಯ, ಅಭಿವೃದ್ಧಿಯ ಕಾರ್ಯಗಳೆ ಇಲ್ಲದಿರುವ ಕಾಂಗ್ರೆಸ್ ಸರಕಾರ ರಾಜ್ಯದ ಜನತಗೆ ಬೇಡವಾಗಿದೆ, ಬಾಗಲಕೋಟೆ ಅಭಿವೃದ್ಧಿ ಕಂಡಿ–ದ್ದು ಶಾಸಕರಾಗಿದ್ದ ಡಾ.ವೀರಣ್ಣ ಚರಂತಿಮಠ ಅವರ ಅವದಿಯಲ್ಲಿ, ಯಾರಿಂದ ಅಭಿವೃದ್ಧಿ ಸಾದ್ಯ ಎಂಬ ಸತ್ಯ ಬಾಗಲಕೋಟೆ ಜನತೆಗೆ ಗೊತ್ತಿದೆ ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅಧಿಕಾರದಿಂದ ಕೆಳಗೆ ಇಳಿಯುವ ಸಂದರ್ಭದಲ್ಲಿ ಅನುಕಂಪ ಪಡೆಯುವ ಸಲುವಾಗಿ ಕುರಿಕಾಯುವವರು ನೆನಪಾಗುತ್ತಾರೆ. ದೇವರಾಜ ಅರಸು ಅವರ ದಾಖಲೆಯನ್ನು ಮೀರಿಸಿರುವೆ ಎಂಬ ಅಹಂಕಾರದಲ್ಲಿರುವ ಅವರು ಎರಡು ಸಾರಿ ಮುಖ್ಯಮಂತ್ರಿಯಾದರೂ ಕುರಿಕಾಯುವವರಿಗೆ ಕೊಟ್ಟಿರುವ ಸಾಧನೆ ಶೂನ್ಯ. ರಾಜ್ಯದಲ್ಲಿ ಇಲ್ಲಿವರೆಗೂ ಆಕಸ್ಮಿಕ ಸಾವವನ್ನಪ್ಪಿದ 90 ಸಾವಿರ ಕುರಿಗಳಲ್ಲಿ ಬರಿ 30 ಸಾವಿರ ಕುರಿಗಳಿಗೆ ಪರಿಹಾರ ಕೊಟ್ಟಿದ್ದಾರೆ ಇನ್ನೂ 45ಕೋಟಿ ರೂ ಪರಿಹಾರ ಕೊಡುವಂತ ಕೆಲಸ ಸಿದ್ದರಾಮಯ್ಯನವರಿಂದ ಆಗಿಲ್ಲ, ಮೊದಲು ಕುರಿಕಾಯುವವರಿಗೆ ನ್ಯಾಯ ಕೊಡಿ ಎಂದ ಅವರು,



ರಾಜಕೀಯ ಪುನರ್ಜನ್ಮ ನೀಡಿದ ಬಾಗಲಕೋಟೆಗೆ ತಮ್ಮ ಕೊಡುಗೆ ಶೂನ್ಯವಾಗಿದೆ ಎಂದರು.

ಬೆಳಗಾವಿ ವಿಭಾಗದ ಪ್ರಭಾರಿ ಸಂಜಯ ಪಾಟೀಲ ಮಾತನಾಡಿ, ಬಾಗಲಕೋಟೆ ಉಪ ಚುನಾವಣೆ ಇದೊಂದು ಧರ್ಮ ಯುದ್ಧ, ಈ ಧರ್ಮಯುದ್ಧದಲ್ಲಿ ಗೆಲವು ಶತಸಿದ್ಧವಾಗಿದೆ.

ಹಿಂದೂಗಳಿಗಾಗಿ ಇರುವ ಏಕೈಕ ರಾಷ್ಟ್ರಭಾರತ, ಗರ್ವದಿಂದ ವಂದೇ ಮಾತರಂ ಹೇಳುವವರು ಬಿಜೆಪಿ ಕಾರ್ಯಕರ್ತರು ಮಾತ್ರ ಅದು ನಮ್ಮ ಹೆಮ್ಮೆ, ಬಿಜೆಪಿಯವರು ಮುಸ್ಲಿಂ ವಿರೋಧಿಗಳಲ್ಲ, 60 ವರ್ಷ ದೇಶವನ್ನಾಳಿದ ಕಾಂಗ್ರೆಸ್ ಪಕ್ಷ ಮುಸ್ಲಿಂ ಸಮುದಾಯವನ್ನು ಬರಿ ತನ್ನ ಓಟ ಬ್ಯಾಂಕ ಮಾಡಿಕೋಂಡ್ಡಿದ್ದಾರೆ ಎಂದು ಹೇಳಿದರು. ಬೈಲಹೊಂಗಲದ ಮಾಜಿ ಶಾಸಕ ವಿಶ್ವನಾಥ ಪಾಟೀಲ ಮಾತನಾಡಿ, ಕಾಂಗ್ರೆಸ್ ಸರಕಾರ ಅಭಿವೃದ್ಧಿ ಇಲ್ಲದ ಹಗರಣಗಳ ಸರಕಾರವಾಗಿದೆ ಎಂದರು.

ಚುನಾವಣಾ ಉಸ್ತುವಾರಿ ಅರುಣ ಶಹಾಪುರ ಮಾತನಾಡಿ, ಬಾಗಲಕೋಟೆ ಉಪ ಚುನಾವಣೆಯಲ್ಲಿ ನಾವು ಗೆದ್ದೆ ಗೆಲ್ಲುತ್ತೇವೆ, ಆ ಸಾಮರ್ಥ್ಯ ಬಿಜೆಪಿ ಕಾರ್ಯಕರ್ತರಿಗೆ ಇದೆ, ಬಾಗಲಕೋಟೆ ಸರ್ವಾಂಗೀಣ ಅಭಿವೃದ್ಧಿ ಕಾಣಲು ಬಿಜೆಪಿ ಸರಕಾರ ಹಾಗೂ ಶಾಸಕರಾಗಿದ್ದ ಡಾ. ವೀರಣ್ಣ ಚರಂತಿಮಠ ಅವರು ಕಾರಣ, ಬಾಗಲಕೋಟೆ ಜನತೆಗೆ ತಮ್ಮ ಸುರಕ್ಷತೆ ಹಾಗೂ ಅಭಿವೃದ್ಧಿಯ ಅರಿವು ಇದೆ, ಈಗಾಗಿ ಅವರು ಬಿಜೆಪಿಯನ್ನು ಖಂಡಿತ ಗೆಲ್ಲಿಸುತ್ತಾರೆ, 2028ರ ಚುನಾವಣೆಗೆ ಶ್ರೀಕಾರವೇ ಬಾಗಲಕೋಟೆ ಉಪಚುನಾವಣೆ ಎಂದರು.

ಕಾರ್ಯಾಗಾರದ ಅಧ್ಯಕ್ಷತೆಯನ್ನು ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ವಹಿಸಿದ್ದರು. ಕಿತ್ತೂರು ಮಾಜಿ ಶಾಸಕ ಮಹಾಂತೇಶ ದೊಡಗೌಡರ, ಡಾ.ಕೆ.ಬಸವರಾಜ ಕ್ಯಾವಟರ್, ಸುಭಾಸ ಪಾಟೀಲ. ಬಸವರಾಜ ಯಂಕಂಚಿ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೊಣ್ಣುರ, ನಗರ ಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಮಲ್ಲೇಶ ವೈಜಾಪುರ, ಕಲ್ಲಪ್ಪ ಭಗವತಿ, ಉಮೇಶ ಹಂಚಿನಾಳ, ಸೇರಿದಂತೆ ಅನೇಕರು ವೇದಿಕೆ ಮೇಲೆ ಇದ್ದರು.

ಕಾರ್ಯಾಗಾರದಲ್ಲಿ ಬೇರೆ ಬೇರೆ ಜಿಲ್ಲೆಗಳಿಂದ ಆಗಮಿಸಿದ ವಿಸ್ತಾರಕರು ಸೇರಿದಂತೆ 500ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು.



ಬಸವಕಲ್ಯಾಣ: ತಾಲೂಕಿನ ಮುಡಬಿ ಗ್ರಾಮದ ಚಂದ್ರಷಾ ಬಾಲಕುಂದೆ ಪರಿವಾರವತಿಯಿಂದ ಹಾರಕೂಡ ಸಂಸ್ಥಾನ ಹಿರೇಮಠದ ಪೀಠಾಧಿಪತಿಗಳಾದ ಪರಮಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರ 933ನೇ ತುಲಾಭಾರ ಕಾರ್ಯಕ್ರಮ ಜರುಗಿತು. ಈ ಸಂದರ್ಭದಲ್ಲಿ ಅನೇಕರು ಉಪಸ್ಥಿತರಿದ್ದರು.

## ಎಲ್ ಪಿ ಜಿ ಸಿಲಿಂಡರ್ ಅಭಾವ ನೀಗಿಸಲು ಕೇಂದ್ರಕ್ಕೆ ಒತ್ತಾಯ

**ಬೆಂಗಳೂರು:** ಎಲ್ ಪಿ ಜಿ ಅಭಾವವನ್ನು ನೀಗಿಸಲು ಹೊರದೇಶದಿಂದ



ಅನಿಲ ಪೂರೈಕೆಯಂತಹ ಪರ್ಯಾಯ ಮಾರ್ಗಕ್ಕೆ ಒತ್ತಾಯಿಸಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಬೆಂಗಳೂರಿನಲ್ಲಿ ಮಾಧ್ಯವ ುದವರೊಂದಿಗೆ ಮಾತನಾಡಿದರು. ಎಲ್ ಪಿ ಜಿ ಪೂರೈಕೆಯಲ್ಲಿ ವ್ಯತ್ಯಯವಾಗಿರುವ ಬಗ್ಗೆ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ, ವಿಧಾನಮಂಡಲದಲ್ಲಿ ಸರ್ಕಾರದ ವತಿಯಿಂದ ಈ ಬಗ್ಗೆ ಈಗಾಗಲೇ ಉತ್ತರ ನೀಡಲಾಗಿದೆ.. ಆಹಾರಕ್ಕಾಗಿ ಹೋಟೆಲ್ ಗಳ ಮೇಲೆ ಅವಲಂಬಿತರಾಗುವ ಜನಸಂಖ್ಯೆ ಸಾಕಷ್ಟಿದೆ. ಹೋಟೆಲ್ ವ್ಯವಸ್ಥೆ ಸ್ಥಗಿತಗೊಂಡರೆ, ಜನಜೀವನ ಅಸ್ತವ್ಯಸ್ಥವಾಗುತ್ತದೆ. ಕೇಂದ್ರ ಸಚಿವ ಹರದೀಪಸಿಂಗ ಪುರಿಯವರು ಎಲ್ ಪಿ ಜಿ ಪೂರೈಕೆಯಲ್ಲಿ ತೊಂದರೆಯಾಗದಂತೆ ನಿರ್ವಹಿಸುವ ಬಗ್ಗೆ ಭರವಸೆ ನೀಡಿದ್ದಾರೆ ಎಂದರು. ಕರ್ನಾಟಕದಲ್ಲಿ ಮಾತ್ರ ಎಲ್ ಪಿ ಜಿ ಪೂರೈಕೆ ದೊಡ್ಡ ಸಮಸ್ಯೆಯಾಗಿದೆ ಎಂದು ಬಿಜೆಪಿಯ ನಾಯಕರು ಟೀಕಿಸುತ್ತಿರುವುದಕ್ಕೆ ಪ್ರತಿಕ್ರಿಯೆ ನೀಡಿ, ರಾಜ್ಯ ಬಿಜೆಪಿಯವರು ಮಾತನಾಡುವ ಬದಲು, ಎಲ್ ಪಿ ಹೆಚ್ಚಿನ ಸರಬರಾಜಿಗೆ ಕ್ರಮ ವಹಿಸಲಿ ಎಂದು ತಿಳಿಸಿದರು.

## ರಂಜಾನ್ ಹಬ್ಬದ ನಿಮಿತ್ತ ಇಫ್ತಾರ್ ಕೂಟ



**ಬಸವಕಲ್ಯಾಣ:** ಮಹಮ್ಮದ್ ಫಹೀಮೂದ್ದೀನ್ ಅವರ ಅವಾಮ್ ಟೈಮ್ಸ್ ಸೋಶಿಯಲ್ ಮೀಡಿಯಾ ವತಿಯಿಂದ ಇಫ್ತಾರ್ ಕೂಟವನ್ನ ಆಯೋಜಿಸಲಾಯಿತು. ಈ ಸಂದರ್ಭದಲ್ಲಿ ಮೊಹಮ್ಮದ್ ಯೂಸುಫೂದ್ದೀನ್ ನಿಲಂಗೆ, ಪತ್ರಕರ್ತರಾದ ಗುರುನಾಥ ಗಡ್ಡೆ, ವೀರಶೆಟ್ಟಿ ಮಲಶೆಟ್ಟಿ, ನೈಮೂದಿನ ಚಾಬುಕ ಸವಾರ, ಅಧ್ಯಕ್ಷತೆ ಮುಜಾಹಿದ್ ಪಾಶಾ ಕುರೇಶಿ, ಡಾ. ಸಯ್ಯದ್ ಅಸದುಲ್ಲಾ ಮುಜಾಹಿದ್, ಖಲೀಲ್ ಅಹ್ಮದ್ ಗೊಬ್ರೆ, ಹಾಫಿಜ್ ಸಯ್ಯದ್ ಮೀರ ಫರ್ಖಂದ್ ಅಲಿ, ಆಕಾಶ ಖಂಡಾಳೆ, ಡಾ. ಶರಣಪ್ಪ ಗದಲೇಗಾಂವ, ನಾಗಪ್ಪಾ ನಿಣ್ಣೆ ಸೇರಿದಂತೆ ಅನೇಕರು ಸಾಮೂಹಿಕ ಇಫಾತಾರ ಕೂಟದಲ್ಲಿ ಉಪಾಹಾರ ಸೇವಿಸಿದ್ದರು.

## 34.82ಲಕ್ಷ ರೂ. ಮಾತ್ರ ರಿಕವರಿ

**ಯಾದಗಿರಿ:** ಕಳೆದ ಸಾಲಿನಲ್ಲಿ 1.96 ಕೋಟಿ ರೂ. ವಂಚನೆಯಲ್ಲಿ 34.82 ಲಕ್ಷ ರೂ. ಮಾತ್ರ ರಿಕವರಿ ಮಾಡುವಲ್ಲಿ <https://vijaykarnataka.com/news/karnataka/home-minister-dr-g-parameshwar-on-cyber-crime-in-karnataka/articleshow/129205475.cms> (ಸೆನ್) ಪೊಲೀಸರು ಯಶಸ್ವಿಯಾಗಿದ್ದಾರೆ. 2024 ನೇ ಸಾಲಿನಲ್ಲಿ 1.81 ಕೋಟಿ ರೂ. ವಂಚನೆ ಆಗಿರುವುದಕ್ಕೆ 19 <https://vijaykarnataka.com/news/udupi/mobile-users-beware-once-you-lose-money-you-cant-get-it-back-only-7-percent-of-the-money-was-recovered-in-522-cybercrime-cases-in-udupi/articleshow/128232874.cms> ದಾಖಲು ಮಾಡಿಕೊಂಡಿದ್ದ ಯಾದಗಿರಿ ಸೆನ್‌ಠಾಣೆಯ ಪೊಲೀಸರು 59.97 ಲಕ್ಷ ರೂ.ರಿಕವರಿ ಮಾಡುವಲ್ಲಿ ಸಫಲರಾಗಿದ್ದರು.ಆದರೆ, 1.21 ಕೋಟಿ ರೂ.ಮಾತ್ರ ರಿಕವರಿ ಮಾಡಲಾಗಲಿಲ್ಲ. 2025 ನೇ ಸಾಲಿನಲ್ಲಿಯೂ 22 ಸೈಬರ್‌ಕ್ರೈಂ ಪ್ರಕರಣಗಳು ವರದಿಯಾಗಿದೆ.

**34.82 ಲಕ್ಷ ರೂ.ಮಾತ್ರರಿಕವರಿ:** 1.96 ಕೋಟಿ ರೂ. ಕಳೆದುಕೊಂಡಿದ್ದರೆ 34.82 ಲಕ್ಷ ರೂ.ಮಾತ್ರ ರಿಕವರಿ ಮಾಡಲು ಸಾಧ್ಯವಾಗಿದೆ. ಉಳಿದ 1.61 ಕೋಟಿ ರಿಕವರಿ ಮಾಡಲು ಸಾಧ್ಯವಾಗಿಲ್ಲ. ಅದೇ ರೀತಿ 2026 ನೇ ಸಾಲಿನಲ್ಲಿ ಎರಡು ತಿಂಗಳ ಅವಧಿಯಲ್ಲಿ 3 ಸೈಬರ್‌ಕ್ರೈಂ ಪ್ರಕರಣಗಳು ವರದಿಯಾಗಿದೆ. 19.90 ಲಕ್ಷ ರೂ. ಕಳೆದುಕೊಂಡಿದ್ದರೆ 7.25 ಲಕ್ಷ ರೂ. ರಿಕವರಿ ಮಾಡಲಾಗಿದೆ. 12.65 ಲಕ್ಷ ರೂ. ರಿಕವರಿ ಮಾಡಲು ಸಾಧ್ಯವಾಗಿಲ್ಲ. ಸೈಬರ್‌ಕ್ರೈಂ ಬಗ್ಗೆ ಸಾಮಾಜಿಕ ಜಾಲತಾಣಗಳು ಸೇರಿ ಎಷ್ಟೆಲ್ಲ ಕಡೆಗೆ ಸರಕಾರಗಳಿಂದ ಜಾಗೃತಿ ಮೂಡಿಸುತ್ತಿದ್ದರೂ, ಸಾರ್ವಜನಿಕರು ಹಣ ಕಳೆದುಕೊಳ್ಳುವುದು ಮಾತ್ರ ಹೆಚ್ಚುತ್ತಲೇ ಇದೆ. ಆದ್ದರಿಂದ, ಸೈಬರ್‌ಕ್ರೈಂ ವಂಚನೆಯಿಂದ ಜನರು ಮೋಸ ಹೋಗುವುದು ತಡೆಗಟ್ಟುವುದು ಪೊಲೀಸ್‌ಇಲಾಖೆಗೆ ಸವಾಲಿನ ಕೆಲಸವಾಗಿದೆ.

## ಕಲ್ಲಿನಾಥೇಶ್ವರದಲ್ಲಿ ಅಯ್ಯಾಚಾರ ಕಾರ್ಯಕ್ರಮ

**ಯಲಬುರ್ಗಾ:** ತಾಲೂಕಿನ ಕಲ್ಲೂರ ಗ್ರಾಮದಲ್ಲಿ ಶ್ರೀ ವೀರಮಹೇಶ್ವರ ಜಂಗಮ ಕ್ಷೇಮಾಭಿವೃದ್ಧಿ ಸಂಘ ಹಾಗು ಸರ್ವ ಧರ್ಮದವರ ಸಹಕಾರದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಮೂರ್ತಿ ಪ್ರತಿಷ್ಠಾನೆ ಹಾಗು ಜಯಂತೋತ್ಸವ ಅಂಗವಾಗಿ 5 ದಿನಗಳವರೆಗೆ, ಸಂಜೆಯ ಸಮಯದಲ್ಲಿ ಆದ್ಯಾತ್ಮಿಕ ಪ್ರವಚನ ಶಿರಕೋಳದ ಗುರುಸಿದ್ದೇಶ್ವರ ಸ್ವಾಮೀಜಿ ಅವರಿಂದ ಜರುಗಿತು. ಮಾ.15 ರಂದು ಶ್ರೀ ಕಲ್ಲಿನಾಥೇಶ್ವರ ದೇವಸ್ಥಾನದಲ್ಲಿ ಜಂಗಮ ವಟುಗಳಿಗೆ ಅಯ್ಯಾಚಾರ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.ಯಲಬುರ್ಗಾದ ಸಿದ್ದರಾಮೇಶ್ವರ ಸ್ವಾಮೀಜಿ, ಬಸವಲಿಂಗೇಶ್ವರ ಸ್ವಾಮೀಜಿ, ಕುಕನೂರಿನ ಡಾ.ಮಹಾದೇವ ಸ್ವಾಮೀಜಿ, ಕಲ್ಲೂರಿನ ವೀರಯ್ಯಜ್ಜನವರು ಹಿರೇಮಠದ ಪೂಜ್ಯರು ಸೇರಿದಂತೆ ಸುತ್ತಮುತ್ತಲಿನ ಪೂಜ್ಯರು,ಕಲಾವಿದರು,ವಿವಿಧ ಪಕ್ಷದ ಮುಖಂಡರು, ಗ್ರಾಮ ಪಂಚಾಯತಿಯ ಸರ್ವ ಸದಸ್ಯರು, ಹಾಗು ಜಂಗಮ ಸಮಾಜದ ಅದ್ಯಕ್ಷ ಹಾಗು ಸರ್ವ ಸದಸ್ಯರು, ಹಿರಿಯರು ಭಾಗವಹಿಸಿದ್ದರು.

# ಪತ್ರಿಕಾ ವರದಿಯಿಂದ ಎಚ್ಚೆತ್ತ ಆಡಳಿತ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಬಳ್ಳಾರಿ ಜಿಲ್ಲೆ ಕಂಪ್ಲಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿನ 5 ನೇ ಮತ್ತು 18 ನೇ ವಾರ್ಡಿನಲ್ಲಿರುವ ಕುಡಿಯುವ ನೀರು ಮತ್ತು ಇತರೆ ಬಳಕೆಗೆ ನೀರಿನ ಟ್ಯಾಂಕನ್ನು ಈ ಹಿಂದೆಯೇ ಅಳವಡಿಸಿದ್ದು ಅದು ಸೋರುತ್ತಿದೆ ಎಂಬ ನೆಪವನ್ನು ಮುಂದಿಟ್ಟುಕೊಂಡು ಪ್ಲಾಸ್ಟಿಂಗ್ ಮಾಡುವ ಬದಲು ಹೊಸ ಸಿಮೆಂಟ್ ಟ್ಯಾಂಕನ್ನು ಅಳವಡಿಸಲು ಅನುಮೋದನೆ ಪಡೆದು ಎರಡು ಸಿಮೆಂಟ್ ಟ್ಯಾಂಕನ್ನು ಬದಲಾವಣೆ ಮಾಡಲು ಒಂದು ಲಕ್ಷ ಕ್ರಿಯಾ ಯೋಜನೆಯನ್ನು ತಯಾರಿಸಿ ಹೊಸಪೇಟೆ ಗುತ್ತಿಗೆದಾರನಿಗೆ ಕಾಮಗಾರಿ ಮಾಡಲು ನಿಡಿದ ದೂರಿನ ಮೇರೆಗೆ ಕ್ರಿಯಾಯೋಜನೆ ಪ್ರಕಾರ 5 ಮತ್ತು 18ನೇ ವಾರ್ಡಿನ ಟ್ಯಾಂಕುಗಳನ್ನು ಬದಲಾಯಿಸಿದ್ದೇನೆ ತ್ಯಾಜ್ಯ ಇನ್ನಿತರೆ ವಸ್ತುಗಳನ್ನು ತೆಗೆಯಲು ಮತ್ತೊಮ್ಮೆ ಕ್ರಿಯಾ ಯೋಜನೆ ತಯಾರಿಸಿ ಹಣ ನೀಡಿದ ನಂತರ ತೆಗೆಯುತ್ತೇನೆ ಎಂದು ಕಡ ಖಂಡಿತವಾಗಿ ಹೇಳಿದ ಈ ಗುತ್ತಿಗೆದಾರನ ಮೇಲೆ ಕಾನೂನು ಕ್ರಮ ಜರುಗಿಸಿದೆ.





ಆತನ ಪರವಾನಿಗೆಯನ್ನು ಕಪ್ಪು ಪೆಟ್ಟಿಗೆ ಸೇರಿಸಿ ಎಂದು ದಕ್ಷತೆಗೆ ಹೆಸರಾದ ಕಂಪ್ಲಿ ಪುರಸಭೆಯ ಆಡಳಿತ ಅಧಿಕಾರಿ ಮತ್ತು ಸಹಾಯಕ ಆಯುಕ್ತರು ಬಳ್ಳಾರಿ ತಮಗೆ ವೇದಿಕೆಯ ರಾಜ್ಯಾಧ್ಯಕ್ಷರಾದ ಚೆನ್ನಯ್ಯ ವಸ್ತದ್ ರಾಜ್ಯ ಕಾರ್ಯಧ್ಯಕ್ಷರಾದ ಟಿ ಎಚ್ ರಾಜಕುಮಾರ್ ಪ್ರಧಾನ ಕಾರ್ಯದರ್ಶಿಯಾದ ರಾಮ ಕೃಷ್ಣ ಸಂಘಟನಾ ಕಾರ್ಯದರ್ಶಿಯಾದ ಮನೋಜ್ ರಾಜ್ಯ ಪದಾಧಿಕಾರಿಗಳು ಮತ್ತು ಜಿಲ್ಲಾ ಹಾಗೂ ತಾಲೂಕು ಪದಾಧಿಕಾರಿಗಳ ಜೊತೆಗೆ 5 ಮತ್ತು 18 ನೇ ವಾರ್ಡಿನ ಸಾರ್ವಜನಿಕರ ಪರವಾಗಿ ದೂರಿನ ಮುಖಾಂತರ ಮನವಿಯನ್ನು ಮಲ್ಲಮ್ಮನ ನುಡಿ ವರದಿ ಮೂಲಕ ದಿನಾಂಕ 7–03–26 ರಂದು ವರದಿ ಮೂಲಕ ಪ್ರಕಟಣೆ ಮೂಲಕ ಇಂದು ಒಂದು ವಾರದಲ್ಲಿ ಅಧಿಕಾರಿಗಳು ಎಚ್ಚೆತ್ತುಕೊಂಡು ಸೂಕ್ತ ಕ್ರಮ ಕೈಗೊಂಡು ಫಲಶ್ರುತಿ ಗೊಂಡಿರುತ್ತದೆ.

ಈ ಸಂದರ್ಭದಲ್ಲಿ ಸಾಮಾಜ ಸೇವೆ ಕಾರ್ಯಕರ್ತರ ವೇದಿಕೆ ಕಂಪ್ಲಿ ತಾಲೂಕು ಅಧ್ಯಕ್ಷ ಹೆಚ್ ಮರಿಯಪ್ಪ ಪ್ರಧಾನ ಕಾರ್ಯದರ್ಶಿ ಗೋಪಾಲ್ ಉಪಾಧ್ಯಕ್ಷ ರಿಯಾಜ್ ಅಹಮದ್ ಉಪಸ್ಥಿತರಿದ್ದರು.



ಮಲ್ಲಮ್ಮ ನುಡಿ
ಸಂಪಾದಕರು: ರಮೇಶ ರೆಡ್ಡಿ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
07 Mar 2026 - Page 6

ಗುತ್ತಿಗೆದಾರರ ಕೈಗೊಂಬೆಯಾದ ಕೆಲವು ಅಧಿಕಾರಿಗಳು: ಚೆನ್ನಯ್ಯ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ

ಬಳ್ಳಾರಿ ಜಿಲ್ಲೆ ಕಂಪ್ಲಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿನ 5 ನೇ ಮತ್ತು 18 ನೇ ವಾರ್ಡಿನಲ್ಲಿರುವ ಕುಡಿಯುವ ನೀರು ಮತ್ತು ಇತರೆ ಬಳಕೆಗೆ ನೀರಿನ ಟ್ಯಾಂಕನ್ನು ಈ ಹಿಂದೆಯೇ ಅಳವಡಿಸಿದ್ದು ಅದು

## ಬಿಸಿಲನಾಡಿಗೆ ತಂಪೆರೆವ ಧಾಮಕ್ಕೆ ಚಾಲನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಜಿಲ್ಲೆಯ ಚಿಂಚೋಳಿ ಅರಣ್ಯಧಾಮದ ವಿವಿಧ ಪ್ರವಾಸೋದ್ಯಮ ಉತ್ತೇಜನ ಕಾರ್ಯಕ್ರಮಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು.

ಚಿಂಚೋಳಿ ವನ್ಯಜೀವಿ ಅಭಯಾರಣ್ಯವು ಕಲ್ಯಾಣ ಕರ್ನಾಟಕಕ್ಕೆ ಬಿಸಿಲ ನಾಡಲ್ಲೊಂದು ತಂಪೆರೆವ ಧಾಮ ಎನಿಸಿಕೊಳ್ಳುತ್ತದೆ. ಪರಿಸರ ಸಮತೋಲನವನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿಸುವ ಚಿಂಚೋಳಿ ಅಭಯಾರಣ್ಯವು ವಿಶಿಷ್ಠ ನೈಸರ್ಗಿಕ ಸಂಪತ್ತನ್ನು ಹೊಂದಿದೆ, ಚಿರತೆಗಳು, ಕಾಡು ನಾಯಿಗಳು, ನೀಲಗಾಯ್, ಚುಕ್ಕೆ ಜಿಂಕೆಗಳು, ಬ್ಲ್ಯಾಕ್‌ಬಕ್ಸ್ ಇತ್ಯಾದಿ ಪ್ರಾಣಿಗಳು ಇಲ್ಲಿನ ನಿಸರ್ಗದ ವಾರಸುದಾರರು. ಚಂದ್ರಂಪಳ್ಳಿ ಅಣೆಕಟ್ಟು, ಮಾಣಿಕ್‌ಪುರ ಜಲಪಾತ ಮತ್ತು ಅನೇಕ ಸುಂದರವಾದ ಸ್ಥಳಗಳು ಈ ಪ್ರದೇಶದ ರಮಣೀಯತೆಯನ್ನು ಹೆಚ್ಚಿಸುತ್ತವೆ ಎಂದರು.



ಕರ್ನಾಟಕ, ತೆಲಂಗಾಣ, ಆಂಧ್ರ ಪ್ರದೇಶಗಳಿಂದ ಸಾವಿರಾರು ಪ್ರವಾಸಿಗರನ್ನು ಆಕರ್ಷಿಸುವ ಈ ಪ್ರದೇಶವು ಪರಿಸರ ಪ್ರವಾಸೋದ್ಯಮಕ್ಕೆ ಕೊಡುಗೆ ನೀಡುವ ಸಾಮರ್ಥ್ಯ ಹೊಂದಿದೆ.ಪ್ರವಾಸೋದ್ಯಮವನ್ನು ಉತ್ತೇಜಿಸುವ ಮೂಲಕ ಸ್ಥಳೀಯ ಆರ್ಥಿಕತೆಗೆ ಬಲ ತುಂಬುವ ನಿಟ್ಟಿನಲ್ಲಿ ನಮ್ಮ ಸರ್ಕಾರವು ಹಲವು ಕ್ರಿಯಾಶೀಲ ಯೋಜನೆಯನ್ನು ರೂಪಿಸಿದೆ, ಕಳೆದ ವರ್ಷ ರೂಪಿಸಿದ್ದ ನೇಚರ್ ಟ್ರೆಕ್ ಕಾರ್ಯಕ್ರಮದಲ್ಲಿ ಯಶಸ್ವಿಯಾಗಿ ಸಾವಿರಾರು ಜನರು ಚಾರಣ ಮಾಡಿದ್ದು ಖುಷಿಯ ವಿಚಾರ ಎಂದರು.

## ಕೇಕ್ ಕತ್ತರಿಸಿ ಮಹಿಳೆಯರ ಸಂಭ್ರಮ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ನಾಗವಾಡ ಗ್ರಾಮದಲ್ಲಿ ಸ್ವಸಹಾಯ ಸಂಘದ ಮಹಿಳೆಯರು ಸೇರಿಕೊಂಡು ಕೇಕ್ ಕತ್ತರಿಸಿ ಸಂಭ್ರಮದಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಿದರು.

ಈ ಕಾರ್ಯಕ್ರಮವನ್ನು ಉದ್ದೇಶಿಸಿ ಸ್ವಸಹಾಯ ಸಂಘಗಳಿಂದ ಆಗುವ ಅನುಕೂಲಗಳ ಬಗ್ಗೆ ಹಾಗೂ ಮಹಿಳೆಯರ ಹಕ್ಕುಗಳ ಬಗ್ಗೆ ಶ್ರೀಮತಿ ಹೇಮಾ ಭಿ ದಳವಾಯಿ ಅವರು ಮಾತಾಡಿದರು.

ಈ ಸಭೆಯಲ್ಲಿ ಶ್ರೀ ಲಕ್ಕಮ್ಮ ದೇವಿ ಮಹಿಳಾ SHG ಸೇವಾಲಾಲ್ ಮಹಿಳಾ SHG ಹಾಗೂ ಶ್ರೀ ಕನಕದಾಸ SHG ಸಂಘದ ಸದಸ್ಯರು, ಸಂಜೀವಿನಿ ಯೋಜನೆಯ ಮಹಿಳಾ ಒಕ್ಕೂಟದ ಸಿಬ್ಬಂದಿಗಳಾದ ಚೆನ್ನಮ್ಮ ದೊಡಮನಿ, ದಾನಮ್ಮ ಅಂಗಡಿ, ಶ್ರೀದೇವಿ ತೋಟದ,ರೇಣುಕಾ ಕುಬಕಡ್ಡಿ ಇನ್ನೂ ಮುಂತಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



# ಪರಿಶಿಷ್ಟ ಬಂಧುಗಳಿಗೆ ಬೇಕು ಸಾಮಾಜಿಕ ನ್ಯಾಯ

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆಯ 17 ನೇ ಬಜೆಟ್ ಮಂಡಿಸಿದ್ದು ಅದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸಾಮಾಜಿಕ ನ್ಯಾಯ ವದಗಿಸುವ ಕೆಲಸ ಮಾಡಿದ್ದಾರೆ ಎಂದು ರಾಜ್ಯ ಅಧ್ಯಕ್ಷ ಡಿ. ಶಿವಶಂಕರ ಹೇಳಿದರು.

ನಗರದ ಡಾ. ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು

ಕಾಂಗ್ರೆಸ್ ಪಕ್ಷದ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿರುವಂತೆ 7 ಲಕ್ಷ 75 ಸಾವಿರಕ್ಕೂ ಅಧಿಕ ವಾಗಿದ್ದರೂ ಭರ್ತಿ ಮಾಡಿರುವುದು 4 ಲಕ್ಷ ದಷ್ಟು. ಇನ್ನೂ ಎರಡೂವರೆ ಲಕ್ಷ ಹುದ್ದೆಗಳು ನೇಮಕಾತಿ ಆಗಿಲ್ಲ. ಓಪಿಎಸ್ ಬರಬೇಕು ಸರ್ಕಾರಿ ನೌಕರರ ನಿಶ್ಚಿತ ಪಿಂಚಣಿ ಪಡೆಯುವ ವ್ಯವಸ್ಥೆ ಜಾರಿಯಾಗಬೇಕು. ಬ್ಯಾಕ್ ಲಾಗ್ ಹುದ್ದೆಗಳು ಕೂಡಲೇ ಭರ್ತಿ ಆಗಬೇಕು. ಖಾಲಿ ಇರುವ ಸರ್ಕಾರಿ ಹುದ್ದೆಗಳನ್ನು ವೇಗವಾಗಿ ಭರ್ತಿ ಮಾಡಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.



ಜನರಲ್ಲಿ ದೇಶ ಭಕ್ತಿ ಬರಬೇಕು. ಇದು ಅಂಬೇಡ್ಕರ್ ಅವರು ಪ್ರೀತಿಯ ಭಾರತವಾಗಬೇಕಿದೆ. ಮುಂದಿನ ಪೀಳಿಗೆಗೆ ಸಂವಿಧಾನ ಉಳಿಸಿ ಎನ್ನುವ ಜಾಗೃತಿ ಮೂಡಿಸುವ ಕಾರ್ಯ ಈ ಸಮಾವೇಶದಲ್ಲಿ ನಡೆಯಲಿದೆ. ಖಾಸಗಿ ಕ್ಷೇತ್ರದಲ್ಲಿಯೂ ಮೀಸಲಾತಿ ಕೊಡಬೇಕು. ದೇಶದಲ್ಲಿ ಎಲ್ಲ ಜಾತಿಗಳು ಮೀಸಲಾತಿ ಪಡೆದುಕೊಳ್ಳುತ್ತಿವೆ. ಇಂದು ಒಳ ಮೀಸಲಾತಿ ಚರ್ಚೆ ಆಗುತ್ತಿದೆ. ಜನಸಂಖ್ಯೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹೆಚ್ಚಾಗಬೇಕು. ಒಳ ಮೀಸಲಾತಿ ನೀಡುವುದರಿಂದ ಕೆಳ ಸಮುದಾಯಗಳನ್ನು ಒಟ್ಟು ಗೂಡಿಸುವ ಕೆಲಸ ಮಾಡಬೇಕಿದೆ. ಆದರೆ ಎಲ್ಲೋ ಒಂದೂ ಕಡೆ ಜಾತಿ ವಿಷ ಬೀಜ ಧರ್ಮದ ವಿಷ ಬೀಜ ಬಿತ್ತುವ ಕೆಲಸ ಆಗಬಾರದು ಎಂದು ಹೇಳಿದರು.

ಏಪ್ರಿಲ್ 14 ಕ್ಕೆ ಅಂಬೇಡ್ಕರ್ ಜಯಂತಿ ಆಚರಿಸುತ್ತಿರುವ ನಮಗೆ ಅಂದು ಸರ್ಕಾರಿ ರಜೆ ನೀಡಬೇಕು. ರಾಮನವಮಿ, ರಾಷ್ಟ್ರೀಯ ಹಬ್ಬಗಳಿಗೆ ಸಿಗುವ ಮಹತ್ವ ಅಂಬೇಡ್ಕರ್ ಜಯಂತಿಗೂ ದೊರೆಯಬೇಕು ಎಂದರು. ಈ ಸಂದರ್ಭದಲ್ಲಿ ಬಿ. ಎಚ್.ನಾಡಗಿರಿ, ಡಾ. ಸೂರ್ಯಕಾಂತ ಹೊಸಮನಿ, ಮುದ್ದಣ್ಣ ಭೀಮನಗರ, ಎಸ್ ಎಂ ಡೋಣಿ, ರವಿ ಯಲಡಗಿ, ವಿಜಯಾನಂದ್ ಮುದ್ದೇಬಿಹಾಳ್, ನಿಜಣ್ಣ ಮೇಲಿನಕೇರಿ, ಜಿ ಎಂ ಛಲವಾದಿ, ಎಚ್ ಎಲ್ ಮಾಶ್ಯಾಳ, ಚಂದ್ರು ಕೋಣೆಗೋಳ, ಪುಷ್ಪಾ ಹಲಗಣಿ ಮತ್ತಿತರರು ಇದ್ದರು.

# ಸಮಾಜಮುಖಿ ಚಳವಳಿಯ ರೂವಾರಿ ವಚನ



**ಧರ್ಮ–ಮರ್ಮ**

● ಡಾ.ಎಂ.ಮಹ್ಮದ್ ಬಾಷ ಗೂಳ್ಯಂ
ಪ್ರಧಾನ ಸಂಪಾದಕ, ಬೆಂಗಳೂರು

ವಚನ ಸಾಹಿತ್ಯವು ಕನ್ನಡದ ಲಯಬದ್ಧ ಬರವಣಿಗೆಯ ಪ್ರಕಾರ. ಪಂಡಿತ ಮಂಡಳಿಯ ಭೂಯಿಷ್ಟ ಪ್ರೌಢಭಾಷೆಗೆ ಬದಲಾಗಿ ಶರಣರು ಜನರಾಡುವ ಜನಪದ ಭಾಷೆ ಬಳಸಿದ್ದು ವಿಶೇಷ. 11ನೇ ಶತಮಾನದ ಉತ್ತರಾರ್ಧದಲ್ಲಿ ಉದಯಿಸಿ 12ನೇ ಶತಮಾನದಲ್ಲಿ ಶರಣ ಚಳವಳಿಯ (ಬಸವಣ್ಣನವರ ಆಂದೋಲನ) ಭಾಗವಾಗಿ ಬೆಳೆಯಿತು. 'ವಚನ' ಎಂದರೆ 'ಹೇಳಿದ್ದು' ಅಥವಾ 'ಪ್ರಮಾಣ', 'ಕೊಟ್ಟಮಾತು' ಎಂದರ್ಥ. ಇದು ಸಾಹಿತ್ಯ ಪರಿಭಾಷೆಯ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರದ ಕಾವ್ಯ. ಹಾಡಿದರೆ ಹಾಡಾಗುವ, ಓದಿದರೆ ಗದ್ಯವಾಗುವ ಕನ್ನಡದ ವಿಶೇಷ ಕಾವ್ಯ ಬಗೆ. ವಚನ ಸಾಹಿತ್ಯವು ತನ್ನ ಕಾಲದಲ್ಲಿನ ಜನರ ಮನೋಭಿವ್ಯಕ್ತಿಗೆ ಸಂಗಾತಿಯಾಗಿ–ತ್ತು. ಈ ಸರಳ ಗದ್ಯ ಪದ್ಯಗಳು ಸಾಮಾಜಿಕ ಸಮಸ್ಯೆ, ಅಸಮಾನತೆಯ ವಿರುದ್ಧದ ದನಿಯಾಗಿ, ವೈಯಕ್ತಿಕ ಭಕ್ತಿ, ಜಾತಿ ತಾರತಮ್ಯವನ್ನು ಖಂಡಿಸುತ್ತವೆ. ಇಂತಹ ವಿಶಿಷ್ಟ ಜನಪರ ವಚನ ಸಾಹಿತ್ಯದ ಆಂದೋಲನವು ಆದ್ಯ ವಚನಕಾರ ದೇವರ ದಾಸಿಮಯ್ಯನಿಂದ ಪ್ರಾರಂಭವಾಗಿ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಪ್ರಭು ಅವರಂತಹ ಅಸಂಖ್ಯ ಶರಣರಿಂದ ಸಮೃದ್ಧವಾಗಿ ಬೆಳೆದು ನಾಡಿನಗಲ ವಿಕಸನ ಗೊಂಡಿದ್ದೇ ಒಂದು ರೋಚಕ ಚರಿತ್ರೆ.

**ಶರಣರ ವಚನ ಮಹತ್ವ ಸೂಫಿಸಂ ತತ್ತ್ವ**



ಸಮಾಜದ ಎಲ್ಲಾ ಜಾತಿಯವರೂ ವಚನಗಳನ್ನು ಮುಖ್ಯ ಮಾಧ್ಯಮವನ್ನಾಗಿ ಮಾಡಿಕೊಂಡು, ತಮ್ಮ ಅನುಭವಗಳನ್ನು ಹೇಳಿಕೊಳ್ಳತೊಡಗಿದ್ದರಿಂದ ವಚನ ಸಾಹಿತ್ಯ ಒಂದು ಚಳವಳಿಯೂ ಆಯಿತು. ಬಂಡಾಯ ಸಾಹಿತ್ಯಕ್ಕಿಂತ ಮೊದಲು ಕನ್ನಡ ನಾಡಿನಲ್ಲಿ ವಚನವು ಒಂದು ಮುಖ್ಯ ಆಂದೋಲನವಾಗಿತ್ತು. ವಚನಗಳು ಅತ್ಯಂತ ಸರಳ, ನೇರವಾಗಿ ದೇಸಿಯ ಸೊಗಡು, ಸೊಬಗಿನಿಂದ ಕೂಡಿವೆ. ಹಲವಾರು ಕವಿಗಳು, ಮಠಾಧೀಶರು ಲಿಂಗಾಯತ ಸಿದ್ಧಾಂತವನ್ನು ಅಳವಡಿಸಿ ಸಾಹಿತ್ಯ ರಚಿಸಿದ್ದಾರೆ. ಇಡೀ ಲಿಂಗಾಯತ ಸಾಹಿತ್ಯದಲ್ಲಿ ಮುಖ್ಯ ಮತ್ತು ಅಪರೂಪದ ಅಭಿವ್ಯಕ್ತಿಯೆಂದರೆ ಅದು ವಚನ ಸಾಹಿತ್ಯ. ಅದು ಸ್ಥಾವರ ಸಮಾಜವನ್ನು ತಿರಸ್ಕರಿಸಿ ಜಂಗಮ ಸಮಾಜವನ್ನು ನಂಬಿದ ಬಹಳ ದೊಡ್ಡ ಮಾನವೀಯ ಮೌಲ್ಯ. ಕಾಯಕ, ದಾಸೋಹಗಳ ಮೂಲಕ ಸಮಾಜೋತ್ಪನ್ನಗಳ ಸಮಪಾಲು ಸಿದ್ಧಾಂತವನ್ನು ಪ್ರತಿಪಾದಿಸುವ ಈ ಚಳವಳಿ ಭಾರತೀಯ ಸಂಸ್ಕೃತಿಯಲ್ಲೇ ಅತಿ ವಿರಳ, ವಿಶಿಷ್ಟ.

ವಚನ ಸಾಹಿತ್ಯದ ಶ್ರೀಮಂತಿಕೆಗೆ ನೂರಾರು ಜನ ಶರಣರು ಶ್ರಮಿಸಿದ್ದಾರೆ. ತಮ್ಮ ವಚನಗಳಲ್ಲಿ ತಮ್ಮದೇ ಆದ ಅಂಕಿತನಾಮಗಳನ್ನು ಬಳಸಿದ್ದಾರೆ. ದೇವರ ದಾಸಿಮಯ್ಯ 'ರಾಮನಾಥ' ಎಂದರೆ, ಅಕ್ಕಮಹಾದೇವಿಯು 'ಚೆನ್ನ ಮಲ್ಲಿಕಾರ್ಜುನ', ಬಸವಣ್ಣನವರು 'ಕೂಡಲ ಸಂಗಮದೇವ' ಎಂದು ಬಳಸಿದ್ದಾರೆ. ಮಾತ್ರವಲ್ಲ, ಅಲ್ಲಮ ಪ್ರಭು, ಅಂಬಿಗರ ಚೌಡಯ್ಯ, ಮಾದಾರ ಚೆನ್ನಯ್ಯ, ಸೂಳೆ ಸಂಕವ್ವೆ, ಏಕಾಂತ ರಾಮಯ್ಯ, ಹಡಪದ ಅಪ್ಪಣ್ಣ, ಒಕ್ಕಲು ಮಾದಯ್ಯ, ಮಡಿವಾಳ ಮಾಚಯ್ಯ,ಆಯ್ದಕ್ಕಿ ಲಕ್ಕಮ, ಹೆಂಡದ ಮಾರಯ್ಯ, ಅಂಗಸೋಂಕಿನ ಲಿಂಗತಂದೆ, ಅಂಬಿಗರ ಚೌಡಯ್ಯ, ಅಕ್ಕಮಹಾದೇವಿ, ಅಕ್ಕಮ್ಮ, ಅಖಂಡ ಮಂಡಲೇಶ್ವರ, ಆಯ್ದಕ್ಕಿ ಲಕ್ಕಮ್ಮ, ಆದಯ್ಯ, ಆನಂದ ಸಿದ್ಧೇಶ್ವರ, ಆನಂದಯ್ಯ, ಇಮ್ಮಡಿ ಮುರಿಘಾ ಗುರುಸಿದ್ಧ ಗುರುಸಿದ್ಧಸ್ವಾಮಿ, ಈಶ್ವರೀಯ ವರದ ಚೆನ್ನರಾಮ, ಉಗ್ಘಡಿಸುವ ಗಬ್ಬಿದೇವಯ್ಯ, ಉರಿಲಿಂಗದೇವ, ಉರಿಲಿಂಗಪೆದ್ದಿ, ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಉಪ್ಪರಗುಡಿಯ ಸೋಮಿದೇವಯ್ಯ, ಉಳಿಯುಮೇಶ್ವರ ಚಿಕ್ಕಣ್ಣ, ಎಚ್ಚರಿಕೆ ಕಾಯಕದ ಮುಕ್ತನಾಥಯ್ಯ, ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಎಲೆಗಾರ ಕಾಮಣ್ಣ, ಏಕಾಂತ ವೀರಸೊಡ್ಡಳ, ಏಕಾಂತರಾಮಿತಂದೆ, ಏಕೋರಾಮೇಶ್ವರ ಲಿಂಗ, ಏಲೇಶ್ವರ ಕೇತಯ್ಯ, ಒಕ್ಕಲಿಗ ಮುದ್ದಣ್ಣ ಮುಂತಾದ ಪ್ರಸಿದ್ಧ ಅನೇಕ ಶರಣರು ವಚನ ಸಾಹಿತ್ಯದ ಸಿರಿ ಬೆಳಗಿ ಕನ್ನಡ ನೆಲದಲ್ಲಿ ದೇಶೀಯತೆ ಬೀಜ ಬಿತ್ತಿ ಸಮನ್ವಯ ಸಮಸಮಾಜಕ್ಕೆ ನಾಂದಿ ಹಾಡಿದ್ದಾರೆ.

–ಮುಂದುವರೆಯುವುದು...

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)